ತಿಳಿನಗೆಯ ಕಾರಂಜಿ

ಸೆಪ್ಟೆಂಬರ್ 2026




ಬಿಡಿ ಪ್ರತಿ: ರೂ. 10/–

NANKI
CONVENTION HALL

*Premium*

# WEDDING VENUE

Elevate your events at
Nanki Convention Hall.

A stylish and comfortable venue perfect for Weddings, Receptions, Conferences.


MAIN HALL AC 6000 SQFT



PURE VEG. DINING 5000 SQFT


LAWN 13000 SQFT

## Accessibility

- 1 km from Bus Stand
- 5 km from Airport
- 4 km from Railway Station

Airport Road
Hubli - Karnataka

+91 94482 83709

www.nankiconventionhall.com

# M P BIRLA INSTITUTE OF MANAGEMENT

*Associate Bharatiya Vidya Bhavan*

**APPROVED BY AICTE & AFFILIATED TO DR. MANMOHAN SINGH BENGALURU CITY UNIVERSITY**

**DUAL SPECIALISATIONS OF YOUR CHOICE**

Marketing/Finance/HRM/ Business Analytics

## TWO YEAR FULL TIME MBA DEGREE AT BENGALURU

# ADMISSION OPEN

**2026-2028**

A distinguished standalone B-School in Bengaluru situated in the heart of the city.





## WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

**AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.**

**SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.**

**ADMISSION PROCESS**

Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.





**For Admission Contact:**
+91 99022 52842 / 99022 52981
www.mpbim.com
contact@mpbim.com

**M P Birla Institute of Management**
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457




Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

ಸಂಪಾದಕ ಮಂಡಳಿ

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್


ಚಂದಾ ವಿವರ :

ಬಿಡಿ ಪ್ರತಿ : ರೂ. 10/-

ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 43

ಸಂಚಿಕೆ – 12

ಸೆಪ್ಟೆಂಬರ್–2026


## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ಅವಿಸ್ಮರಣೀಯ ನಗೆಗಾರರು – 14 | ಶಿವಕುಮಾರ್ | 3 |
| ಪುಟ್ಟ ರಾಜಕುಮಾರ –2 | ಬಿ.ಎಸ್. ಶೈಲಜಾ | 8 |
| ಕಿರ್ಕಿರಿ ಕವಿತಾ | ಸುಮನಾ | 11 |
| ನಿನ್ನೆಯ ಶೇಷ, ಇಂದಿನ ವಿಶೇಷ | ಸಿಂಧು ಹರಿತಸ್ | 15 |
| "ಕನ್ನಡದೊಸ" ವ್ಯಾಕರಣ | ಎಸ್. ರಾಮಮೂರ್ತಿ | 18 |
| ತುಂತುರು | ದಂನಆ | 20 |
| ಹಿಂದಿ ಹಾಡಿ ಕನ್ನಡ ಜೋಡಿ | ಅಣಕು ರಾಮನಾಥ್ | 21 |
| ಪುಸ್ತಕ ಪರಿಚಯ | | 22 |
| ಹೆಸರು ಹೆಸರೇ | ವಿಜಯಲಕ್ಷ್ಮೀ ಶಂಕರ್ | 23 |
| ಬಾಲ್ಯದ ನೆನಪು ತಂದ ಮಳೆ | ಜ್ಯೋತಿ ರಾಜೇಶ್ | 26 |
| ಸಿನೇಮಾ ನೋಡೋಣ ಬನ್ನಿ! | ಪ್ರಭಾಮಣಿ ನಾಗರಾಜ | 28 |
| ಆಣೆ–ಪ್ರಮಾಣ ಮತ್ತು ಪರಿಣಾಮ | ಕೆ.ಎಸ್.ಸೋಮೇಶ್ವರ | 31 |
| ಐಹೇಟ್"ಭಾಂಡೀಜ್" | ಸಿ.ಎ.ವಿಲಾಸ ನಾ ಹುದ್ದಾರ | 33 |
| ಗೂಬೆ ಪುರಾಣ | ಡಾ. ಭೀ. ಪ್ರಾಣೇಶ ರಾವ್ | 35 |
| ಪೈಲ್ವಾನ್ ರಂಗಪ್ಪನ ಡಯಟ್ | ಇ.ಆರ್. ರಾಮಚಂದ್ರನ್ | 38 |


ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್

ಒಳಪುಟಗಳು : ರಾಂಕಿ ಬೆಳ್ಳೂರ್, ರಘುಪತಿ ಶೃಂಗೇರಿ


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*



# ಅಪರಂಜಿ ಕಿಡಿ

● ಪ್ರಕಾಶ್

ಶತ್ರು ದೇಶಗಳೇ ಮಾತಾಡುವಾಗ,
ಕಾವೇರಿ ಚರ್ಚೆಗೆ ಹಿಂದೇಟು ಯಾಕೆ?

– ಸಿ.ಎಂ.ವಿಜಯ್

ಏಕೋ ಸಿನಿಮೀಯ ಭಾಷೆಯಂತಿದೆ !!

* * *

ಗ್ಲೂಟೆನ್ ಮುಕ್ತ ನವಣೆ " ಮಫಿನ್"

– ಸುದ್ದಿ

ಅದು ರುಚಿ ಮುಕ್ತವೂ ಆಗಿರುಲ್ಲ ತಾನೆ !!

* * *

ಬಿಡದಿ ಟೌನ್‌ಷಿಪ್: ಇಂದಿನಿಂದ ದಳ ಯಾತ್ರೆ

– ಪತ್ರಿಕೆ

ಕಾವೇರಿ ಸಮಸ್ಯೆಯಷ್ಟೇ ಕಾವೇರದಿದ್ದರೆ ಸಾಕು !!

* * *

ಸಂಚಾರ ವ್ಯವಸ್ಥೆ ಸುಧಾರಣೆಗೆ ಕ್ರಮ :
ಏಳು ಕಾರ್ಯಪಡೆ ರಚನೆ.

– ಪ್ರಿಯಾಂಕ್ ಖರ್ಗೆ

ಸಮಸ್ಯೆಗಳನ್ನು ಪರಿಹರಿಸಲು ಖರ್ಗೆ ಸೂಕ್ತ ನಾಯಕರು !!

* * *

ಈಜು : ರಾಜ್ಯದ ರಿಲೇ ತಂಡಕ್ಕೆ ಚಿನ್ನದ ಪದಕ

– ಕ್ರೀಡಾ ಸುದ್ದಿ

ಈಸಬೇಕು, ಈಸಿ ಜೈಸಬೇಕು !!!

* * *

"ಆರ್ಥಿಕ ಹೊರೆ : ಸಮಾಜಕ್ಕೆ ಬರೆ"

– ದಿನಪತ್ರಿಕೆ

ಕಠೋರ ಸತ್ಯ ಎಂದರೆ ಇದೇ !!

* * *

"ಯುವ ಜನರೇ ದೇಶದ ಅತಿ ದೊಡ್ಡ ಶಕ್ತಿ"

– ರಾಹುಲ್ ಗಾಂಧಿ

ಇದು ಅವರ ಸ್ವಾನುಭವವೇ ಸ್ವಾಮಿ !!

* * *

**ಅವಿಸ್ಮರಣೀಯ ನಗೆಗಾರರು–14**

# ಶ್ರೀನಿವಾಸ ವೈದ್ಯ

**✍ಶಿವಕುಮಾರ್**



ಅವಿಸ್ಮರಣೀಯ ನಗೆಗಾರರು ಸರಣಿಯ ಈ ಹಿಂದಿನ ಹಲವು ಅಂಕಣಗಳಲ್ಲಿ ಕೊರವಂಜಿ ಮಾಸಪತ್ರಿಕೆಗೆ ಲೇಖನಗಳನ್ನು ನೀಡಿ ಪತ್ರಿಕೆಯನ್ನು ಶ್ರೀಮಂತಗೊಳಿಸಿದ ಮಹನೀಯರುಗಳನ್ನ ಪರಿಚಯಿಸುವ ಕಾರ್ಯವನ್ನು ನಡೆಸಿದ್ದಾಯಿತು. ಅಪರಂಜಿ ಮಾಸಪತ್ರಿಕೆಗೆ ಲೇಖನಗಳನ್ನು ನೀಡಿ ಪ್ರೋತ್ಸಾಹಿಸಿದ ಲೇಖಕ ಲೇಖಕಿಯರನ್ನು ಓದುಗರಿಗೆ ಪರಿಚಯಿಸುವ ಪ್ರಯತ್ನದಲ್ಲಿ ಇದು 2ನೇ ಲೇಖನ. ಅಪರಂಜಿಯ ಮೊದಲ ಸಂಚಿಕೆ ಹೊರಬಂದದ್ದು ಅಕ್ಟೋಬರ್ 1984ರಲ್ಲಿ. ನಾಲ್ಕು ದಶಕಗಳಿಗೂ ಮೀರಿದ ಈ ಅವಧಿ ಯಲ್ಲಿ ಅನೇಕ ಖ್ಯಾತನಾಮರು ಅಪರಂಜಿಗೆ ಲೇಖನಗಳನ್ನು ನೀಡಿ ಪತ್ರಿಕೆಯನ್ನು ಶ್ರೀಮಂತಗೊಳಿಸಿದರು. ಪ್ರಾರಂಭದ ದಿನಗಳಿಂದಲೇ ನಮ್ಮೊಂದಿಗೆ ಕೈ ಜೋಡಿಸಿದ ಬರಹಗಾರರಾದ ಶ್ರೀಯುತ (ದಿವಂಗತ) ಶ್ರೀನಿವಾಸ ವೈದ್ಯ ಅವರು ಈ ಸರಣಿಯ ಮೊದಲ ಸಾಹಿತಿ. ಅಪರಂಜಿಯ ಪ್ರಾರಂಭದ ದಿನಗಳಿಂದಲೂ ವೈದ್ಯರು ನಮ್ಮ ಪತ್ರಿಕೆಗೆ ಬಹು ಉತ್ಕೃಷ್ಟ ಲೇಖನಗಳನ್ನು ನೀಡಿ, ನಮ್ಮ ಪ್ರಯತ್ನಕ್ಕೆ ಇಂಬು ನೀಡಿದ್ದರು. ವೈದ್ಯರ ಮೇರು ಕೃತಿ," ಹಳ್ಳ ಬಂತು ಹಳ್ಳ " ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದ್ದು ಅವರ ಅಸಾಮಾನ್ಯ ಪ್ರತಿಭೆಗೆ ಸಾಕ್ಷಿ. ಅಪರಂಜಿಗೆ ಶ್ರೀಯುತರು ಬರೆದ ಲೇಖನಗಳ ಸಂಗ್ರಹಗಳಾದ, "ತಲೆಗೊಂದು ತರತರ", "ರುಚಿಗೆ ಹುಳಿಯೊಗರು", "ಅಗ್ನಿ ಕಾರ್ಯ" ಇವೇ ಮುಂತಾದ ಅನೇಕ ಶ್ರೇಷ್ಠ ಪುಸ್ತಕಗಳು ವೈದ್ಯರ ಲೇಖಣಿಯಿಂದ ಮೂಡಿಬಂದಿವೆ.

ವೈದ್ಯರನ್ನು ನಾನು ಮೊದಲು ಭೇಟಿ ಮಾಡಿದ್ದು 1977ರಲ್ಲಿ. ಆಗ ಅವರು ಕೆನರಾ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿದ್ದರು. ನಾನು ಆಗತಾನೆ ಸಣ್ಣ ಉದ್ಯಮವೊಂದನ್ನು ಪ್ರಾರಂಭಿಸಿದ್ದೆ. ಆಗ ಪ್ರಾರಂಭವಾದ ಪರಿಚಯ ಕ್ರಮೇಣ ಸ್ನೇಹಕ್ಕೆ ತಿರುಗಿದ್ದಕ್ಕೆ ಮುಖ್ಯ ಕಾರಣ ಬಹುಶಃ ನಮ್ಮಿಬ್ಬರ ಸಮಾನ ಮನೋಧರ್ಮವಿರಬಹುದು. ಜೀವನದ ವಿಚಿತ್ರ ಆಗುಹೋಗುಗಳು ನಮ್ಮಿಬ್ಬರನ್ನೂ ಒಂದೇ ರೀತಿಯಲ್ಲಿ ಚಕಿತಗೊಳಿಸುತ್ತಿದ್ದವು. ಬಾಳು ನಮ್ಮ ಮುಂದೆ ಒಡ್ಡುವ ಪರಿಹಾರವಿಲ್ಲದ ಒಗಟುಗಳಿಗೆ ತಕ್ಕ ಪ್ರತಿಕ್ರಿಯೆ ಹಾಸ್ಯ ಎಂಬುದು ವೈದ್ಯರ ನಂಬಿಕೆಯಾಗಿತ್ತು. ಸುಮಾರು ಐದು ದಶಕಗಳಷ್ಟು ಕಾಲ ಸ್ನೇಹ, ಹರಟೆ, ನಗೆಚಾಟಿಕೆ, ಜೀವನದ ಮೌಲ್ಯಗಳು ಇವುಗಳ ಶ್ರೀಮಂತ ಸಂಸ್ಕೃತಿಯನ್ನು ನನ್ನೊಂದಿಗೆ ಹಂಚಿಕೊಂಡು ಈ ಜೀವಯಾತ್ರೆ ಯನ್ನು ಸುಗಮಗೊಳಿಸಿದ ಮಿತ್ರ ಶ್ರೀನಿವಾಸ ವೈದ್ಯರು.

ವೈದ್ಯರು ಅಪರಂಜಿಗೆ ಬರೆದ ಲೇಖನ ಸ್ಯಾರೀ ಗಾರ್ಡ್. ಅಂದಿನಿಂದ ಮುಂದಿನ

ಎರಡು ದಶಕಗಳಲ್ಲಿ ಪುಂಖಾನುಪುಂಖವಾಗಿ ಬರಹಗಳು ವೈದ್ಯರ ಲೇಖನಿಯಿಂದ ಹರಿದುಬಂದವು. ಅವರ ಚೊಚ್ಚಲು ಪುಸ್ತಕ, "ತಲೆಗೊಂದು ತರತರ"ದ ಬಿಡುಗಡೆ ಸಮಾರಂಭ ಅಪರಂಜಿಯ ವತಿಯಿಂದ ನಡೆದದ್ದು, ಪೂಜ್ಯ ಶಿವರಾಮ ಕಾರಂತರು ಈ ಪುಸ್ತಕವನ್ನು ಲೋಕಾರ್ಪಣೆ ಮಾಡಿದ್ದರು.

ಫೆಬ್ರುವರಿ 2021 ಅಪರಂಜಿಯ ಒಂದು ವಿಶೇಷಾಂಕವನ್ನು ಹೊರತಂದೆವು. ಕೊರವಂಜಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದ, ಅಂದಿನ ಕಾಲದ ಜಾಹಿರಾತುಗಳನ್ನು ಓದುಗರಿಗೆ ಪರಿಚಯಿಸುವ ಪ್ರಯತ್ನ, ಈ ವಿಶೇಷಾಂಕದ ಉದ್ದೇಶ. ಕೊರವಂಜಿಯಲ್ಲಿ ಸಿನಿಮಾ ಜಾಹಿರಾತುಗಳು ಹೇರಳವಾಗಿಬರುತ್ತಿದ್ದವು. ವೈದ್ಯ ಒಬ್ಬ ಕಟ್ಟಾ ಸಿನಿಮಾ ಪ್ರೇಮಿ. ಅದರಲ್ಲೂ ಹಿಂದಿ ಸಿನಿಮಾಗಳೆಂದರೆ ಅವರು ವಾಕಿಂಗ್ ಎನ್‌ಸೈಕ್ಲೋಪೀಡಿಯಾ. ಹಾಗಾಗಿ ಅವರನ್ನು ಸಂದರ್ಶಿಸಿ, ಅಪರಂಜಿಯ ವಿಶೇಷಾಂಕಕ್ಕಾಗಿ ಒಂದು ವರದಿಯನ್ನು ಬರೆದೆ. ವೈದ್ಯರ ಜೀವನ ಪ್ರೀತಿಯನ್ನು ಬಿಂಬಿಸುವ ಆ ಸಂದರ್ಶನದ ಆಯ್ದ ಭಾಗಗಳನ್ನು ಇಲ್ಲಿ ಕೆಳಗೆ ನೀಡಿದ್ದೇನೆ.

........ಹಿಂದಿ ಸಿನಮಾ ಅಂದಾಗ ವೈದ್ಯರ ಮುಖ ಅರಳಿತು. ಕೊರವಂಜಿಯಲ್ಲಿನ ಜಾಹಿರಾತು ಎಂದ ಮೇಲಂತೂ ಅವರಿಗೆ ಇನ್ನೂ ಖುಷಿಯಾದಂತೆ ಕಾಣಿಸಿತು. ನಲವತ್ತರ ಮತ್ತು ಐವತ್ತರ ದಶಕಗಳಲ್ಲಿ ಕೊರವಂಜಿಯಲ್ಲಿ ಬೆಳಕುಕಂಡ ಹಲವು ಸಿನಿಮಾ ಜಾಹಿರಾತುಗಳ ಪಟ್ಟಿಯನ್ನು ಅವರ ಮುಂದಿಟ್ಟೆ. "ಚೀಟಿ ಗೀಟಿ ಮುಂದಿಡ ಬೇಡ. ನೀನೇ ಒಂದೊಂದಾಗಿ ಸಿನಿಮಾ ಹೆಸರುಗಳನ್ನು ಓದು" ಎಂದರು.

ನಾನು "ಮೊದಲ ಎಂಟ್ರಿ, ಅಪ್ನಾ ಘರ್. ಪಾತ್ರವರ್ಗದಲ್ಲಿ...." ಎನ್ನುವಷ್ಟರಲ್ಲಿ, ವೈದ್ಯ ನನ್ನನ್ನು ತಡೆದು,

"ನಾನು ಹೇಳ್ತೀನಿ. ಶಾಂತಾ ಆಪ್ಟೆ ಮತ್ತು ಚಂದ್ರಮೋಹನ್. ಈ ಚಂದ್ರಮೋಹನ್ ಯಾರು ಗೊತ್ತೇ ? ಖ್ಯಾತ ನಿರ್ದೇಶಕ ಶಾಂತಾರಾಮ್‌ನ ಶಾಕುಂತಲಾ ಚಿತ್ರದಲ್ಲಿ ಈ ನೀಲಿ ಕಣ್ಣಿನ ಚೆಲುವನದ್ದೇ ದುಶ್ಯಂತನ ಪಾತ್ರ. ಶಾಂತಾರಾಮ್‌ನ ಹೆಂಡತಿ ಜಯಶ್ರೀ..." ಅಂತ ಹೇಳುತ್ತಿರುವಾಗಲೇ ನಾನು ಬಾಯಿ ಹಾಕಿ, "ಶಾಂತಾರಾಮ್‌ನ ಹೆಂಡತಿ ಸಂಧ್ಯಾ ಅಲ್ಲವೇನೋ ?" ಅಂತ ಕೇಳಿದೆ.

"ಅವಳು ಮೂರನೆಯವಳು. ಜಯಶ್ರೀ ಎರಡನೆ. ಹೆಂಡತಿ. ಅವಳದ್ದು ಶಕುಂತಲೆಯ ಪಾತ್ರ. ಈ ಅಪ್ನಾ ಘರ್‌ನ ಹೀರೋಯಿನ್ ಶಾಂತಾ ಆಪ್ಟೆ ಬೆಳಕಿಗೆ ಬಂದದ್ದು ಕುಂಕುಂ ಎಂಬ ಚಿತ್ರದಲ್ಲಿ.. ನಿನ್ನ ಲಿಸ್ಟಿನ ಮುಂದಿನ ಸಿನಿಮಾ?"

"ಖಿಲೌನ....ಸ್ನೇಹಪ್ರಭಾ, ಕನ್ಹಯ್ಯಲಾಲ್"

"ಓ ಈ ಸ್ನೇಹಪ್ರಭಾ ಯಾರು ಗೊತ್ತೇ ? ಖ್ಯಾತ ನಿರ್ದೇಶಕ ಕಿಶೋರ್ ಸಾಹುವಿನ ಮೊದಲ ಹೆಂಡತಿ. ಅವನು ತನ್ನ ಪುನರ್‌ಮಿಲನ್ ಚಿತ್ರದಲ್ಲಿ ಸಹನಟಿಯಾಗಿದ್ದ ಸ್ನೇಹಪ್ರಭಾ ಪ್ರಧಾನಳನ್ನು ಮದುವೆಯಾಗಿದ್ದ. ಎರಡೇ ವರ್ಷಗಳಲ್ಲಿ ಅವರ ವಿವಾಹ ವಿಚ್ಛೇದನವಾಯಿತು. ಆ ದಿನಗಳಲ್ಲಿ ಈ ವಿಚ್ಛೇದನದ ವಿಚಾರಣೆಯೆಲ್ಲಾ ಸಾರ್ವಜನಿಕವಾಗಿ ನಡೆಯುತ್ತಿತ್ತು. ಸಂಯುಕ್ತ ಕರ್ನಾಟಕದಲ್ಲಿ ಪ್ರತಿ ನಿತ್ಯ ಅದರದ್ದೇ ಸುದ್ದಿ. ಆಗ ನಾನಿನ್ನೂ ಹತ್ತು ವರ್ಷದ ಹುಡುಗ. ಆಗತಾನೇ ಕನ್ನಡ ಕಲಿಯುತ್ತಿದ್ದೆ. ನಮ್ಮಪ್ಪ, ಭಾಷೆ ಚೆನ್ನಾಗಿ ಪಳಗಬೇಕಾದರೆ ದಿನನಿತ್ಯ ಪತ್ರಿಕೆ ಓದು ಅಂತ ತಾಕೀತು ಮಾಡುತ್ತಿದ್ದರು. ಅಂದು ನನಗೆ ಓದಲು ಸಿಕ್ಕಿದ್ದು ಈ ವಿಚ್ಛೇದನದ ವರದಿ. ಸ್ನೇಹಪ್ರಭಾಳ ಪಾಟೀಸವಾಲಿನಲ್ಲಿ

ಒಬ್ಬ ಇದಿರು ಲಾಯರು ಅವಳನ್ನು ಕುರಿತು, "ನಿನ್ನ ವಿಚ್ಛೇದನಕ್ಕೆ ಮುಖ್ಯ ಕಾರಣ ಏನು?" ಅಂತ ಕೇಳಿದ್ದಕ್ಕೆ , ಅವಳು, "ನನ್ನ ಗಂಡ ಹಾಸಿಗೆಯಲ್ಲಿ ರಾಕ್ಷಸನಂತೆ ವರ್ತಿಸುತ್ತಾನೆ"

ಅಂತ ಉತ್ತರಿಸಿದ್ದಳು. ಹಾಗೆಂದರೇನು ಅಂತ ನನಗೆ ತಿಳಿಯಲಿಲ್ಲ. ನಮ್ಮಪ್ಪನನ್ನು ಕೇಳಿ ಅವರ ಮೆಚ್ಚುಗೆ ಪಡೆಯಬೇಕೆಂಬ ಆಶೆಯಿಂದ, ಅವರು ಮನೆಗೆ ಬಂದ ಕೂಡಲೇ ಅದರ ಅರ್ಥ ಕೇಳಿದೆ. ಅವರು ಒಂದು ಕ್ಷಣ ಅವಾಕ್ಕಾಗಿ ನಿಂತು ಬಿಟ್ಟರು. ಆಮೇಲೆ ಸುಧಾರಿಸಿಕೊಂಡು "ಇನ್ನು ಮ್ಯಾಲ ನಿನಗ ಸಾಲಿ ಪಾಠಾನ ಸಾಕು. ಇದೆಲ್ಲ ನಿನಗೆ ಅರ್ಥವಾಗೂದಿಲ್ಲ " ಅಂತ ಹೇಳಿ ಒಳಕ್ಕೆ ನಡೆದರು. ಸರಿ ಮುಂದಿನ ಸಿನಿಮಾ?"

"ಆನ್ – ದಿಲೀಪ್ ಕುಮಾರ್ ನಾದಿರಾ"

"ಅದು ನಮ್ಮ ದೇಶದಲ್ಲಿ ಬಿಡುಗಡೆಯಾದ ಮೊದಲ ವರ್ಣ ಚಿತ್ರ. ಟೆಕ್ನಿಕಲರ್. ಮೊದಲು ತಮಿಳಿನಲ್ಲಿ ಬಂದಿತ್ತಂತೆ. ದಿಲೀಪ ನಾದಿರಾಳನ್ನು ಹಿಂದೆ ಕೂರಿಸಿಕೊಂಡು ಕುದುರೆ ಸಾರೋಟನ್ನು ನಡೆಸುತ್ತಾ ಹೋಗುವ ದೃಶ್ಯವನ್ನ  ಮರೆಯುವಂತೆಯೇ ಇಲ್ಲ. "ದಿಲ್ ಮೆ ಚುಪಾಕೆ ತೂಫಾನ್ ಲೇ ಚಲೇ" ಹಾಡಂತೂ ನಿಜಕ್ಕೂ ಅವಿಸ್ಮರಣೀಯ" ಎಂದು ಹೇಳಿ ವೈದ್ಯರು ಆ ಹಾಡನ್ನು ಪೂರ್ತಿ ಹಾಡಿದರು.

ವೈದ್ಯರ ಸಾಹಿತ್ಯ ಶೈಲಿಯೇ ಒಂದು ನಮೂನೆ. ಇದರಲ್ಲಿ ನಗೆಹನಿಗಳೆಂತೆ ಕ್ಷಣದಲ್ಲಿ ಸಿಡಿಯುವ ಹಾಸ್ಯಕ್ಕೆ ಜಾಗವಿಲ್ಲ. ಸುದೀರ್ಘ ಲೇಖನಗಳಲ್ಲಿ, ನಗೆಯ ಘಟನೆಗಳು ಸಾವಧಾನವಾಗಿ ಬೆಳೆಯುತ್ತಾ ಬಂದು (ಬಿಲ್ಲಿನ ಬಾಣವನ್ನು ಕಿವಿಯವರೆಗೂ ಎಳೆಯುವಂತೆ) ಕೊನೆಗೊಮ್ಮೆಮೂರನೆಯ ಪುಟದಲ್ಲಿ ನಗೆಯ ಸ್ಫೋಟವಾಗುತ್ತದೆ. ಈ ಸ್ಫೋಟ ತರುವ ಮುದ ಇನ್ನೆರಡು ಪುಟಗಳಷ್ಟು ಕಾಲ ಮುಂದುವರಿಯುತ್ತಿದ್ದು ಅನಂತರ ಮತ್ತೊಂದು ಅನಿರೀಕ್ಷಿತ ನಗೆ ಬಾಂಬು ನಮ್ಮನ್ನು ಇದಿರುಗೊಳ್ಳುತ್ತದೆ. ಪುಟಗಳ ಮಿತಿ ಇರುವುದರಿಂದ ಅವರ ಯಾವ ಲೇಖನವನ್ನೂ ಇಲ್ಲಿ ಪೂರ್ಣ ಪಾಠ ಒದಗಿಸಿ ಅವರ ನಗೆಶೈಲಿಯನ್ನು ಪರಿಚಯಿಸುವುದು ಆಗದ ಮಾತು. ಹಾಗಾಗಿ ಅವರ ಅತ್ಯುತ್ತಮ ಲೇಖನಗಳಲ್ಲಿ ಒಂದಾದ " ಬಿದ್ದೂರಿನ ಬಿಗ್‌ಬೆನ್"  ಲೇಖನದ ಪ್ರಾರಂಭ ಮತ್ತು ಕೊನೆ ಇವುಗಳನ್ನು ಇಲ್ಲಿ ನೀಡಿ ಮಧ್ಯದ ಭಾಗವನ್ನು ನಿಮ್ಮ ಕಲ್ಪನೆಗೇ ಬಿಡುವ ನಿರ್ಧಾರವನ್ನು ಮಾಡಿರುವೆ. ಪರಿಗ್ರಹಿಸಿ.

## ಬಿದ್ದೂರಿನ ಬಿಗ್‌ಬೆನ್

..................ಇತ್ತೀಚೆಗೆ ಚುನಾವಣೆಯ ಕೆಲಸಕ್ಕೆಂದು ಕರ್ನಾಟಕದ ಅತಿ ಕೊನೆಯ ಕೊಂಪೆಯಾದ ಬಿದ್ದೂರಿಗೆ ಹೋಗಿದ್ದೆ. ಬಿದ್ದೂರು ನಾಗರೀಕತೆಯಿಂದ  ದೂರವಾಗಿ, ತನ್ನ ಪಾಡಿಗೆ ತಾನು ಬಿದ್ದುಕೊಂಡಿದ್ದ ಒಂದು ಕುಗ್ರಾಮ.

ಚುನಾವಣೆಯ ಕೆಲಸವೆಲ್ಲಾ ಮುಗಿದಾಗ ಮುಚ್ಚಂಜೆಯಾಗಿ ಬಿದ್ದೂರಿನ ದಾರಿಯಾಗಿ ಹೋಗುವ ಕೊನೆಯ ಬಸ್ಸು ಹೊರಟು ಹೋಗಿತ್ತು. ಮರುದಿನ ಬೆಳಗ್ಗೆ ಏಳರವರೆಗೆ ಬೇರೆ ಬಸ್ಸು ಬಿದ್ದೂರಿನ ಮೇಲೆ ಹಾಯುವುದಿಲ್ಲ. ಹೀಗಾಗಿ ಅಂದಿನ ರಾತ್ರಿಯನ್ನು ಬಿದ್ದೂರಿನಲ್ಲಿ ಕಳೆಯುವ ಮಹಾ ಸೌಭಾಗ್ಯ ನನ್ನದಾಗಿತ್ತು. ಮುಂದೇನಪ್ಪಾ?, ಎಂದು ಮತಿಭ್ರಾಂತನಾಗಿ ನಿಂತಾಗ ಒಮ್ಮೆಲ್ ನನ್ನ ಚಡ್ಡಿ ದೋಸ್ತಿ, ಪಾಟೀಲ ಪರಮೇಶಿ ಪ್ರತ್ಯಕ್ಷನಾದ. ತಮಿಳು ಪಿಕ್ಚರಿನಲ್ಲಿ ದೇವರು ಪ್ರತ್ಯಕ್ಷವಾದಂತೆ.

"ನೀನ್ಯಾಕೋ ಇಲ್ಲಿ?"

"ನಿನಗೇನು ಬ್ಯಾನಿ ಬಂದಿತ್ತೋ ಬಿದ್ದೂರಿಗೆ ಬರಲಿಕ್ಕೆ?" ಇತ್ಯಾದಿ ಕುಶಲ ಪ್ರಶ್ನೆಗಳಾದ

ಮೇಲೆ ತಿಳಿದದ್ದು ಇಷ್ಟು. ದೇಶದ ಕೊಂಪೆ ಕೊಂಪೆಗಳಲ್ಲಿ ಹೇಗೆ ಚುನಾವಣೆ ನಡೆಸುವುದು ಅವಶ್ಯಕವೋ ಹಾಗೆಯೇ ದೇಶದ ಅತಿ ಕೊಟ್ಟಕೊಂಪೆಯಲ್ಲಿ ಕೂಡಾ ಒಂದು ರಾಷ್ಟ್ರೀಕೃತ ಬ್ಯಾಂಕಿನ ಶಾಖೆ ಇರಲೇಬೇಕು. ಚುನಾವಣೆಯ ಕೆಲಸಕ್ಕೆ ಬಿದ್ದು ಬಿದ್ದೂರಿಗೆ ಬಂದ ಪಾಪಿ ನಾನಾದರೆ, ಅಲ್ಲಿನ ಹ್ಯಾಂಕ್ ಮ್ಯಾನೇಜರ ಪಾ.ಪ. ಅಂದರೆ, ಪಾಟೀಲ ಪರಮೇಶಿ. ಅಂತೂ ರಾತ್ರಿಯ ಚಿಂತೆ ತಪ್ಪಿತ್ತು.

ಊಟ ಮುಗಿಸಿ ಇನ್ನೇನು ಹಾಸಿಗೆಯ ಮೇಲೆ ಉರುಳಬೇಕೆಂದಾಗ ಕೈಗಡಿಯಾರ ನೋಡಿಕೊಂಡೆ. ಅದಾವಾಗಲೋ ಬಂದು ಬಿದ್ದಿತ್ತು. ಪರಮೇಶಿಯ ವಾಚು ಕೆಟ್ಟು ನಾಲ್ಕು ತಿಂಗಳಿಂದ ರಿಪೇರಿಗೆ ಬಿದ್ದಿತ್ತಂತೆ ಹುಬ್ಬಳ್ಳಿಯಲ್ಲಿ. ಆದರೂ ಬೆಳಗ್ಗೆ ಕರೆಕ್ಟಾಗಿ ಆರು ಗಂಟೆಗೆ ಎಬ್ಬಿಸುವ ಭರವಸೆಯಿತ್ತ ಪರಮೇಶಿ.

"ಈ ಬಿದ್ದೂರಾಗ ಬೇರೆ ಎಲ್ಲೂ ಗಡಿಯಾರ ಇಲ್ಲೇನೋ ಪರಮೇಶಿ?" ಅಂತ ಕೇಳಿದೆ.

"ಇಲ್ಲ"

"ಮತ್ತ ನೀ ಹೆಂಗ ನನ್ನ ಕರೆಕ್ಟ ಆರಕ್ಕ ಎಬ್ಬಿಸ್ತಿ?"

"ಹೆಂಗಂದ್ರ ಕರಕ್ಟ ಆರಕ್ಕೇ ಬಾಜೂದ ಮನೀ ಹಾರೂರ ಮುದಕಿ ರಿಂದವ್ವ ಎದ್ದು ದೇವರ ನಾಮ ಹಾಡತಾ ಇರತಾಳ. ಆವಾಗ ನಾ ಅಲ್ಲ ನಮ್ಮಪ್ಪ ಏಳ್ತಾನ"

"ಆಕಿ ಎದ್ದಾಗ ಕರೆಕ್ಟ ಆರು ಹೊಡೆತಿರತದ ಅಂತ ಯಾತರ ಮ್ಯಾಲಿಂದ ಹೇಳ್ತಿ ?"

"ಯಾಕಂದ್ರ ಗೌಡರ ಕೋಣಾ ಒದರಿದ ಮ್ಯಾಲನ ರಿಂದವ್ವ ಏಳ್ತಾಳ"

ನನಗೆ ಒಂದು ಕಡೆ ನಗೆ, ಬೆಳಗ್ಗೆ ಬಸ್ಸು ಸಿಕ್ಕೀತೋ ಇಲ್ಲವೋ ಎಂಬ ಹೆದರಿಕೆ. ಲಘು ಹೃದಯದ ಪರಮೇಶಿಯನ್ನು ಕಂಡು ಹತಾಶತನ, ದಿಗ್ಭ್ರಾಂತಿ ಎಲ್ಲ ಒಟ್ಟುಗೂಡಿಸಿ ಕೇಳಿದೆ.

"ಹಾಗೆಂದಗರೇನೋ ಪರಮೇಶಿ?"

"ಅಂದರೆ ದಿನಾಲೂ ಕರೆಕ್ಟಾಗಿ ಆರಕ್ಕೇ ಗೌಡರ ಕೋಣ ಒದರ್ತದ"

ನಾನು ಹಣೆ ಚಚ್ಚಿಕೊಂಡು ಕೇಳಿದೆ.

"ಅಲ್ಲೋ, –ಕೋಣ ಒದರಿದಾಗ ಆರು ಹೊಡೆದಿರತದ ಅಂತ ಹೇಂಗ ಹೇಳತಿ ?"

"ಹೇಂಗಂದ್ರ, ಕರೆಕ್ಟ ಆರು ಹೊಡೆದಾಗನ ಕೇಣ ಒದರತೈತಿ."

ನನಗೆ ಬ್ರಹ್ಮಾಂಡ ಸಿಟ್ಟು ಬಂತು ನುಂಗಿಕೊಂಡೆ.

* * * * *

ಇಲ್ಲಿಂದ ಮುಂದಿನ ಹಲವು ಪುಟಗಳಲ್ಲಿ ಸೊಳ್ಳೆಕಾಟದಿಂದ ನಿದ್ದೆ ಬರದೆ ಹೊರಳಾಡುವ ಲೇಖಕ, ಬಿದ್ದೂರಿನ ಹಾಗೂ ಮಲ್ಲೇಶ್ವರದ ಸೊಳ್ಳೆಗಳ ಬಗ್ಗೆ ಒಂದು ಲಘು ಪ್ರಬಂಧವನ್ನೇ ನೀಡುತ್ತಾರೆ. ಅದು ಹಾಗಿರಲಿ. ಬೆಳಗಾದ ಮೇಲೆ ಏನಾಯಿತೆಂಹುದನ್ನು ಮುಂದಿನ ಭಾಗದಲ್ಲಿ ನೋಡುವ.

* * * * *

ಕನಸು ಒಡೆದಾಗ ಪರಮೇಶಿ ನನ್ನ ಪಕ್ಕೆಗಳನ್ನು ತಿವಿತಿವಿದು ಎಬ್ಬಿಸುತ್ತಿದ್ದ.

"ಏಳಲೇ ಕೋಣ ಒದರಿತು. ಕೇಳಿಸಲಿಲ್ಲೇನಾ ?" ಎಂದ. ಎದ್ದವನೇ ಬೇಗನೆ ಬಸ್ಸಿಗೆ ಓಡಿದೆ. ಬಸ್ಸು ಎಲ್ಲಿ ನಿಲ್ಲುತ್ತದೋ, ಎಲ್ಲಿ ತಪ್ಪಿಹೋಗುತ್ತದೋ ಎಂದು ನರ್ವಸ್ಥನಾದೆ. ಎಂಕ್ಸೈಟಿತನಾದೆ.

ನನ್ನ ಹಾಲತ್ತಿಗೆ ನಾನೇ ಕನಿಕರಿಸತೊಡಗಿದ್ದೆ. ಬೀದಿಯಲ್ಲಿ ಎದುರುಮನೆಯ ಹಾರೂರ ಮುದಕಿ ರಿಂದವ್ವ ಮನೆಬಾಗಿಲಿಗೆ ರಂಗೋಲಿ ಇಕ್ಕುತ್ತ, "ಏಳಯ್ಯಾ ಗೋಪಾಲ ಇನ್ನೆಷ್ಟು ನಿದ್ದೆ..."ಎಂದು ಹಾಳಾತಾದ ಸೂಜಿಯಲ್ಲಿ ಹಾಳಾದ ಗ್ರಾಮಫೋನು ರೆಕಾರ್ಡಿನಂತೆ ಕಿರುಚುತ್ತಿದ್ದಳು.

"ಅಮ್ಮಾ" ಎಂದೆ ರಿಂದವ್ವನಿಗೆ.

"ತಮ್ಮಾ" ಎಂದಳಾ ತಾಯಿ.

"ಈ ಊರಾಗ ಎಲ್ಲೂ ಗಡಿಯಾರ ಇಲ್ಲೇನ್ರೀ ?" ಎಂದೆ ಕರುಣಾಪೂರಿತ ದನಿಯಲ್ಲಿ.

"ಯಾಕಿಲ್ಲಾ ತಮ್ಮಾ. ಮೊನ್ನೀನ್ನೂ ಗೌಡರ ಮನ್ಯಾಗ ಹುಬ್ಬಳ್ಳಿಯಿಂದ ಒಂದು ದೆವ್ವದಂತಹ ಗಡಿಯಾರ ತಂದು ಗೋಡೆಗೆ ಬಡಿದಾರ ನೋಡು. ಇಲ್ಲೇ ಮುಂದಿನ ಮನೀನ ಗೌಡರ ಮನಿ" ಎಂದಳು.

ಈ ಅಮೃತವಾಣಿಯನ್ನು ಕೇಳಿ, ನನ್ನ ಎಲ್ಲ ಕಷ್ಟಗಳನ್ನೂ ಆ ಕ್ಷಣಕ್ಕೆ ಮರೆತು, ದುಃಖಗಳನ್ನು ನುಂಗಿ ಗೌಡರಮನೆಗೆ ನುಗ್ಗಿದೆ. ಗೌಡರು ಹೊರಗಿನ ಕಟ್ಟೆಯ ಮೇಲೆ ಬೇವಿನ ಕಡ್ಡಿಯಿಂದ ಹಲ್ಲುಜ್ಜುತ್ತ ನಿಂತಿದ್ದರು.

"ಗೌಡರೇ" ಅಂದೆ.

"ಯೇನು ಸಾಯೇಬ್ರ" ಎಂದರು.

"ನಿಮ್ಮ ಮನ್ಯಾಗ ಗಡಿಯಾರ ಅಯಿತೇನ್ರೀ" ಎಂದೆ ದೈನ್ಯದಲ್ಲಿ.

"ಅಯಿತಲ್ರೀ....ಮೊನ್ನಿನ್ನೂ ಹುಬ್ಬಳ್ಳಿಯಿಂದ ತಂದೇವಿ" ಎಂದು ಎದುರಿನ ಗೋಡೆಯನ್ನು ತೋರಿಸಿದರು. ಅಲ್ಲಿ ಗೋಡೆಯ ಮೇಲೆ ದೊಡ್ಡದಾದ ದುಂಡು ಮುಖದ ತೂಗುವ ಪೆಂಡುಲಮ್ಮಿನ ಗಡಿಯಾರ ರಾರಾಜಿಸುತ್ತಿತ್ತು.

ನಾನು ಭಯ ಭಕ್ತಿಗಳಿಂದ ಭಾವಾವೇಗದಲ್ಲಿ ಗಡಿಯಾರಕ್ಕೆ ಕೈ ಮುಗಿದು ನಿಂತಲ್ಲಿಯೇ ಒಂದು ಪ್ರದಕ್ಷಿಣೆ ಸುತ್ತಿದೆಯ ಆರು ಗಂಟೆಯಾಗಿ ಹತ್ತು ನಿಮಿಷಗಳಾಗಿತ್ತು. ನನ್ನ ಕೈ ಗಡಿಯಾರವನ್ನು ಸರಿಯಾಗಿ ಅಡ್ಜಸ್ಟ್ ಮಾಡಿಕೊಳ್ಳುತ್ತಾ ಭಾರವಿಳಿದ ನಿಟ್ಟುಸಿರಿನಲ್ಲಿ, ಗೆಲುವಿನ ಸಂತಸದಿಂದ ಗೌಡರನ್ನು ಕೇಳಿದೆ.

"ಗೌಡರೇ, ಗಡಿಯಾರ ಕರೆಕ್ಟ ಅಯಿತಲ್ಲರಿ ?"

ಗೌಡರಿಗೆ ಕೋಪ ಬಂತು.

"ಏನ್ರೀ ಸಾಯೇಬ್ರ ಹಿಂಗ ಕೇಳ್ತೀರಿ. ಹೊಸಾದು ... ಎರಡು ದಿವಸಾತು. ಹುಬ್ಬಳ್ಳಿಯಿಂದ ತಂದು .. ನಿನ್ನ ಕೀಲಿ ಕೊಡಾಕ ಮರೆತಿದ್ದೆ. ರಾತ್ರಿ ಒಂದು ಗಂಟೆಗೆ ಬಂದು ಬಿದ್ದಿತ್ತು. ಈಗಿನ್ನೂ ಕೋಣ ಒದರೂತಲೇ ಆರು ಗಂಟೆಗ ಕರೆಕ್ಟಾಗಿ ಅಡ್ಜಸ್ಟ್ ಮಾಡಿಟ್ಟೇನಿ.....ಮತ್ತೂ ಕರೆಕ್ಟ್ ಅಯಿತೇನ ಅಂತ ಕೇಳತೀರಲ್ಲರೀ"

■

# ಪುಟ್ಟ ರಾಜಕುಮಾರ –2

**(ಭಾವಾನುವಾದ: ಬಿ.ಸ್.ಶೈಲಜಾ)**

ಬೆಳಗಾಗುತ್ತಿದ್ದ ಹಾಗೇ ಕೀಚಲು ದನಿಯೊಂದು ನನ್ನನ್ನು ಎಬ್ಬಿಸಿತು. ಆಶ್ಚರ್ಯವಾಗುವುದು ಸಹಜವೇ ಅಲ್ಲವೇ?

"ದಯವಿಟ್ಟು ನನಗೊಂದು ಕುರಿಯ ಚಿತ್ರ ಬರೆದುಕೊಡುವಿರಾ?"

"ಏನಂದೆ?"

"ಕುರಿಯ ಚಿತ್ರ ಬೇಕು"

ನಾನು ಬೆಚ್ಚಿ ಬಿದ್ದು ಎದ್ದು ಕುಳಿತೆ. ಕಣ್ಣು ಕಣ್ಣು ಬಿಟ್ಟೆ. ನನ್ನ ಸುತ್ತಲೂ ಹುಡುಕಾಡಿದೆ. ಅಲ್ಲಿದ್ದ ಒಬ್ಬ ವಿಲಕ್ಷಣ ಬಾಲಕ, ನನ್ನನ್ನೇ ಪರೀಕ್ಷಿಸುವವನಂತೆ ನೋಡುತ್ತಾ ನಿಂತಿದ್ದ. ಇಗೋ ಇಲ್ಲಿದೆ ಅವನ ಚಿತ್ರ (ನಾನು ಆಮೇಲೆ ರಚಿಸಿದ್ದು).



ಆದರೆ ಆ ಹುಡುಗ ಈ ಚಿತ್ರದಲ್ಲಿರುವುದಕ್ಕಿಂತ ತುಂಬಾ ಚೆಲುವನಾಗಿದ್ದ. ಅದು ನನ್ನ ತಪ್ಪಲ್ಲ. ನಾನು ಆರು ವರ್ಷದವನಾಗಿದ್ದಾಗಲೇ ದೊಡ್ಡವರು ಕಲಾವಿದನಾಗಬಹುದಾಗಿದ್ದ ನನ್ನ ಉತ್ಸಾಹಕ್ಕೆ ತಣ್ಣೀರೆರಚಿದ್ದರಲ್ಲ. ಆದ್ದರಿಂದ ಚೆನ್ನಾಗಿ ಚಿತ್ರ ಬಿಡಿಸಲು ನಾನು ಕಲಿಯಲೇ ಇಲ್ಲ. –ಹೆಬ್ಬಾವಿನ ಒಳನೋಟ ಹಾಗೂ ಹೊರನೋಟಗಳ ಆ ಎರಡು ಚಿತ್ರಗಳ ಹೊರತಾಗಿ ನಾನು ಏನನ್ನೂ ಬಿಡಿಸಲೇ ಇಲ್ಲ.

ಇದೀಗ ಈ ವಿಚಿತ್ರ ಮುಖಾಮುಖಿ ನನ್ನನ್ನು ದಂಗುಗೊಳಿಸದೇ ಇನ್ನೇನು ಮಾಡೀತು? ಮರಳುಗಾಡಿನಲ್ಲಿ ನನ್ನ ವಿಮಾನ ಅಪ್ಪಳಿಸಿತ್ತು. ಸಾವಿರಾರು ಮೈಲಿಗಳವರೆಗೆ ಜನ ವಸತಿಯೇ ಇಲ್ಲ. ಆದರೆ ಈ ಹುಡುಗನ ಮುಖದಲ್ಲಿ ಆ ಬಗೆಯ ಯಾವ ಆತಂಕವೂ ಇಲ್ಲ. ಆಯಾಸದ ಕುರುಹೂ ಇಲ್ಲ. ಹಶಿವು, ಬಾಯಾರಿಕೆಗಳಿಂದ ಬಳಲಿದಂತೆಯೂ ಕಾಣುತ್ತಿಲ್ಲ. ಭಯದ ಸೂಚನೆಯೂ ಇಲ್ಲ. ಹಳ್ಳಿಗಾಡುಗಳಿಂದ ಸಾವಿರಾರು ಮೈಲಿ ದೂರದ ಈ ಮರುಭೂಮಿಯ ನಡುವೆ ಇವನು ಕಳೆದು ಹೋಗಿರಬಹುದೆಂಬ ಸುಳಿವೇ ಇರಲಿಲ್ಲ. ನನಗೆ ಮಾತೇ ಹೊರಡದಂತೆ ಆಗಿತ್ತು. ಸಾವರಿಸಿಕೊಂಡು ಕೇಳಿದೆ.

"ಆದರೆ.... ನೀನು ಇಲ್ಲಿ ಏನು ಮಾಡುತ್ತಿದ್ದೀ?"

ಅವನು ಸ್ವಲ್ಪ ನಿಧಾನವಾಗಿ ಮೊದಲು ಕೇಳಿದ್ದ ಬೇಡಿಕೆಯನ್ನೇ ಮುಂದಿಟ್ಟ.

"ಪ್ಲೀಸ್, ನನಗೊಂದು ಕುರಿಯ ಚಿತ್ರ ಬರೆದುಕೊಡಿ"

ನಿಗೂಢ ಸನ್ನಿವೇಶಗಳಲ್ಲಿ ಬಾಯಿ ಮುಚ್ಚಿಕೊಂಡು ಆದೇಶ ಪಾಲನೆ ಮಾಡದಿರುವುದು ಒಳ್ಳೆಯದಲ್ಲ. ಮನುಷ್ಯರಿಂದ ಸಾವಿರಾರು ಮೈಲಿ ಒಂಟಿಯಾಗಿ ಸಾವಿನ ದವಡೆಯಲ್ಲಿಯೇ ಸಿಕ್ಕಿ ಹಾಕಿಕೊಂಡಿದ್ದ ನಾನು, ಒಂದು ಬಿಳಿ ಹಾಳೆ ತೆಗೆದು

ನನ್ನ ಪೆನ್ನನ್ನೂ ಈಚೆಗೆ ಎಳೆದೆ. ನನ್ನ ಜೀವನದ ಓದು ಬರಹವೆಲ್ಲಾ ಭೂಗೋಳ, ಇತಿಹಾಸ, ಗಣಿತ ಮತ್ತು ವ್ಯಾಕರಣದಲ್ಲಿಯೇ ಕಳೆದು ಹೋಗಿದ್ದುದರ ನೆನಪಾಯಿತು. ಸ್ವಲ್ಪ ಒರಟಾಗಿಯೇ "ನನಗೆ ಚಿತ್ರ ಬಿಡಿಸಲು ಬರುವುದಿಲ್ಲ" ಎಂದು ಹುಡುಗನಿಗೆ ಹೇಳಿದೆ. ಅವನು ಪುನ: "ಪರವಾಗಿಲ್ಲ ಒಂದು ಕುರಿಯ ಚಿತ್ರ....." ಎಂದೇ ಕೇಳಿದೆ.

ಆದರೆ ನಾನು ಯಾವತ್ತೂ ಕುರಿಯ ಚಿತ್ರ ಬರೆದವನಲ್ಲ. ಆದ್ದರಿಂದ ನನ್ನ ಮೊದಲ ಕಲಾಕೃತಿಯನ್ನೇ ನೆನಪು ಮಾಡಿಕೊಂಡು ಅದನ್ನೇ ಪುನ: ಬಿಡಿಸಿದೆ. ಅದೇ – ಆನೆ ತಿಂದ ಹೆಬ್ಬಾವಿನ ಹೊರನೋಟ. ಅವನ ಉತ್ತರ ನನ್ನನ್ನು ಪುನ: ದಂಗುಗೊಳಿಸಿತು.

"ಬೇಡ ಬೇಡ. ಆನೆಯನ್ನು ನುಂಗಿರುವ ಹೆಬ್ಬಾವು ಬೇಡ. ಅದು ಬಹಳ ಭಯಂಕರ ಹೆಬ್ಬಾವು. ಆಮೇಲೆ ಆನೆಯಂತೂ ತುಂಬಾ ಗೊಂದಲದ ಪ್ರಾಣಿ. ನನ್ನ ಊರಲ್ಲಿ, ಎಲ್ಲವೂ ಬಹಳ ಚಿಕ್ಕವು. ನನಗೆ ಒಂದು ಕುರಿ ಬೇಕು. ಅದರ ಚಿತ್ರ ಬರೆಯಿರಿ".

ಹಾಗಾಗಿ ನಾನು ಕುರಿಯ ಚಿತ್ರ ಬರೆಯಲೇ ಬೇಕಾಯಿತು.



ಅದನ್ನು ಭಾರೀ ದೊಡ್ಡ ವಿಮರ್ಶಕನಂತೆ ನೋಡಿದ ಆ ಹುಡುಗ,

"ಇದು ಬಹಳ ಸಣಕಲಾಗಿದೆ, ಖಾಯಿಲೆ ಬಂದ ಹಾಗೆ. ಇನ್ನೊಂದು ಚಿತ್ರ ಬರೆಯಿರಿ". ಇನ್ನೊಂದು ಚಿತ್ರ ಬರೆದೆ. ಈ ನನ್ನ ಗೆಳೆಯ ಅದನ್ನು ನೋಡಿ ಮುಗುಳ್ನಗೆ ಬೀರಿದ. ಒಪ್ಪಿಗೆಯಾಗಲಿಲ್ಲ ಎಂಬಂತೆ.


"ಸರಿಯಾಗಿ ನೋಡು; ಇದು ಕುರಿ ಅಲ್ಲ; ತಲೆಯ ಮೇಲೆ ಕೊಂಬು ಬರೆದಿದ್ದೀ. ಇದು ಟಗರು".



ಸರಿ, ಇನ್ನೂ ಒಂದು ಚಿತ್ರ ಬರೆದೆ. ಅದೂ ಒಪ್ಪಿಗೆಯಾಗಲಿಲ್ಲ.



"ಇದು ಮುದಿಯಾಗಿದೆ; ಹೆಚ್ಚು ದಿನ ಬದುಕುವ ಎಳೆಯ ಕುರಿ ಬೇಕು" ಎಂದ. ನನಗೀಗ ತಾಳ್ಮೆ ತಪ್ಪಿತು. ನನ್ನ ಎಂಜಿನ್ ರಿಪೇರಿ ಕೆಲಸ ನಿಂತು ಹೋಗಿತ್ತಲ್ಲ; ಬೇಗ ಅದರತ್ತ ಗಮನ ಕೊಡಬೇಕಾಗಿತ್ತು. ಇನ್ನೊಂದು ಚಿತ್ರ ಬರೆದೆ. ಜೊತೆಗೆ ವಿವರಣೆಯನ್ನೂ ಕೊಟ್ಟೆ.



"ಇದು ಕುರಿಯ ಪೆಟ್ಟಿಗೆ; ಇದರೊಳಗೆ ಕುರಿ ಇದೆ"

ಅವನ ಮುಖದ ಮೇಲೆ ಹೊಳಪು ಮೂಡಿದ್ದು ಕಂಡು ನನಗೆ ಆಶ್ಚರ್ಯವಾಯಿತು. ಈ ವಿಮರ್ಶಕ ಮಹಾಶಯ ತನ್ನ ತೀರ್ಪು ಕೊಟ್ಟ – "ಇದೇ ನನಗೆ ಬೇಕಾಗಿದ್ದುದು. ಈ ಕುರಿಗೆ ತುಂಬಾ ಹುಲ್ಲು ಬೇಕಾಗುವುದಿಲ್ಲ. ಅಲ್ಲವೇ?"

"ಯಾಕೆ?"

"ನಾನಿರುವಲ್ಲಿ ಎಲ್ಲ ಬಹಳ ಚಿಕ್ಕ ಚಿಕ್ಕದು."

"ಆಹಾ ನಾನು ಚಿಕ್ಕ ಕುರಿ ಕೊಟ್ಟಿದ್ದೇನೆ. ಖಂಡಿತ ಅದಕ್ಕೆ ಸಾಕಾಗುವಷ್ಟು ಹುಲ್ಲು ಇದ್ದೇ ಇರುತ್ತದೆ."

ಅದನ್ನು ಆ ಚಿತ್ರವನ್ನೇ ಹತ್ತಿರದಿಂದ ಪರಿಶೀಲಿಸಿ

"ಆಹಾ – ಬಹಳ ಚಿಕ್ಕದು – ನೋಡು! ಅದಾಗಲೇ ನಿದ್ದೆ ಮಾಡುತ್ತಿದೆ"

ಎಂದ. ಹೀಗೆ ಈ ಪುಟ್ಟ ರಾಜಕುಮಾರನೊಡನೆ ನನ್ನ ಪರಿಚಯವಾಯಿತು. ■




ಒಬ್ಬ ಬಾಸ್ ತನ್ನ ಸಹೋದ್ಯೋಗಿಗಳಿಗೆ ಒಂದು ಸ್ಪರ್ಧೆ ಏರ್ಪಡಿಸಿದ್ದರು. ಏನೆಂದರೆ ಒಂದು ದೊಡ್ಡ ಹೊಂಡದಲ್ಲಿ ಸುಮಾರು ಐದಾರು ಮೊಸಳೆಗಳು ಇರುತ್ತವೆ. ಯಾರು ಈ ಕಡೆಯಿಂದ ಆ ಕಡೆಗೆ ಈಜಿಕೊಂಡು ಹೋಗಿ ತಲುಪುತ್ತಾರೋ ಅವರಿಗೆ ಐವತ್ತು ಲಕ್ಷ. ಈಜಿಕೊಂಡು ಹೋಗುವಾಗ ಮೊಸಳೆ ಬಾಯಿಗೆ ಸಿಕ್ಕು ಸತ್ತರೆ ಅವರ ಮನೆಯವರಿಗೆ ಹತ್ತು ಲಕ್ಷ. ಎಲ್ಲರೂ ನಿಂತಿರುವಾಗ ಒಬ್ಬ ಮಾತ್ರ ನೀರಿಗೆ ಬಿದ್ದು ಅದು ಹೇಗೋ ಮೊಸಳೆಗಳಿಂದ ಬಚಾವಾಗಿ ಆಚೆ ದಡ ತಲುಪಿದ. ಅವನಿಗೆ ಐವತ್ತು ಲಕ್ಷ ಬಂತು. ಆದರೆ ಅವನು ಬಹಳ ಸಿಟ್ಟಾಗಿ ಯಾವ ನನ್ನ ಮಗ ನನ್ನನ್ನು ನೀರಿಗೆ ತಳ್ಳಿದ್ದು ಅಂತ ಕಿರುಚಿದ. ಆಗ ಅವನ ಹೆಂಡತಿ ಬಂದು ನಾನೇರಿ, ಸತ್ತರೆ ಹತ್ತು ಲಕ್ಷ ಬದುಕಿದರೆ ಐವತ್ತು ಲಕ್ಷ ಯಾರಿಗುಂಟು ಯಾರಿಗಿಲ್ಲ. ಆಫರ್ ಚನ್ನಾಗಿದೆ ಅನ್ನಿಸ್ತು ನಾನೇ ತಳ್ದೆ ಅಂದಳು. ಆಗಿನಿಂದಲೇ ಗಾದೆ ಜಾರಿಗೆ ಬಂದಿದ್ದು Behind every successful men there is a women.

# ಕಿರ್ಕಿರಿ ಕವಿತಾ

✍ಸುಮನಾ

"..ಹೊಸದಾಗಿ ಕಂಪೆನಿಯ ಕೆಲಸಕ್ಕೆ ಸೇರಿದ್ದ ಮಾಯಾ ಊರಿಂದ ಬಂದು ಅಪಾರ್ಟ್ಮೆಂಟ್ ಮನೆ ಒಂದರಲ್ಲಿ ಬಾಡಿಗೆಗೆ ಇರಲಾರಂಭಿಸಿದ್ದಳು. ಕೆಲಸದವರ ಬಗ್ಗೆ ಅಲ್ಲಿನ ಮೇನೇಜ್ಮೆಂಟ್ ಕಡೆಯಿಂದ ವಿಚಾರಿಸಿ ಬಹಳ ರೆಗ್ಯುಲರ್ ಆಗಿ ಬರ್ತಾಳೆಂದೂ, ಕೆಲಸ ಚೆನ್ನಾಗಿ ಮಾಡ್ತಾಳೆಂದು ಹೆಸರು ಪಡೆದಿದ್ದ ಕವಿತಳನ್ನು ಕೆಲಸಕ್ಕೆ ಗೊತ್ತು ಮಾಡಿಕೊಂಡಿದ್ದಳು. ತುಂಬಾನೇ ಚೆನ್ನಾಗಿ ಕೆಲಸ ಮಾಡುತ್ತಿದ್ದ ಕವಿತ ಬೇರೆ ಕೆಲಸದವರಂತೆ ಸುಮ್ ಸುಮ್ನೆ ಕಳ್ಳ ನೆಪ ಹೇಳೋದೂ, ರಜೆ ಕೇಳೋದೂ ಒಂದೂ ಇರಲಿಲ್ಲ.

ಮಳೆಯಲ್ಲೂ ಛತ್ರಿ ಹಿಡಿದು ಬರ್ತಿದ್ದಿದ್ದು, ಹೊಸದರಲ್ಲಿ ಇವಳ ಕೆಲಸ ಇಷ್ಟವಾಯಿತಾದ್ರೂ ವೀಕ್ ಎಂಡ್‌ನಲ್ಲಿ ಬೆಳ್, ಬೆಳ್ ಬೆಳಿಗ್ಗೆ ಬಂದು ಬೆಲ್ ಮಾಡಿ ಎಬ್ಬಿಸ್ತಿದ್ದಿದ್ದು ಮಾಯಾಗೆ ತುಂಬಾನೇ ಟಾರ್ಚರ್ ಅನ್ನಿಸ್ತಿತ್ತು. ವಾರವೆಲ್ಲಾ ಕೆಲಸ ಮಾಡಿ ಸ್ವಲ್ಪ ನಿಧಾನವಾಗಿ ಏಳಬೇಕೆನಿಸುತ್ತಿತ್ತು. ಹಾಗಾಗಿ ಸ್ವಲ್ಪ..... ಲೇಟ್ ಆಗಿ ಬಾರಮ್ಮ ಅಂದ್ರೆ ಇಲ್ಲಮ್ಮ, ಇನ್ನೊಂದು ಮನೇಲಿ ಮಕ್ಕಳನ್ನ ಕೂರಿಸೋ ಕೆಲ್ಸ ಇರುತ್ತೆ, ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅಂತ ಅನ್ನುತ್ತಿದ್ದಳು..ಮಕ್ಕಳನ್ನು ಕೂರಿಸೋದು ಅಂದ್ರೆ ಏನಮ್ಮ ಅಂತ ತಮಾಷೆಯಾಗಿ ಮಾಯ ಕೇಳಿದಾಗ, ಅದೇ ಅಮ್ಮೋರೆ, ಮಕ್ಕಳನ್ನು ನೋಡಿಕೊಳ್ಳುವ ಕೆಲಸ ಅಂದ್ಲು,ಓ..ಹೋ..ಬೇಬಿ ಸಿಟ್ಟಿಂಗ್ ಅನ್ನೋದಕ್ಕೆ ಅವರ ಭಾಷೆಯ ತರ್ಜುಮೆ ಅಂತ ಮನದಲ್ಲೇ ನಕ್ಕಳು.

ಅದೂ ಅಲ್ದೆ ಗಂಡ, ಹೆಂಡ್ತಿ ಆಗಾಗ ಮಾಲಿಗೋಗ್ತಾರೆ, ಬರೋವಾಗ ತುಂಬಾ ಗಿಡಗಳ್ನ ತರ್ತಾರೆ, ಯಾವ ತೋಟದ ಕೆಲ್ಸ ಮಾಡ್ತಾರೋ ಅಂದ್ಲು. ಮತ್ತೆ ಕವಿತ..ಅಬ್ಬಬ್ಬಾ... ಇದು ಮಾಲ್ ಅನ್ನೋದು ಇವಳಿಗೆ ತೋಟದ ಮಾಲಿ ಕೆಲಸ ಆಗಿದೆ ಅಂತ ನಕ್ಕಾಗ ಯಾಕ್ರವ್ವಾ ನಗ್ತೀರಿ..ಅಂದ್ಲು ಅದು, ಮಾಲಿ ಕೆಲ್ಸ ಅಲ್ಲಮ್ಮ, ಮಾಲ್ ಅಂದ್ರೆ ಭಾರೀ ದೊಡ್ಡ ಅಂಗಡಿತರ ಅದೊಂದು ಪುಟ್ಟ ಪರ್ಪಂಚದಂಗೆ ಇರುತ್ತೆ, ಅಲ್ಲಿ ಎಲ್ಲಾ ಸಿಗುತ್ತೆ ಅಂದ್ಲು ಮಾಯಾ.

ಏನೋ ಕಣ್ರವ್ವ, ನಾನಂತೂ ಅವರ ಮಕ್ಕಳನ್ನ ಅವ್ರು ಸಂಜೆ ಬರೋ ಗಂಟಾ ನೋಡ್ಬೇಕು ಅಂದ್ಲು.

ಇವಳ ಪ್ರಾಮ್ಟ್ ನೆಸ್ ನೋಡಲಾಗದೆ, ಒಮ್ಮೆ ಮಾಯ ಅಂದಳು..ನೀನು ಯಾವಾಗ್ಲಾದ್ರೂ ರಜ ಬೇಕು ಅಂದ್ರೆ ತೊಗೊಳಮ್ಮ, ಪಾಪ ಒಂದೇ ಸಮನೆ ಕೆಲಸ ಮಾಡಿ ಸುಸ್ತಾಗಿರ್ತೀಯ ಅಲ್ವಾ..ಅಂದಾಗ ಏ..ಇಲ್ರಮ್ಮ..ನಂಗೆ ಕೆಲಸ ಇಲ್ದಿದ್ರೇನೆ ಬೋ ಬೇಜಾರಾಯ್ತದೆ..ಬೇಕಾದ್ರೇ, ಇನ್ನೂ ನಿಮ್ಮ ಬೇರೆ ಕೆಲಸದ ಜೊತೆಗೆ ನಿಮ್ಮ ಅಡಿಗೆ ಕೆಲ್ಸಾನೂ ಯೋಳಿ, ಮಾಡ್ಕೊಡ್ತೀನಿ ಅಂದಿದ್ದು ನೋಡಿ, ಗಾಬ್ರಿಯಾದ್ಲು ಮಾಯ.. ತಡವರಿಸಿ, ಹ್ಞೂ.. ಅಲ್ಲ, ಅಲ್ಲ, ಇಲ್ಲ, ಹಾ.. ಈಗ ಬೇಡಮ್ಮ ನೋಡೋಣ ಊರಿಂದ ಯಾರಾದ್ರೂ ಬಂದಾಗ ಅಂದ್ಲು.. ಸರಿ, ಈಗ್ಲೇ ಈ ಗತಿ,ಇನ್ನು ಮಿಕ್ಕ ಕೆಲ್ಸಕ್ಕೂ ಇಟ್ಕೊಂಡ್ರೆ ಇಲ್ಲೇ ಪ್ರತಿಷ್ಠೆ ಮಾಡ್ಬಿಡ್ತಾಳೆ., ವರ್ಕೋಹಾಲಿಕ್ಕು, ಭಯಾನಕ ವೆರೈಟಿ, ಸಿಂಹಸ್ವಪ್ನಿ, ನನ್ನ ನಿದ್ದೆಗೆ ಕವಿದ ಕರಾಳ ಕತ್ತಲಂತೆ, ಅವಳು ಕವಿತ ಆದ್ರೆ ನಾನು ಕುಪಿತ ಆಗೋ ಹಾಗೆ ಮಾಡ್ತಾಳೆ ಈ ಕಮಂಗಿ ಅಂತ ಮನಸ್ನಲ್ಲೇ ಬಯ್ಕೊಂಡ್ಲು...

ಈ ಥರ ಪ್ರಾಬ್ಲಂ ಬಹುಷಃ ಯಾರ್ಗೂ ಬಂದಿರ್ಲಿಕ್ಕಿಲ್ಲ ದೇವ್ರೇ ಈ ಸ್ಥಿತಿ ನನ್ನ

ಶತ್ರುಗಳಿಗೂ ಬೇಡ ಅನಿಸಿತು.

ಇದೊಂಥರ" ಹೀಗೂ ಉಂಟೆ.."ಎಂಬಂಥ ಪರಿಸ್ಥಿತಿ,ಇದ್ರಿಂದ ಹೊರಬರೋದು ಹೇಗೆ..?? ಸರಿ, ಒಂದು ಪ್ಲಾನ್ ಮಾಡ್ತೀನಿ ಅಂತ.

ಅವತ್ತು ಬೆಳಿಗ್ಗೆ ಕವಿತ ಬಂದಾಗ ನೋಡು, ಕವಿತ,ನಾಳೆ ನಾಡಿದ್ದು ನಾನು ಇರೋಲ್ಲ, ಆಫೀಸ್ ಕೆಲ್ಸಕ್ಕೆ ಬೇರೆ ಊರಿಗೆ ಹೋಗ್ತಿದೀನಿ..ನಾನು ಬಂದ ಮೇಲೆ ನಿಂಗೆ ಹೇಳ್ತೀನಿ, ಮೂರು ದಿನ ಆದ್ರೂ ಆಗಬಹುದು ಅಂದಾಗ, ಅಯ್ಯೋ ನಂತಾವ ಫೋನ್ ಇಲ್ಲವ್ವ, ಮೊನ್ನೆ ಕೈ ಜಾರಿ ಬಿದ್ದು, ಒಡೆದಿತ್ತು, ರಿಪೇರಿಗೆ ಕೊಟ್ಟಿವ್ನಿ. ನಾನೇ ಎಲ್ಡು ದಿನ ಬಿಟ್ಬರ್ತೀನಿ ಅಂದ್ಲು.. ಅಯ್ಯಪ್ಪ, ಇನ್ನು ನಾನು ಬರೋಕ್ಕೆ ಮುಂಚೇನೇ ಮನೆ ಬಾಗಿಲಿನಲ್ಲಿ ಹಾಜರಾಗ್ಬಿಡ್ತಾಳೆ ಅಂತ..




ಅಯ್ಯೋ, ಪರ್ವಾಗಿಲ್ಲ ಬಿಡು, ನಾನೂ ಬಂದು ಸ್ವಲ್ಪ ರೆಸ್ಟ್ ತೊಗೋಳೋದು ಬೇಡ್ವಾ..ಆ ಪಕ್ಕದ ಬಿಲ್ಡಿಂಗ್ ನಲ್ಲಿ ಕೆಲಸ ಮಾಡೋ ಬಸಮ್ಮ ಹೇಗೂ ನಿನ್ನ ಫ್ರೆಂಡು,ನಮ್ಮ ಆಫೀಸಿನ ಹತ್ತಿರಾನೇ  ಕೆಲಸ ಮಾಡ್ತಾಳೆ .ನಾನು ಹೋಗ್ತಾ,ಬರ್ತಾ ಸಿಗ್ತಾನೇ ಇರ್ತಾಳೆ..ಅವಳ ಹತ್ತಿರ ಹೇಳಿ ಕಳಿಸ್ತೀನಿ ಅಂದ್ಲು.

ಸರಿ, ಆಯ್ತು ಅಮ್ಮೋರೆ..ಅಂತ ಮನಸ್ಸಿಲ್ಲದ ಮನಸ್ಸಿಂದ ಹೊರಟಳು.

ಅಬ್ಬಾ, ಇನ್ನೆರಡು ದಿನ ಹಾಯಾಗಿರಬಹುದು, ಗೆಳತಿ ರಮ್ಯಾಳಿಗೂ ಬರಲು ಹೇಳ್ತೀನಿ, ಅವಳು ರವೆ ಪಕೋಡ, ಹೀರೆಕಾಯಿ ಬೋಂಡ ಚೆನ್ನಾಗಿ ಮಾಡ್ತಾಳೆ, ಮಳೆಯಲ್ಲಿ ಬಿಸಿ ಬಿಸಿ ಯಾಗಿ ಮಾಡಿಸಿ ಚಟ್ ಪಟಾ ಸಾಸ್ ಹಾಕ್ಕೊಂಡು ಚೆನ್ನಾಗಿ ಬ್ಯಾಟಿಂಗ್ ಮಾಡಬಹುದು ಅಂತ ಕನಸು ಕಾಣ್ತಾ ಫೋನು ಮಾಡಿದಾಗ ಅವಳು..ಅವರ ಮನೆ ಕಡೆ ಮದುವೆ ಕಾರ್ಯಕ್ರಮಕ್ಕೆ ಹೋಗಬೇಕಾಗಿದೆ ಕಣೇ, ಅದಕ್ಕೆ ಬರೋಕಾಗೊಲ್ಲ ಅಂತ ತಿಳಿಸಿದಳು. ಸರಿ, ಮಾಯಾ ಮಾರನೇ ದಿನ ಲೇಟ್ ಆಗಿ ಎದ್ದು, ಯಾವುದೇ ಗಡಿಬಿಡಿಯಿಲ್ದೆ ಆನ್ಲೈನ್  ನಲ್ಲಿ ತಿಂಡಿ, ಊಟ, ಸಂಜೆಗೆ ಬಿಸಿ ಬಿಸಿ ಆಲೂ ಬೋಂಡ, ಮೆಣಸಿನಕಾಯಿ ಬಜ್ಜಿ ತರಿಸುವ ವ್ಯವಸ್ಥೆ ಮಾಡಿಕೊಂಡಳು, ಸ್ಟ್ರಾಂಗಾದ ಕೂರ್ಗ್ ರೆಡಿ ಕಾಫಿ ಮಾಡಿ ಕೊಂಡು, ಸ್ವರ್ಗಸುಖ ಅನುಭವಿಸಿದಳು..ಮತ್ತೆ ಮರುದಿನವೂ ಅದೇ ವ್ಯವಸ್ಥೆ..ಅಬ್ಬ, ಕವಿತಳ ಕಾಟ ಇಲ್ಲ, ತಾನೇ ಸ್ವಲ್ಪ ಮನೆ ನೀಟ್ ಮಾಡಿದಾಗ, ವಾಹ್, ಎಷ್ಟು ನೀಟ್ ಆಗಿದೆ, ಸ್ವರ್ಗ ಸುಖದಂತೆನಿಸಿತು  ಇಷ್ಟೇ ನೀಟ್ ಆಗಿದ್ದಿದ್ರೆ ಯಾವುದೇ" ನೀಟ್ "ಪ್ರಕರಣವೂ ಆಗ್ತಿರ್ಲಿಲ್ಲ.. ಅಂತ ಯೋಚಿಸಿ, ತನ್ನ ಆಲೋಚನೆಗೆ ಅವಳಿಗೇ ನಗು ಬಂದು ನಕ್ಕಳು. ಸರಿ, ಇನ್ನು ಒಂದೇ ದಿನ ನಾಳೆ ಹಾಜರಾಗ್ಬಿಡ್ತಾಳೆ ಕವಿತ, ಅಂತ., ಬ್ರೆಡ್, ಮೊಸರು, ಎಂಟಿಆರ್ ಬೀಸಿಬೇಳೆ ಭಾತ್, ಉಪ್ಪಿಟ್ಟು, ಅವಲಕ್ಕಿಯ ರೆಡಿಮೇಡ್ ಫುಡ್ ಪ್ಯಾಕೇಟ್ಸ್ ತೊಗೊಂಡು ಬಂದು.ಹೊರಗಿನಿಂದ ಬೀಗ ಹಾಕಿ, ಹಿತ್ತಲಿಂದ ಒಳ ಬಂದು, ಬಾಗಿಲು ಹಾಕಿಕೊಂಡು ಒಳಗೇ ಇದ್ದು ಬಿಟ್ಟಳು..ಅಕ್ಕ, ಪಕ್ಕದವರೂ ಯಾರೂ ತಂಟೆಗೆ ಬರ್ತಿರ್ಲಿಲ್ಲ. ಇದು ಅವಳಿಗೂ ಬಲು ಆರಾಮವೆನಿಸಿತ್ತು.

ತಾನು ಸದಾ ನಿಶ್ಯಬ್ದ ವಾಗಿರಲೇಬೇಕಾಗಿದ್ದ ಅನಿವಾರ್ಯ ಸನ್ನಿವೇಶ..ಕಳ್ಳ ಬೆಕ್ಕಿನಂತೆ ಹೆಜ್ಜೆಯ ಮೇಲ್ಹೆಜ್ಜೆಯನಿಡುತ್ತಾ, ಎಲ್ಲೂ ಏನೂ ಶಬ್ದ ವಾಗದಂತೆ ಎಚ್ಚರಿಕೆ ವಹಿಸುತ್ತಾ ಇದ್ದಳು. ಮ್ಯೂಟ್‌ನಲ್ಲಿಟ್ಟು ಟಿ.ವಿ.ನೋಡೋದು, ಮಾಡ್ತಿದ್ಲು. ಇನ್ನು ಎರಡು ದಿನ ಆದಮೇಲೆ,ಇವತ್ತು ಬಂದುಬಿಡ್ತಾಳೋ ಏನೋ..ಅನ್ನೋ ಭಯ..ಬೇರೆ..

ಅವಳು ಬರುವ ಸಮಯವಾದಾಗಲೂ ಇನ್ನೂ ಬರದಿದ್ದುದರಿಂದ ಸ್ವಲ್ಪ ಧೈರ್ಯ ಬಂತು ಇನ್ನು ಅವಳು ಬೇರೆ ಮನೆ ಕೆಲಸಕ್ಕೆ ಹೋಗಿರ್ತಾಳೆ ಅಂತ ಸಮಾಧಾನವಾಯ್ತು.

ಆದರೆ..ಕೆಲವು ನಿಮಿಷಗಳಲ್ಲೇ ಬೆಲ್ ಆಯ್ತು, ಅಯ್ಯೋ..ಭಗವಂತ ಈಗೇನು ಮಾಡೋದು ಅಂತ ಕಂಗಾಲಾದ್ಲು.. ಆದ್ರೆ ಮರುಕ್ಷಣದಲ್ಲೆ ಧೈರ್ಯವೂ ಅನಿಸಿತು.. ಯಾಕೆಂದರೆ ಹೊರಗೆ ಬೀಗ ಹಾಕಿದ್ದು ನೋಡಿ ಹೊರಟುಹೋಗ್ತಾಳೆ.. ಅಂದುಕೊಂಡು ಸುಮ್ಮನಾದಳು..ಸ್ವಲ್ಪ ಹೊತ್ತಾಗಿತ್ತು..

ಇದ್ದಕ್ಕಿದ್ದಂತೆ ಧಢಾರ್ ಅಂತ ಪಾತ್ರೆ ಬಿದ್ದ ಸದ್ದಿಗೆ ಬೆಚ್ಚಿ ಬಿದ್ಲು ಮಾಯಾ..ಏನೂ ಅಂತ ಮೆಲ್ಲನೆ ಬಂದು ನೋಡಿದಾಗ ಅದೆಲ್ಲಿಂದ ಬಂದಿತ್ತೋ ಮಾರ್ಜಾಲ ಹಾಲಿನ ಪ್ಯಾಕೆಟ್ ಇದ್ದ ಪಾತ್ರೆಯನ್ನು ಎಳೆದಾಡಿತ್ತು.. ಇವಳಿಗೋ ಬೆಕ್ಕು ಅಂದ್ರೆ.. ಪ್ರಾಣವೇ ಹೋದಂತ ಭ'ಂಯ, ಮೆಂಲ್ಲನೆ ನೋಡಲೆಂದು ಹೆದರಿ ಬರುತ್ತಿರುವಾಗ, ಟೇಬಲ್ಗೆ




ಕಾಲು ತಗುಲಿ, ಬೀಳುವಂತಾಗಿ ಟೇಬಲ್ ಹಿಡಿದಾಗ,ಅಲ್ಲಿದ್ದ ಹೂವು,ಹಣ್ಣಿನ ಬುಟ್ಟಿ, ಟೀ ಗ್ಲಾಸ್ ದಡಬಡ ಶಬ್ದ ಮಾಡುತ್ತಾ ಉರುಳುವುದನ್ನು ತಡೆದಾಗ..ಬೇಡ ಬೇಡವೆಂದರೂ ಶಬ್ದ ವಾಯಿತು..ಜೊತೆಗೆ ಹಿತ್ತಲ ಬಾಗಿಲ ಪಕ್ಕದ ಕಿಟಕಿಯಿಂದ ಬೆಕ್ಕೊಂದು ಜಿಗಿದು ಹೋಯಿತು. ಅಯ್ಯೋ, ನನ್ನ ಮರೆವೇ..ನಿನ್ನೆ ಕಿಟಕಿ ಹಾಕೋದು ಮರ್ತಿದ್ದೆ ಅಂದ್ಕೊಂಡು ಮೆಲ್ಲನೆ ಹೋಗಿ ಭದ್ರ ಪಡಿಸಿದ ಕ್ಷಣದಲ್ಲೆ ಬಾಗಿಲ ಬೆಲ್ ಮತ್ತೆ ಟ್ರಿಣ್ ಅಂದಾಗ, ಧರೆಗೆ ಕುಸಿದಳು..ಮಾಯಾ..ಈಗ್ಯಾರು ಬರ್ತಾರೆ ? ಅಂದುಕೊಳ್ತಿರುವಂತೆ.. ಅಮ್ಮೋರೆ, ಅಮ್ಮೋರೆ, ಅಂತ ಕವಿ ಧ್ವನಿ ಯಲ್ಲಿ ಕವಿತ ಕರೆದಿದ್ದು.ಮತ್ತಷ್ಟು ಮನಸು ಕಂಗೆಡಿಸಿತು. "ಹೋದ್ಯಾ ಪಿಶಾಚಿ ಅಂದ್ರೆ ಬಂದ್ಯಾ ಬಾಗ್ಲಲ್ಲಿ "ಅಂತ ಇದೊಳ್ಳೆ ಕಿರಿಕಿರಿ, ಕವಿತಾನೋ, ಕಮಂಗೀನೋ.. ನನ್ನ ಪ್ರಾಣಹಿಂಡ್ತಾಳಲ್ಲ ಅನ್ನುವಂತಾಯ್ತು..

ಕಡೆದ ಶಿಲೆಯಂತೆ ಸೈಲೆಂಟ್ ಆದ್ಲು..ಏನೋ ಶಬ್ದ ಬರ್ತಿದೆ, ಕಳ್ಳ ಏನಾದ್ರೂ ನುಗ್ಗಿದಾನೇನೋ ಅಂತ ಇತ್ತ ಕವಿತಳಿಗೆ "ಗುಮ್ಮನ ಗುಮಾನಿ.."


ಅಮ್ಮೋರು ಊರ್ನಾಗಿಲ್ಲ, ಬಂದ್ರೆ ಫೋನ್ ಮಾಡ್ತೀನಿ ಅಂದಿದ್ರು. ಒಳಗೆ ಏನು ಮಾಯಾ ನಡೀತೈತೋ ಏನೋ, ಈ ಊರ್ನಾಗೆ ಅವರ ಕಡೇವ್ರು ಯಾರೂ ಇಲ್ಲ,ಬೀಗ ಬೇರೆ ಆಕೈತೆ, ಯಾರೋ, ಎಂಗೋ ನುಗ್ಗವ್ರೆ ಒಳ್ಗೆ..ಪಕ್ಕದ್ಮನೇವ್ರಿಗೆ ಯೋಳಬೇಕು ಅಂತ ಜೋರಾಗಿ ಅಂದುಕೊಂಡಿದ್ದು ಕೇಳಿ ಮಾಯಾಗೆ ಮೈಯೆಲ್ಲಾ ನಡುಕ..

ಅಯ್ಯೋ ಈಗೇನು ಗತಿ, ಮಾನ ಹರಾಜಾಗುತ್ತಲ್ಲ ಅಂತ..ಅವಳನ್ನು ಹೇಗಾದ್ರೂ ಹೆದರಿಸಬೇಕೆಂದು ಶೆಲ್ಫ್‌ನಲ್ಲಿದ್ದ ಬಾಕ್ಸಿನಲ್ಲಿದ್ದ ಗೆಜ್ಜೆಯನ್ನು ಕೈಲಿ ಹಿಡಿದು ಶಬ್ದ ಮಾಡಿದ್ಲು.ಘಲ್, ಘಲ್ ಅಂತ ಶಬ್ದ ಬಂದಿದ್ದು ಕೇಳಿ ಕವಿತಾಗೆ ಎದೆ ಝಲ್ಲೆಂದು ಬೆವೆತಳು. ಮೊದ್ಲೇ ಅವಳಿಗೆ ಭೂತ,ಪ್ರೇತ ಅಂದ್ರೆ ಭಯ..ಬೇರೆ, ಇದ್ರ ಬಗ್ಗೆ ಹಿಂದೆ ಒಮ್ಮೆ ಹೇಳಿದ್ದು ಮಾಯಾಗೆ ಜ್ಞಾಪಕ..

ಅಯ್ಯೋ, ಅಮ್ಮೋರೂ ಇಲ್ಲ, ಗೆಜ್ಜೆಯ ಸಬ್ದ ಬೇರೆ ಬರ್‍ತ್ಯೆತೆ..ಈಗ ಅಕ್ಕಪಕ್ಕದವರಿಗೆ ಹೇಳಿದ್ರು ಅವರ್ಯಾರೂ ನಂಬಲ್ಲ..ನಿನಗೆ ಉಚ್ಚು ಇಡಿದ್ಯೆತೆ ಅಂತಾರೆ, ಅಂತ ಹೆದರಿ ಸಪೋರ್ಟ್‌ಗೇ ಅಲ್ಲೇ ಇದ್ದ ಎತ್ತರದ ಗಿಡದ ಕೊಂಬೆಗಳನ್ನು ಹಿಡಿದಾಗ ಗೋಡೆ ಮೇಲೆ ಇದ್ದ ಬಳ್ಳಿಯೊಂದು ಭುಜದ ಮೇಲೆ ಬಿದ್ದಿದ್ದು ನೋಡಿ ಹೌಹಾರಿದಳು, ಹೆದರಿದವರ ಮೇಲೆ ಹಾವು ಹರಿದಂತೆ...ಆಗಿ,ಹೃದಯ ಬಾಯಿಗೆ ಬಂತು ಈಗೇನು ಮಾಡಲಿ ಅಂತ ಕೈನಿಂದ ದೂರ ಬಳ್ಳಿಯನ್ನೆಸೆದು, ಹೆದರಿ ಹರಿಣಿಯಂತಾಗಿದ್ದ ಕವಿತಳಿಗೆ ತಕ್ಷಣ ಬಸಮ್ಮ ಜ್ಞಾಪಕ ಬಂದು ಅಲ್ಲಿ ಇಲ್ಲದ ಬಸಮ್ಮನನ್ನು ಮನಸ್ಸಿನಲ್ಲಿ" ಮ್ಯಾನಿಫೆಸ್ಟ್" ಮಾಡ್ಕೊಂಡು. ಓ..ಬಸಮ್ಮ, ಅರೆ ಓ, ಬಸಮ್ಮ ಇಗೋ ಬಂದೇ, ಬಂದೇ ತಾಳವ್ವೋ ಅಂತ ನಾಟಕ ಮಾಡ್ತಾ ಓಡಿದಳು..ಕ್ಷಣಾರ್ಧದಲ್ಲಿ ಕವಿತಾ ಮಾಯವಾಗಿದ್ದಳು..ಕಿಟಕಿ ಪರದೆ ಸ್ವಲ್ಪವೇ ಸರಿಸಿ ನೋಡಿದ ಮಾಯಾ ನಿಟ್ಟುಸಿರಿಟ್ಟು ಹೀಗೂ ಉಂಟೇ ಅಂತ ಮನದಲ್ಲೇ ನಕ್ಕಳು.

ಇಂತಿಪ್ಪ ಮಾಯಾ –ಕಿರ್ಕಿರಿ–ಕವಿತಾ ಕಥಾಯಣ ಕಂಪ್ಲಿಟಾರ್ಪಣಮಸ್ತು.

■



# ನಿನ್ನೆಯ ಶೇಷ, ಇಂದಿನ ವಿಶೇಷ

**ಸಿಂಧು ಹರಿತಸ್**

ಎಂದಿನಂತೆ ಬೆಳಗ್ಗೆ ಬೇಗೆದ್ದು ಗಂಡ ಮಕ್ಕಳನ್ನು ಶಾಲೆ, ಕಚೇರಿಗಳಿಗೆ ಕಳಿಸುವ ವರೆಗೂ ಕೆರೆದುಕೊಳ್ಳುವುದಕ್ಕೂ ಪುರುಸೊತ್ತೇ ಇಲ್ಲದಷ್ಟು ಕೆಲಸ. ಅವರೆಲ್ಲಾ ಹೊರಟ ಮೇಲೆ ಖಡಕ್ ಚಹದ ಲೋಟ ಹಿಡಿದುಕೊಂಡು ಕುಳಿತೆ. "ಆಗದು ಎಂದು, ಕೈಲಾಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ..." ಅಣ್ಣಾವ್ರ ಹಾಡನ್ನು ನನ್ನ ಚರವಾಣಿ ಹಾಡಿತು. ಅಕಾಶವಾಣಿಯಲ್ಲ! ವ್ಯಾಯಾಮದ ಹೊತ್ತಾಯ್ತು ಅಂತ ನೆನಪಿಸಲು ಇಟ್ಟಿರೋ ಅಲಾರ್ಮ್ ಅದು. ನಮ್ಮ ಆರೋಗ್ಯನೂ ಕಾಪಾಡಿಕೊಳ್ಳಬೇಕಲ್ಲ!

ಬ್ಯಾಡ್ಮಿಂಟನ್ ರಾಕೆಟ್ ಕೈಗೆತ್ತಿಕೊಂಡು, ಕಾಲಿಗೆ ಶೂ ಕಟ್ಟಿ ನಮ್ಮ ಅಪಾರ್ಟ್ಮೆಂಟಿನ ಪ್ಲೇ ಏರಿಯಾಗೆ ಹೋದೆ. ಅದೇ ಸಮಯಕ್ಕೆ ಶಿಸ್ತಿನ ಸಿಪಾಯಿಯಂತೆ ನನ್ನ ಗೆಳತಿ ಗಾಯತ್ರಿ ಕೂಡ ಬಂದರು. ಗೃಹಿಣಿಯರು, "ಶುಭೋದಯ" ಹೇಳೋದಕ್ಕಿಂತ, "ಏನು ತಿಂಡಿ ಮಾಡಿದ್ರಿ?" ಅನ್ನೋ ಪ್ರಶ್ನೆ ಬರೋದು ಸಹಜ. ನನ್ನ ಈ ಪ್ರಶ್ನೆಗೆ ಗಾಯತ್ರಿ, "ನಿನ್ನೆಯ ಶೇಷ, ಇಂದಿನ ವಿಶೇಷ", ಉತ್ತರಿಸಿದರು.

ಅವರ ಉತ್ತರ ಕೇಳಿ ನನಗೆ ಆಶ್ಚರ್ಯ, ಕುತೂಹಲ ಎರಡೂ ಆಯಿತು. ಅವರ ಮುಖದಲ್ಲಿ ಏನೋ ಸಾಧಿಸಿದ ಖುಷಿಯೂ ಇತ್ತು. ಬ್ಯಾಡ್ಮಿಂಟನ್ ಕಾಕನ್ನು ಸರ್ವ ಮಾಡುತ್ತ, "ಅದೇನ್ರಿ ನಿಮ್ಮ ಮಾತಿನ ಅರ್ಥ?" ಪ್ರಶ್ನೆಯನ್ನೂ ಸರ್ವ್ ಮಾಡಿದೆ.

"ನೆನ್ನೆ ರಾತ್ರಿ, ನಮ್ಮ ಚಿಕ್ಕಮ್ಮನ ಕುಟುಂಬ ಮನೆಗೆ ಬರುವುದು ನಿಶ್ಚಯವಾಗಿತ್ತು.

"ಯಾರು, ರಾಜಾಜಿನಗರದವರೆ?"

"ಹೂಂ. ಅವರ ಮಕ್ಕಳು, ಮೊಮ್ಮಕ್ಕಳೆಲ್ಲ ಫಾರಿನ್ ಇಂದ ಬಂದಿದ್ದಾರೆ. ಅದಕ್ಕೆ ಕರೆದಿದ್ದೆ. ಅಷ್ಟು ಜನ ಬರ್ತಾರೆ ಅಂತ ಒಂದು ಗಾಡಿ ಪೂರಿ ಹಿಟ್ಟು ಕಲಸಿ, ಅಲೂಗೆಡ್ಡೆ ಪಲ್ಯ ಮಾಡಿ ಕಾಯ್ಕೊಂಡು ಕೂತಿದ್ರೆ, ರಾತ್ರಿ ಒಂಬತ್ತಕ್ಕೆ ಕರೆ ಮಾಡಿ, 'ಅನಿವಾರ್ಯ ಕಾರಣ, ಬರೋಕಾಗೊಲ್ಲ.' ಅನ್ನೋದ!"

"ಮತ್ತೆ, ಅಷ್ಟೊಂದು ಪೂರಿನ ಏನು ಮಾಡಿದ್ರಿ?"

"ಇಲ್ಲಿ, ನನ್ನ ಪುಣ್ಯ ಪೂರಿ ಬಿಸಿಯಾಗಿ ಮಾಡೋಣ ಅಂತ ಹಿಟ್ಟು ಹಾಗೇ ಇಟ್ಟಿದ್ದೆ. ನಾವು ಮದ್ಯಾಹ್ನ ಮಾಡಿದ್ದ ಅನ್ನ ಸಾರು ತಿಂದು ಮಲಗಿದ್ವಿ. ಹಿಟ್ಟು ಮತ್ತೆ ಪಲ್ಯ ತಂಗಳು ಪೆಟ್ಟಿಗೆ ಸೇರಿತು."

"ರಾತ್ರಿ ಮಾಡಿದ್ದನ್ನ ಬೆಳಗ್ಗೆ ತಿನ್ನಕ್ಕೆ ಒಪ್ತಾರ ನಿಮ್ಮನೇಲಿ?"

"ಸಾಮಾನು ದುಬಾರಿ ಅಂತ ಕಣ್ ಕಣ್ ಬಿಡ್ತಾರೆ ಅಷ್ಟೆ. ರಾತ್ರಿ ಮಾಡಿದ್ದು ತಿನ್ನಕ್ಕೆ ಮಾತ್ರ ಬಾಯೇ ಬಿಡಲ್ಲ"

ಅವರ ಮಾತಿಗೆ ಇಬ್ಬರಿಗೂ ನಗು ಬಂತು. ಆಟ ಮುಂದುವರೆಸುತ್ತ, ಕತೆನೂ ಮುಂದುವರೆಸಿದರು.

"ಬೆಳಗ್ಗೆ ಆ ಹಿಟ್ಟಿನೊಳಗೆ ಪಲ್ಯ ಹಾಕಿ, ಲಟ್ಟಿಸಿ, ಆಲು ಪರಾಠ ಸಿದ್ದ ಪಡಿಸಿದೆ. ಮಕ್ಕಳು ಆಸೆಯಿಂದ ಒಂದು ಪರಾಠ ಹೆಚ್ಚೇ ತಿಂದ್ರು. ಸಾಲದ್ದಕ್ಕೆ ನಮ್ಮ ಯಜಮಾನ್ರು ಅವರ ಸ್ನೇಹಿತರಿಗೆ ಆಲು ಪರಾಠ ಇಷ್ಟ ಅಂತ ಎರಡು ಮೂರು ಪರಾಠ ಹೆಚ್ಚು

ತೊಗೊಂಡು ಹೋದ್ರು."

"ಹಿಟ್ಟು ಖಾಲಿ ಆಯ್ತ?"

"ಹೂಂ. ನಂಗೆ ರುಚಿಗೆ ಒಂದು ಮಿಕ್ಕಿತ್ತು ಅಷ್ಟೆ. ಎಲ್ಲಾ ಗುಳುಂ ಸ್ವಾಹ". ಅವರು ವಿಜಯದ ನಗೆ ಬೀರಿದರು.




ಇರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸುವುದರಲ್ಲಿ ಭಾರತೀಯರು ನಿಸ್ಸೀಮರು. ಅದರಲ್ಲೂ ಗೃಹಿಣಿಯರು, ವಸ್ತುಗಳನ್ನು ರೂಪಾಂತರಿಸಿ ಕಸದಿಂದ ರಸ ಮಾಡುವುದರಲ್ಲಿ ಎತ್ತಿದ ಕೈ. ಹಳೆಯ ಸೀರೆ, ಬಟ್ಟೆಗಳಿದ್ದರೆ ಕೌದಿ ಹೊಲೆದು ಮನೆಯವರನ್ನು ಬೆಚ್ಚಗಿಡುವುದು ಒಂದು ಸಣ್ಣ ಉದಾಹರಣೆಯಷ್ಟೆ. ಇದೇ ಯೋಚನೆಗಳನ್ನು ಹೊತ್ತು ಮನೆಗೆ ಬಂದ ನಾನು, ಮದ್ಯಾಹ್ನದ ಅಡುಗೆ ಸಿದ್ದಪಡಿಸಲು ಅಡುಗೆಮನೆಗೆ ಹೋದೆ. ಬೆಳಗ್ಗೆ ತಿಂಡಿಗೆಂದು ಮಾಡಿದ್ದ ಅವಲಕ್ಕಿ ಹಾಟ್ಪ್ಯಾಕಿನಲ್ಲಿ ತಣ್ಣಗೆ ಮಲಗಿತ್ತು. ಆರಿ ಒಣಗಿದ್ದ ಅವಲಕ್ಕಿಯನ್ನ ಹೇಗೆ ಖಾಲಿ ಮಾಡುವುದು ಎಂದು ಯೋಚಿಸುತ್ತಿರುವಾಗಲೆ,

"ಆಲೂಗೆಡ್ಡೆ ನೂರು ರೂಪಾಯಿಗೆ ನಾಲ್ಕು ಕೆಜಿ.." ಅಂತ ವ್ಯಾಪಾರಿಯೊಬ್ಬರ ಧ್ವನಿವರ್ಧಕ ಕೂಗಿ ಸಾರುತ್ತಿದ್ದಿದ್ದು ಕಿವಿಗೆ ಬಿತ್ತು.

ನನ್ನ ಮೆದುಳಿನ ಬತ್ತಿ ಹೊತ್ತಿ, ಒಂದು ಉಪಾಯ ಹೊಳೆಯಿತು. ನಮ್ಮಜ್ಜಿಯ ವಾಯುದೋಷದ ದೆಸೆಯಿಂದ ಬಳಸದೇ ಮೂಲೆಯಲ್ಲಿ ಕಣ್ಣು ಬಂದರೂ ನಮ್ಮ ದೃಷ್ಟಿಯಿಂದ ದೂರವಾಗಿದ್ದ ಆಲೂಗೆಡ್ಡೆಯ ನೆನಪಾಯಿತು. ಅದನ್ನು ತೊಳೆದು, ಬೇಯಿಸಿ, ಉಪ್ಪು ಖಾರ ಹದವಾಗಿ ಹಾಕಿ ಬೆರೆಸಿದೆ. ಅವಲಕ್ಕಿಯಲ್ಲಿದ್ದ ಹಸಿರುಮೆಣಸಿನ ಕಾಯಿ ಮತ್ತು ಕರಿಬೇವುಗಳನ್ನು ಆರಿಸಿ ತೆಗೆದುಹಾಕಿ, ಮಸಾಲೆ ಹಾಕಿದ ಆಲೂಗೆಡ್ಡೆಯೊಂದಿಗೆ ಹಿಟ್ಟಿನ ಹದಕ್ಕೆ ಕಲಸಿಟ್ಟೆ.

ಸಂಜೆ ಗಂಡ, ಮಕ್ಕಳು ಬರುವ ಸಮಯವಾದಾಗ ಅದನ್ನು ಚಿಕ್ಕ ಚಿಕ್ಕ ಗೋಳಾಕಾರದ ಬಿಲ್ಲೆಗಳ ರೂಪ ಕೊಟ್ಟು ಎಣ್ಣೆಯಲ್ಲಿ ಕರಿದಿಟ್ಟೆ. ಶಾಲೆಯಿಂದ ಬಂದ ಮಕ್ಕಳು "ಅಮ್ಮ, ಏನೋ ಘಮ ಘಮ ಅಂತಿದೆ! ಏನ್ ಮಾಡಿದ್ಯ ಸ್ನ್ಯಾಕ್ಸ್‌ಗೆ?" ಎಂದು ಆಸೆಯಿಂದ ಕೇಳಿದರು.


"ಫ್ರೆಶ್ ಅಪ್ ಆಗಿ ಬನ್ನಿ, ಇವತ್ತು ಕಟ್ಲೆಟ್ ಮಾಡಿದ್ದೀನಿ" ಎಂದಾಗ ಅವರು ಅಲ್ಲೇ ಕುಣಿಯಲಾರಂಭಿಸಿದರು. ಚಕಚಕನೇ ಬಟ್ಟೆ ಬದಲಾಯಿಸಿ ಬಂದು ಅಡುಗೆ ಮನೆಗೆ ದಾಳಿ ಮಾಡಿ, ನಾಲಿಗೆ ಸುಟ್ಟರೂ ತಲೆ ಕೆಡಿಸಿಕೊಳ್ಳದೆ ಕಟ್ಲೆಟ್ ಕಡಿದರು. ಮೊದಲ ತುತ್ತಿನಿಂದಲೇ ಹೊಗಳಿಕೆಯ ಸುರಿಮಳೆ ಶುರುವಾಯಿತು!

"ಹೊಟ್ಟೆ ತುಂಬತ್ತೆ ಆದರೆ ಮನಸ್ಸು ತುಂಬಲ್ಲ ಅಮ್ಮ", ಮಗಳ ಮಾತಾದರೆ,

"ಅಪ್ಪಂಗೆ ಉಳಿಸೋದೆ ಬೇಡ ಅಮ್ಮ, ನಾವಿಬ್ರೇ ಖಾಲಿ ಮಾಡಿಬಿಡ್ತೀವಿ" ಎಂದು ಮಗ ಬಾಣಲೆ ಮುಂದೆಯೇ ತಟ್ಟೆ ಚಾಚಿದ. ಆ ಮಾತುಗಳು ಶಹಬಾಷ್ ಎಂದು ನನ್ನ ಬೆನ್ನು ತಟ್ಟಿದ ಹಾಗೆ ಅನ್ನಿಸಿತು.

ಇನ್ನು ಮನೆಯವರು, "ಹೋಟೆಲಿನಲ್ಲಿ ಅಷ್ಟು ದುಡ್ಡು ಕೊಟ್ಟು ಒಂದು ಕಟ್ಲೆಟ್ ತಿಂತೀವಿ. ಇಷ್ಟು ರುಚಿ ಶುಚಿಯಾಗಿ ಇರೊಲ್ಲ! ಮನೆಯಲ್ಲಿ ನೋಡು ಫ್ರೀ ಆಗಿ ಎಷ್ಟ್ ಬೇಕೋ ತಿನ್ನಬಹುದು" ಅಂತ ಲೆಕ್ಕಾಚಾರ ಹಾಕುತ್ತಲೇ ನಾಲ್ಕೈದು ಕಟ್ಲೆಟ್ಟನ್ನು ಇಳಿಸಿದರು.

ಈ ಕಟ್ಲೆಟ್ ಪ್ರಯೋಗ ಮಾಡಿ ಈಗ ಎರಡನೇ ವಾರ್ಷಿಕೋತ್ಸವ ಆಗಿದೆ. ನಮ್ಮನೆಯಲ್ಲಿ ಉಪ್ಪಿಟ್ಟು ಮತ್ತೆ ಅವಲಕ್ಕಿ ಮಿಕ್ಕರೆ, ಕಟ್ಲೆಟ್ ಮಾಡುವುದು ಖಾಯಂ. ಈ ಗುಟ್ಟು ನನ್ನ ಮಕ್ಕಳಿಗೆ ಗೊತ್ತಿಲ್ಲ. ಕಳೆದ ವಾರ ಒಂದು ಮದುವೆಯ ಆರತಕ್ಷತೆಯಲ್ಲಿ ಕಟ್ಲೆಟ್ ಬಡಿಸಿದರು. ಆಸೆಯಿಂದ ಬಾಯಿಗೆ ಹಾಕಿಕೊಂಡ ನನ್ನ ಮಗ, ಮುಖ ಹಿಂಡುತ್ತ, "ಇದನ್ನು ಕಟ್ಲೆಟ್ ಅಂತಾರ? ಅವರಿಗೆ ಕಟ್ಲೆಟ್ ಮಾಡೊದನ್ನ ಕಲಿಸಿಕೊಡಮ್ಮ" ಅಂತ ಹೇಳಿ ಅದನ್ನು ಬದಿಗಿಟ್ಟ! ■



# “ಕನ್ನಡದೊಸ” ವ್ಯಾಕರಣ

ಎಸ್. ರಾಮಮೂರ್ತಿ

ಬಹಳ ವರ್ಷಗಳ ಹಿಂದೆ ನಮಗೆ ಷೇಕ್ಸ್ಪಿಯರನ 'ಹ್ಯಾಮ್ಲೆಟ್' ಡಿಗ್ರಿ ತರಗತಿಗಳಿಗೆ ಪಠ್ಯವಾಗಿತ್ತು. ಪಾಠ ಮಾಡಲು ಬಂದ ಅಧ್ಯಾಪಕರು ಶುರು ಮಾಡಿದರು: ನೋಡೀ, ಇವತ್ತಿನ ಪಾಠ ಆಮ್ಲೆಟ್. ಆಮ್ಲೆಟ್ ಅಲ್ಲ, ಆಮ್ಲೆಟ್. ನನಗೆ ತಲೆ ತಿರುಗಿತು. ಏನು ಹೇಳ್ತಿದ್ದಾರೆ ಅನ್ನೋದು ತಕ್ಷಣಕ್ಕೆ ಗೊತ್ತಾಗಲಿಲ್ಲ. ತಲೆ ಕೆರೆದುಕೊಂಡೆ. ತಲೆ ಕೆರೆದುಕೊಂಡರೆ ತಲೆಗೆ ಹೊಳೆಯುತ್ತಂತೆ. ಹಾಗಂತ ನಮ್ಮ ತಾತ ಹೇಳ್ತಾ ಇದ್ದರು. ಮೊದಲನೇ ಸಲ ಹೇಳಿದ್ದು ಹ್ಯಾಮ್ಲೆಟ್, ಎರಡನೇದು ಆಮ್ಲೆಟ್ ಮೂರನೇದೂ ಹ್ಯಾಮ್ಲೆಟ್ ಅಂತ ನಿಧಾನಕ್ಕೆ ಅರ್ಥವಾಯಿತು. ಡಿಗ್ರಿ ವಿದ್ಯಾರ್ಥಿಯಾಗಿದ್ದ ನಾನು ಅಷ್ಟನ್ನೂ ಅರ್ಥ ಮಾಡಿಕೊಳ್ಳದಿದ್ದರೆ ಹೇಗೇ? ಇರಲಿ. ಕೆಲವರಿಗೆ ಹೊರಳಲ್ಲ ನಾಲಗೆ. ಏನು ಮಾಡೋಕಾಗತ್ತೆ? ನಾವೇ ಅಡ್ಜಸ್ಟ್ ಮಾಡಿಕೋಬೇಕು. 'ಅ'ಕಾರ 'ಹ'ಕಾರಗಳ ಹಾವಳಿ ಇದ್ದೇ ಇತ್ತಾದರೂ ಪಾಠ ಮಾತ್ರ ತುಂಬ ಚೆನ್ನಾಗಿ ಮಾಡಿದರು. ಇವತ್ತಿಗೂ ಆಗಾಗ ಅವರನ್ನು ಸ್ಮರಿಸಿಕೊಂಡು ನಮಿಸುತ್ತಲೂ ಇರ್ತೀನಿ ಅಂತಿಟ್ಟುಕೊಳ್ಳಿ.




ಇದನ್ನೆಲ್ಲ ಯಾಕೆ ಹೇಳೋಕೆ ಬಂದೇಂತಂತಂದರೇ

. . . . . . .

ಕೆಲವರ ಬಾಯಲ್ಲಿ 'ಅಕ್ಕಿ' ಅಪಭ್ರಂಶಗೊಂಡು 'ಹಕ್ಕಿ'ಯಾಗಿ 'ಆ'ರಾಡತ್ತೆ, 'ಹ'ರಳೆಣ್ಣೆ 'ಅ'ರಳೆಣ್ಣೆಯಾಗತ್ತೆ (ಸಾಧ್ಯವೇ?) ಬೆಳಿಗ್ಗೆ ಹಾಲಿನವಳ 'ಆಲೂ' ನನ್ನ ಪಾಲಿಗೆ ಅಲಾರಂ ಆಗತ್ತೆ, 'ಹೀಗಾದದ್ದು' 'ಈಗಾಗತ್ತೆ', 'ಹುಚ್ಚ'ನೇ 'ಉಚ್ಚ'ನಾಗಿಬಿಡ್ತಾನೆ, ನಾಮಕರಣ ಮಾಡುವ ಬದಲು ಒಲೆಯ ಮೇಲೆ ನೀರಿಡ್ತಾಳೆ (ಹೆಸರು–ಎಸರು ಮಡುಗೋದು), 'ಹೋಮ'ಕುಂಡ 'ಓಮ'ಕುಂಡವಾಗಿ ಈಗ 'ಓಂಕುಂಡ'ವಾಗಿಬಿಟ್ಟಿದೆ. ಬಾಯಿ, ಅಂದರೆ ನಾಲಗೆ ಒರಳದಿರುವುದೇ, ಸಾರಿ, ಹೊರಳದಿರುವುದೇ ಇದಕ್ಕೆಲ್ಲ ಮುಖ್ಯ ಕಾರಣ ಅಂಬೋ ವಿಷಯವನ್ನ ಈಗಾಗಲೇ ನಾವೆಲ್ಲ ಅರಿತಿದ್ದೇವೆ. ಆದರೆ, ಬರವಣಿಗೆಯಲ್ಲಿ ಮಾತ್ರ ಈ ತಪ್ಪಾಗುತ್ತಿರಲಿಲ್ಲ (ತಮಿಳಿನಲ್ಲಿ 'ಕ' ಅಂತ ಬರೆದು ಸಂದರ್ಭಕ್ಕೆ ತಕ್ಕಂತೆ ಕ ಖ ಗ ಘ ಅಂತ ಉಚ್ಚರಿಸುವಂತೆ). ತಮಿಳರು ಇದೇ ಪದ್ಧತಿಯನ್ನನುಸರಿಸಿ ಸಾವಿರಾರು ವರ್ಷಗಳಿಂದ ಓದಿ ಬರೆದು ಬದುಕುತ್ತಿಲ್ಲವೇ?

ಆದರೆ, ಭಾಷೆ 'ವಿಕಾಸ'ಗೊಳ್ಳುತ್ತಿದ್ದಂತೆ, ಓಬವ್ವನ ಕಿಂಡಿಯಲ್ಲಿ ಹೈದರಾಲಿಯ ಸೈನಿಕರು ತೆವಳುತ್ತ ಬಂದ ಹಾಗೆ ಈ ಭಾಷೆ ಅನ್ನೋದು ವ್ಯಾಕರಣದೊಳಗೂ ನುಸುಳಿದಾಗ ಅನೇಕ ಮಡಿವಂತರು ಕೆರಳಿ ಕೆಂಡವಾದರು. ಅಂದಾಕ್ಷಣಕ್ಕೆ ಅಲ್ಲೋಲ ಕಲ್ಲೋಲವಾಗಿ ಹೋಯಿತು ಅಂತ ತಿಳಿಯೋದೇನೂ ಬೇಡ. ಅವರುಗಳು ತಲೆ ಮೇಲೆ ನೀರು ಹಾಕ್ಕೊಂಡರು, ಪರಚಿಕೊಂಡು ಗಾಯ ಮಾಡಿಕೊಂಡರಷ್ಟೆ. ಅಷ್ಟೆ.

ಇದೇ ಭಾಷೆ ಸಂಧಿಯಲ್ಲಿ ಹೇಗೆ ಸೇರಿಕೊಂಡಿತು ಅಂದಿರಾ? ಓದಿ.

ನಮ್ಮ ವ್ಯಾಕರಣದಲ್ಲಿ ಒಂದು ನಿಯಮವಿದೆ. ಅವನ + ಊರು = ಅವನೂರು, ಕೆಳಗೆ + ಇಳಿ = ಕೆಳಗಿಳಿ. ಇವುಗಳಲ್ಲಿ ಪೂರ್ವ ಪದದ ಕೊನೆಯ ಅಕ್ಷರದ ಸ್ವರವು ಉತ್ತರ ಪದದ ಸ್ವರವನ್ನು ತೆಗೆದುಕೊಂಡು, ಆ ಸ್ವರವನ್ನೇ ಇಲ್ಲವಾಗಿಸುತ್ತದೆ. ಹಾಗಾಗಿ ಇಂಥ ಸಂಧಿಯನ್ನು ಲೋಪಸಂಧಿ ಎಂದರು. ಇಲ್ಲೇ ನೋಡಿ, ವ್ಯಾಕರಣ ಅನ್ನೋದು ಬೆಳೆದದ್ದು, ಅಂದರೆ ವಿಕಾಸಗೊಂಡದ್ದು. ಉತ್ತರ ಪದದ ಮೊದಲ ವ್ಯಂಜನವು ಸ್ವರವಾಗಿ ರೂಪಾಂತರಗೊಂಡು ಸಂಧಿಯಾಗಿಬಿಡುತ್ತದೆ. ಉದಾಹರಣೆಗೆ,

ಅವರಗರಣಗಳನ್ನು (ಅವರ + ಹಗರಣಗಳನ್ನು) ಬಿಚ್ಚಿಡುತ್ತೇವೆ.

ನಮ್ಮ ಭಾರತವು ಮುಂದೇಗಿರಲಿದೆ (ಮುಂದೆ + ಹೇಗಿರಲಿದೆ) ಎನ್ನುವುದನ್ನು ಈ ಮಹಾನುಬಾವರು ಈಗ ತೋರಿಸಿಕೊಟ್ಟಿದ್ದಾರೆ.

ಅವನ ಎಸರೇಳುತ್ತಿದ್ದಂತೆ (ಎಸರು + ಹೇಳುತ್ತಿದ್ದಂತೆ) ಆತ ಬೆಚ್ಚಿಬಿದ್ದ.

ನೀನಾಗೆ (ನೀನು + ಹಾಗೆ) ಮಾಡಿದರೆ ನಾನೀಗೆ (ನಾನು + ಹೀಗೆ) ಮಾಡ್ತೀನಿ.

ಪ್ರೂಫ್ ರೀಡಿಂಗ್ ಮಾಡುವಾಗ ತಪ್ಪಾಗಿ ಅಚ್ಚಾಗಿದ್ದರೂ ನಾವು ಸರಿಯಾಗಿಯೇ ಓದಿಕೊಂಡುಹೋಗಲ್ಲವೇ? ಹಾಗೇನೇ ಇಲ್ಲೂನೂ. ಮೊದಮೊದಲಿಗೆ ಸ್ವಲ್ಪ ಕಷ್ಟವಾದರೂ ಕ್ರಮೇಣ ಅಭ್ಯಾಸವಾಗಿಬಿಡತ್ತೆ. ಆಮೇಲೆ ತಪ್ಪಿಲ್ಲದಾಗೆ (ತಪ್ಪಿಲ್ಲದ + ಹಾಗೆ) ಲೀಲಾಜಾಲವಾಗಿ ಓದಿಕೊಂಡೋಗ್ತೀವಿ (ವಿವಿರಣೆ ಬೇಡ. ನೀವೀಗಾಗಲೇ ಓದೋದನ್ನ ಕಲಿತಿದ್ದೀರಿ). ಒಂದು ಸತ್ಯ ಹೇಳ್ತೀನಿ ಕೇಳಿ. ಮೇಲಿನ ವಾಕ್ಯಗಳಲ್ಲಿ ಹೇಳಿರುವ ಎಲ್ಲ ವಿಷಯಗಳೂ ನಿಮಗೆ ಸ್ಪಷ್ಟವಾಗಿ ಅರ್ಥವಾಗಿದೆಯಲ್ಲವೇ? ಮತ್ತಿನ್ನೇನು ನಿಮ್ಮ ತಕರಾರು? ಅಂತ ಪ್ರಶ್ನೆ ಮಾಡಿದರೆ ನೀವೇನು ಉತ್ತರ ಕೊಡ್ತೀರೀ? ಭಾಷೆಯ ಉದ್ದೇಶವೇನು? ಸಂವಹನ. ಅದಾಯಿತಲ್ಲವೇ? ಓದಿಕೊಂಡು ಹೋಗಿ ಅಷ್ಟೇ.

ವ್ಯಾಕರಣದಿಂದ ಭಾಷೆ ಬೆಳೆಯಲ್ಲ, ಭಾಷೆ ಹುಟ್ಟಿದ ಮೇಲೆ ವ್ಯಾಕರಣ ಅಲ್ಲವೇ? ಮಗು ವ್ಯಾಕರಣದಲ್ಲಿ ಪದವಿ ತೊಗೊಂಡು ಆಮೇಲೆ ಮಾತಾಡೋಕೆ ಶುರು ಮಾಡತ್ಯೇ? ಇಲ್ಲವಲ್ಲಾ!

ಇದು ಇಷ್ಟಕ್ಕೇ ನಿಂತಿದ್ದರೆ ಏಗೋ ನಡೆಯುತ್ತಿತ್ತು. ಆದರೆ ಕನ್ನಡದ ಕಟ್ಟಾ ಅಭಿಮಾನಿಗಳು ಈ ಮತ್ತು ಇಂತದೇ ಅಲವಾರು ನಿಯಮಗಳನ್ನು ವ್ಯಾಕರಣದ ಪುಸ್ತಕದಲ್ಲಿ ಸೇರಿಸಬೇಕೆಂದೂ, ಆ ಪುಸ್ತಕಕ್ಕೆ ಕನ್ನಡದೊಸ (ಕನ್ನಡದ + ಹೊಸ) ವ್ಯಾಕರಣ ಅಂತ ಎಸರಿಡಬೇಕೆಂದೂ, ಮುಂದಿನ ವರ್ಷದಿಂದಲೇ ಅದು ಜಾರಿಗೆ ಬರಬೇಕೆಂದೂ ಒತ್ತಾಯಿಸುತ್ತಿದ್ದಾರೆ. ಮುಂದಿನ ವರ್ಷದಿಂದಲೇ ಈ ನಿಯಮವನ್ನು ಎಲ್ಲ ಪಠ್ಯಪುಸ್ತಕಗಳಲ್ಲಿ ಸೇರಿಸಿ ಎಂಬ ಅಕ್ಕೊತ್ತಾಯವನ್ನು ಮಂಡಿಸಿ, ಅದನ್ನು ಜಾರಿಗೆ ತರುವವರೆಗೂ ತಮ್ಮೋರಾಟವನ್ನು ನಿಲ್ಲಿಸುವುದಿಲ್ಲವೆಂಬಟ ತೊಟ್ಟಿದ್ದಾರೆ. ■

**ಜೈ ಕರ್ನಾಟಕ ಮಾತೆ!**

ಮಂಕುತಿಮ್ಮನ ಕಗ್ಗದ ಮಾದರಿಯಲ್ಲಿ ಪಾ.ವೆಂ.ಆಚಾರ್ಯ ಅವರು ಕೆಲವು ಪೆಂಗೋಪದೇಶಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಒಂದು

ಬದುಕು ಖಟರಾ ಬಸ್ಸು ವಿಧಿಯದರ ಡ್ರೈವರನು
ಕುಡಿದು ಹೊಡೆಯುತ್ತಾನೆ ಎರಡು ಕಾಣುತ್ತಾ..
ಗಟರವೋ ಮರವೋ ಸಂಕವೋ ಟ್ರಕ್ಕೋ ಗೋಡೆಯೊ
ಮಡಿದವನಿಗಾವುದೇನೋ ಎಲೆ ಪೆಂಗೇ..

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂಸಆ

✓ ತುಂಬಾ ನಿದ್ದೆ ಮಾಡಿದರೆ ಹಣ ಮಾಡಲಿಕ್ಕೆ ಆಗದು. ತುಂಬಾ ಹಣ ಮಾಡಿದರೆ ನಿದ್ದೆ ಮಾಡಲಿಕ್ಕೆ ಆಗದು.

✓ 'ಚೆನ್ನಾಗಿದ್ದೇನೆ' ಎಂದು ಎಲ್ಲರ ಬಳಿಯೂ ಹೇಳಬಹುದು. ಆದರೆ 'ತೊಂದರೆಯಲ್ಲಿದ್ದೇನೆ' ಎಂದು ಖಾಸಾ ಜನರ ಎದುರು ಹೇಳಲು ಮಾತ್ರ ಸಾಧ್ಯ.

✓ ದಿ ಬ್ಲೈಂಡ್ ಕೆನಾಟ್ ಸೀ. ದಿ ಪ್ರೌಡ್ ವಿಲ್ ನಾಟ್.

✓ ಒಳ್ಳೆಯ ಮೈದಾನಗಳು ಮ್ಯಾಚ್ ಇಲ್ಲದ ದಿನಗಳಲ್ಲೂ ಜೀವಂತವಾಗಿರುತ್ತವೆ. ಕೆಲವು ಮೈದಾನಗಳು ಮ್ಯಾಚ್ ಮುಗಿದ ಮೇಲೂ ಖಾಲಿಯಾಗುವುದಿಲ್ಲ. ಏಕೆಂದರೆ ಕೆಲವು ಆಟಗಳು ಸ್ಕೋರ್ ಕಾರ್ಡಿನಲ್ಲಿ ಮುಗಿಯುವುದಿಲ್ಲ. ಅವು ನಮ್ಮೊಳಗೆ ಮುಂದುವರಿಯುತ್ತವೆ.

✓ ದಿ ಪಾಸ್ಟ್ ಈಸ್ ವೇರ್ ಯು ಲರ್ನ್ ದಿ ಲೆಸನ್. ದಿ ಫ್ಯೂಚರ್ ಈಸ್ ವೇರ್ ಯು ಅಪ್ಲೈ ದಿ ಲೆಸನ್.

✓ ಮಾತನಾಡದೇ ಇರುವ ಮೌನವೂ ಒಂದು ಮಾತು.

✓ ಮನೆಯ ವಾಸ್ತುವಿಗಿಂತ ಮನದ ವಾಸ್ತು ಚೆನ್ನಾಗಿರಬೇಕು.

✓ ಮನಿ ಕೆನಾಟ್ ಬಯ್ ಹ್ಯಾಪಿನೆಸ್ ಬಟ್ ಇಟ್ ಈಸ್ ಕಂಫರ್ಟಬಲ್ ಟು ಕ್ರೈ ಇನ್ ಎ ಮರ್ಸಿಡೀಸ್ ದ್ಯಾನ್ ಆನ್ ಸೈಕಲ್.

✓ ಭರತನಾಟ್ಯ ಕಲಿಯುವುದು ಕಷ್ಟ. ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

✓ ಸತ್ಯವನ್ನೇ ಹೇಳಿ ನೋಯಿಸು ಪರವಾಗಿಲ್ಲ. ಆದರೆ ಸುಳ್ಳು ಹೇಳಿ ಸಮಾಧಾನ ಪಡಿಸಲು ಪ್ರಯತ್ನಿಸಬೇಡ.

✓ ಫರ್ಗಿವ್ ಯುವರ್ ಎನಿಮಿ ಬಟ್ ರೆಮೆಂಬರ್ ದಿ ಬಾಸ್ಟರ್ಡ್ಸ್ ನೇಮ್.

✓ ತೊಂದರೆಯಲ್ಲಿದ್ದವರಿಗೆ ಸಹಾಯ ಮಾಡಿದರೆ ಅವರು ನಿಮ್ಮನ್ನು ನೆನಪಿಸಿಕೊಳ್ಳುತ್ತಾರೆ ಮತ್ತೆ ತೊಂದರೆಗೆ ಸಿಕ್ಕಿಕೊಂಡಾಗ.

✓ ಹಳೆಯ ಬೀಗದ ಕೈಗಳು ಹೊಸ ಬಾಗಿಲುಗಳನ್ನು ತೆರೆಯವು.

✓ ದಿ ವೆ ವಿ ಸೀ ದಿ ಪ್ರಾಬ್ಲಮ್ ಈಸ್ ದಿ ಪ್ರಾಬ್ಲಮ್.

✓ ನೆಪಗಳನ್ನು ದೂರ ಇಟ್ಟರೆ ಯಶಸ್ಸು ದೊರೆಯುತ್ತದೆ.

✓ 'ಸಾಕು' ಮತ್ತು 'ಇನ್ನೂ ಬೇಕು' ನಡುವೆ ಇರುವ ವ್ಯತ್ಯಾಸವನ್ನು ಅರಿತಿರುವವನೇ ಖುಷಿ ಮನುಷ್ಯ.

■

# ಹಿಂದಿ ಹಾಡಿ ಕನ್ನಡ ಜೋಡಿ

**ಅಣಕು ರಾಮನಾಥ್**

ಕೌನ್ ಆಯಾ ಮೇರೇ ಮನ್ ಕೇ ದ್ವಾರೇ; ಪಾಯಲ್ ಕೀ ಝುನಕಾರ್ ಲಿಯೇ।
ಕೌನ್ ಆಯಾ...
ಯಾರಿವಳು ನನ್ನ ಮನದ್ವಾರದಲಿ ಗೆಜ್ಜೆಯ ಝುಂಕೃತಿ ಗೈದಿಹಳು

ಆಂಖ್ ನ ಜಾನೇ; ದಿಲ್ ಪಹಚಾನೇ; ಸೂರತಿಯಾ ಕುಛ್ ಐಸೀ
ಕಣ್ಣರಿಯದಿರೇಂ ಮನವರಿತಿಹುದು ಈ ಚೆಲುವಾಕೃತಿಯನ್ನು – 2

ಯಾದ್ ಕರೂ ತೋ; ಯಾದ್ ನ ಆಯೇ; ಮೂರತಿಯಾ ಏ ಕೈಸೀ
ನೆನೆಯಲು ಬಯಸೆ ನೆನಪೇ ಆಗದು ಈ ರೂಪಿನ ರೀತಿ

ಪಾಗಲ್ ಮನವಾ; ಸೋಚ್ ಮೆ ಡೂಬಾ; ಸಪನೋಂಕಾ ಸಂಸಾರ್ ಲಿಯೇ ॥
ಮನವದು ಕೆರಳಿ ಕ್ಷೋಭೆಗೆ ಹೊರಳಿ ಕನಸಲ್ಲೆ ತೇಲಾಡಿರೆ... ॥

ಕೌನ್ ಆಯಾ ಮೇರೇ ಮನ್ ಕೇ ದ್ವಾರೇ; ಪಾಯಲ್ ಕೀ ಝುನಕಾರ್ ಲಿಯೇ।
ಕೌನ್ ಆಯಾ...

ಇಕ್ ಪಲ್ ಸೋಚೂ; ಮೇರೀ ಆಶಾ; ರೂಪ್ ಬದಲ್ ಕರ್ ಆಯೀ
ಕ್ಷಣವೆನಿಸುವುದು ಎನ್ನಾಸೆಗಳೆ ರೂಪು ತಳೆದಿಹವು ಇಲ್ಲಿ – 2

ದೂಜೇ ಪಲ್ ಫಿರ್, ಧ್ಯಾನ್ ಎ ಆಯೇ; ಹೋ ನ ಕಹೀ ಪರಛಾಯೀ
ಅನಿಸುವುದೆನಗೆ ಮರುಚಣವದುವೋ ಇದ್ದೀತಾವುದೊ ನೆರಳು

ಜೋ ಪರದೇಸೀ ಕೇ ಘರ್ ಆಯೀ; ಏಕ್ ಅನೋಖಾ ಪ್ಯಾರ್ ಲಿಯೇ ॥
ಅನ್ಯನ ಮನೆಗೆ ಬಂದಿದೆ ಹರಡಲು ಪ್ರೀತಿ ವಿಶೇಷದ ಹೊನಲು ॥

■



**ಅಪರಂಜಿ ಅಕ್ಟೋಬರ್ ಸಂಚಿಕೆ ವಾರ್ಷಿಕ ವಿಶೇಷಾಂಕವಾಗಿ ಹೊರಬರಲಿದೆ.**
**ನಿಮ್ಮ ನವಿರು ನವಿರಾದ ಹಾಸ್ಯ ಲೇಖನ / ಪ್ರಬಂಧಗಳನ್ನು ಸೆಪ್ಟೆಂಬರ್ 10ರ ಒಳಗಾಗಿ ನಮಗೆ ಮೈಲ್ ಮಾಡಿ**

## ಪುಸ್ತಕ ಪರಿಚಯ




ಜಾಣ್ಣುಡಿಗಳು

ಕನ್ನಡ ಸಾಹಿತಿಗಳ

ಚೇತೋಹಾರಿ ಅನುಭವೋಕ್ತಿಗಳು

ಲೇಖಕರು : ವೈ ಎನ್ ಗುಂಡೂರಾವ್

ದೂರವಾಣಿ. 98801 09109

ಪ್ರಕಾಶಕರು

ಸ್ನೇಹ ಬುಕ್ ಹೌಸ್


ಬೆಲೆ. ರೂ. 275/–


ಪ್ರತಿಗಳನ್ನು ಕೊಳ್ಳಲು ಸಂಪರ್ಕ 9845031335

ಸುವಾರು 210 ಪುಟಗಳಲ್ಲಿ 450ಕ್ಕೂ ಹೆಚ್ಚು ಹಿರಿಯ ಸಾಹಿತಿಗಳ ಅನುಭವೋಕ್ತಿಗಳನ್ನು ನಮ್ಮ ಅಪರಂಜಿ ಬಳಗದ ಲೇಖಕರಾದ ವೈ.ಎನ್.ಗುಂಡೂರಾವ್ ಸಂಗ್ರಹಿಸಿದ್ದಾರೆ.

ಅನಕೃ ಅವರಿಂದ ಹಿಡಿದು ಹುಯಿಲಗೋಳ ನಾರಾಯಣರಾಯರವರೆಗೆ ಅಕಾರಾಂತವಾಗಿ ಮತ್ತು ಅದೃಷ್ಟದಿಂದ ಹಿಡಿದು ಸೋಲಿನವರೆಗೆ ವಿಷಯಾನುಕ್ರಮದಲ್ಲಿ ಸಂಗ್ರಹಿಸಿರುವ ಸೂಕ್ತಿಗಳು ಬಹಳ ಚನ್ನಾಗಿವೆ. ಪ್ರಾರಂಭದಲ್ಲಿ ವಿವಿಧ ಕವಿಗಳ ಕನ್ನಡಾಭಿಮಾನ ಹೊಮ್ಮುವ ಕವಿತೆಗಳೂ ಕುತೂಹಲಕರವಾಗಿವೆ.

ಇಂತಹ ಒಂದು ಅಪರೂಪದ ಸಂಗ್ರಹವನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಲೇಖಕರು ಅಭಿನಂದನಾರ್ಹರು. ಉಳಿದಿರುವುದು ಎಂದರೆ ಆಸಕ್ತರು ಈ ಗ್ರಂಥವನ್ನು ಕೊಂಡು ಲೇಖಕರನ್ನೂ ಪ್ರಕಾಶಕರನ್ನೂ ಉತ್ತೇಜಿಸುವುದು.



# ಹೆಸರು ಹೆಸರೇ

**ವಿಜಯಲಕ್ಷ್ಮೀ ಶಂಕರ್**

ಒಂದಿನ ಬೆಳಗಿನ ಗಾಳಿ ಸಂಚಾರಕ್ಕೆ ಹೋಗ್ತಿದ್ದಾಗ, ಎದುರಿನಲ್ಲಿ ಬರುತ್ತಿದ್ದವರೊಬ್ಬರು, 'ಅರರೆ ಏನ್ರೀ ನೀವಿಲ್ಲಿ, ಬಹಳ ದಿನ ಆಯ್ತಲ್ಲವೇ ನೋಡಿ? ಹೇಗಿದೀರ? ನೋಡೋಕ್ಕೇನೋ ಸರಿಯಾಗೆ ಕಾಣ್ತಿದ್ದೀರಿ?'. ಏನು ಎತ್ತ ಅಂತ ಒಂದೇ ಸಮನೆ ಪ್ರಶ್ನೆ ಮೇಲೆ ಪ್ರಶ್ನೆಗಳ ಸುರಿಮಳೆ. ನಾನೋ ಭಾರಿ ಮರೆಗುಳಿ. ಮುಖ ಗೊತ್ತಿದ್ದರೆ ಹೆಸರು ಗೊತ್ತಿಲ್ಲ, ಹೆಸರು ತಿಳಿದಿದ್ರೆ ಮುಖ ಗೊತ್ತಿಲ್ಲ. ಈ ತರಹದವಳು. ನಾನು ಸುಮ್ನಿದ್ದದ್ದನ್ನ ನೋಡಿ, ತಡವರಿಸುತ್ತಾ, 'ರೀ ನೀವು ವಿಜಯ ಅಲ್ವಾ? ಎಷ್ಟು ವರ್ಷ ಆಯ್ತು ನೋಡಿ, ಪಿಯುಸಿನಲ್ಲಿ ಒಟ್ಗೆ ಇದ್ದವಲ್ವಾ?' ಅಂತ ಜ್ಞಾಪಿಸುವುದಕ್ಕೆ ಪ್ರಯತ್ನ ಮಾಡಿದರು. ಈಚೆಗೆ ನನ್ನನ್ನು ವಿಜಯ ಅಂತ ಕರಿಯೋರೆ ಬಹಳ ಕಡಿಮೆಯಾಗಿ ಅಥವಾ ಇಲ್ಲವೇ ಆಗಿ, ನನಗೆ ಹೀಗೆ ಯಾರೋ ಕರೆದಾಗ ಆಶ್ಚರ್ಯ ಆಯ್ತು. 'ನನ್ನ ಹೆಸರು ಸುಮಿತ್ರ, ನಮ್ಮನೆ ನಿಮ್ಮನೆ ಹತ್ರ ಎರಡನೇ ಬೀದೀಲ್ಲಿತ್ತು, ಒಟ್ಗೆ ಓದ್ತಿದ್ವಿ' ಅಂತ ಹೇಳಿದಾಗ 30 ವರ್ಷಗಳ ಹಳೆಯ ಗೆಳತಿಯ ನೆನಪು ಮರುಕಳಿಸಿತು. ಉಭಯ ಕುಶಲೋಪರಿ ಮುಗಿಸಿ, ನಮ್ಮನೆಗೆ ಅವಳು, ಅವಳ ಮನೆಗೆ ನಾನು ಹೋಗುವುದು ಬರುವುದು ಅಂತ ಹೇಳಿ, ಹೆಸರಿನ ಗೊಂದ್ಲಾಟ ಎಷ್ಟಪ್ಪ ಅನ್ನಿಸ್ತು. ನಾನು, ನನ್ನ ಹೆಸರು, ಮತ್ತೊಬ್ಬರು ನಮ್ಮನ್ನು ಹೇಗೆ ಕರೀತಾರೆ, ನಮ್ಮನ್ನ ಹೇಗೆ ಗುರ್ತಿಸ್ತಾರೆ ಎಲ್ಲಾ ಎಷ್ಟು ಮುಖ್ಯ ನಮ್ಗೆ ಅನ್ನಿಸ್ತು.

ಹುಟ್ಟಿದ ಮಕ್ಕಳಿಗೆ ಹೆಸರನ್ನಿಡುವಾಗ, ದೇವರ ಹೆಸರು, ಹಿರಿಯರ ಹೆಸರು, ನಕ್ಷತ್ರಕ್ಕೆ ಅನುಗುಣವಾದ ಹೆಸರು, ತಂದೆ ತಾಯಿಗೆ ಇಷ್ಟವಾದದ್ದು, ಹೀಗೆ ಸಂದರ್ಭಾನುಸಾರ ನಾಮಕರಣ ಮಾಡುತ್ತಾರೆ. ಭಾರತಕ್ಕೆ ಸ್ವಾತಂತ್ರ ಬಂದ ವರ್ಷ ನಾನು ಹುಟ್ಟಿದ್ದರಿಂದ ನನಗೆ ವಿಜಯಲಕ್ಷ್ಮಿ ಅಂತ ಹೆಸರು. ಅದೇ ರೀತಿ ಬಹುಮಂದಿ ತಮ್ಮ ತಮ್ಮ ಮಕ್ಕಳಿಗೆ ವಿಜಯಕುಮಾರಿ, ವಿಜಯಶ್ರೀ, ವಿಜಯನ್, ವಿಜಯಕುಮಾರ್ ಅಂತ ವಿಜಯದ ಕುರುಹಾಗಿ ಹೆಸರನಿಟ್ಟಿದ್ದರು. ಎಲ್ಲರ ಹೆಸರೂ ಕಡೆಗೆ ವಿಜಯ ಅಥವಾ ವಿಜಿಯಾಗುತ್ತದೆ.

ಶಾಲೆಗೆ ಸೇರಿದಾಗ ಶುರುವಾಯ್ತು ನೋಡಿ ಒಂದೇ ಹೆಸರಿನಿಂದಾಗುವ ಬವಣೆ, ಬೇರೆಯಾರಿಗೂ ಈ ಸಂಕಟ ಬೇಡವಪ್ಪ ಅನ್ನುವ ಹಾಗೆ. ಈ ತರಹದ ಸಂಕಟ ಅತೀ ಸರಳವಾದ ದೇವರ ಹೆಸರಾದ ಶ್ರೀನಿವಾಸ, ಶಂಕರ, ಪದ್ಮ, ಸರಸ್ವತಿಗಳಿಗೂ ತಟ್ಟಿರುತ್ತದೆ. ಸಾಮಾನ್ಯವಾಗಿ ಒಂದು ತರಗತಿಯಲ್ಲಿ ಒಂದೇ ವಯಸ್ಸಿನ ಮಕ್ಕಳಿರುತ್ತಾರೆ. ನನ್ನ ತರಗತಿಯಲ್ಲಿ, ಹುಡುಗಿಯರಲ್ಲಿ ಸುಮಾರು ಹತ್ತಕ್ಕಿಂತಲೂ ಹೆಚ್ಚು 'ವಿಜಯ'ಗಳಿದ್ದರು. ಜೊತೆಗೆ ಕೆಲವರ ತಂದೆಯರ ಹೆಸರುಗಳೂ ಒಂದೇ ಆಗಿದ್ದು ಗೊಂದಲವಾಗಿತ್ತು. ಗುರುತಿಗೆ ದಪ್ಪ ವಿಜಿ, ಕರಿ ವಿಜಿ, ಕುಳ್ಳ ವಿಜಿ, ಉದ್ದಜಡೆ ವಿಜಿ, ಗುಂಗರುಕೂದಲ ವಿಜಿ, ಪಾಳ್ಯದ ವಿಜಿ, ಕೊಪ್ಪದ ವಿಜಿ – ಅಂತ ಹೊಸ ಹೊಸ ನಾಮಕರಣಗಳೂ ಆಗುವ ಅನಿವಾರ್ಯವೂ ಬಂದಿತ್ತು. ಹಾಜರಿರುವ ಹೆಸರುಗಳನ್ನು ತರಗತಿಯಲ್ಲಿ ಉಪಾಧ್ಯಾಯರು ಕೂಗುವಾಗ ಯಾರು ಯಾರಿಗೆ ಉತ್ತರಿಸುತ್ತಿದ್ದರೋ ಗೊತ್ತಾಗುತ್ತಿರಲಿಲ್ಲ. ತರಗತಿಗೆ ಬಂದಿದ್ದವರು ಗೈರುಹಾಜರಿ, ಬರದಿದ್ದವರು ಹಾಜರಿ ಹೀಗಾಗುತ್ತಿತ್ತು. ಉಪಾಧ್ಯಾಯರು ಎಲ್ಲ ವಿಜಯರನ್ನೂ ಒಟ್ಟುಗೂಡಿಸಿ ಪರಿಚಯಿಸಿಕೊಳ್ಳಬೇಕಾಗಿತ್ತು. ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ವಾಪಸ್ಸು ಕೊಡುವಾಗ, ಅಂಕಪಟ್ಟಿಯನ್ನು ಕೊಡುವಾಗ ಯಾರದ್ದು ನಂಬರು ಯಾರಿಗೋ. ಸಾಮಾನ್ಯವಾಗಿ ಹೆಚ್ಚಿಗೆ ಅಂಕಗಳು ಬರುತ್ತಿದ್ದ ನನ್ನ ಪತ್ರಿಕೆಗಳಂತೂ ನನಗೆ

ಎಂದೂ ವಾಪಸ್ಸಾಗುತಿರಲಿಲ್ಲ.

ಒಂದೇ ಹೆಸರಿರುವ ಎಲ್ಲರಿಗೂ ಆಗುವ ತೊಂದರೆಯೇ ಆದರೂ, ಈ ವಿಷಯಗಳಲ್ಲಿ ಯಾವತ್ತೂ ಸ್ವಲ್ಪ ಸೂಕ್ಷ್ಮವಾಗಿದ್ದ ನಾನು ಇಂಗ್ಲೀಷಿನಲ್ಲಿ ಲಕ್ಷ್ಮಿ ಅಂತಿದ್ದ ನನ್ನ ಹೆಸರನ್ನು ಸ್ವಲ್ಪ ವ್ಯತ್ಯಾಸ ಮಾಡಿ ಬೇರೆ ಅಕ್ಷರಗಳನ್ನು ಬಳಸಲು ಪ್ರಾರಂಭಿಸಿದೆ. ಇದು ನನ್ನ ಅಣ್ಣನ ಸಲಹೆಯಾಗಿತ್ತು. ಇದರಿಂದ ಹಲವರು ನನ್ನನ್ನು ಗುರುತಿಸುವಂತಾಯಿತು. ಆದರೆ ನನ್ನ ತಂದೆಯವರು ನನ್ನನ್ನೂ ಮತ್ತೆ ಅಣ್ಣನನ್ನೂ ಚೆನ್ನಾಗಿ ಬೈದಿದ್ದರು. ಹಾಸ್ಯಪ್ರವೃತ್ತಿಯರಾದ ನನ್ನ ಸ್ನೇಹಿತರು ವಿಜಯಲಕ್ಷ್ಮಿಯ ಹೆಸರು ವಿಚಿತ್ರವಾಗಿ ಬದಲಾಯಿತೇ ಅಂತ ಗೇಲಿ ಮಾಡಿದರು. ಕೊನೆಗೆ ವಿಚಿತ್ರಾಕ್ಷರಗಳ ಹೆಸರೇ ಶಾಶ್ವತವಾಯ್ತು.

ಹೆಸರು ಬರೆಯುವ ರೀತಿಯಲ್ಲಿ ಸ್ವಲ್ಪ ಬೇರೆ ಇದ್ದಲ್ಲಿ ಅಂತಹದ್ದೇನು ತೊಂದರೆ ಆಗುತ್ತಿರಲಿಲ್ಲ. ಬೇರೆಯವರು ಹೇಗಾದರೂ ಬರೆಯಲಿ, ನಾನು ನನ್ನದೇ ರೀತಿಯಲ್ಲಿ ಬರೆಯುತ್ತಿದ್ದೆ. ಆದರೆ ಹೆಸರನ್ನೇ ಅರ್ಧ ಕರೆದರೆ ಆಗುವ ಹೊಸ ತರಹದ ಅನುಭವ ನನಗೆ ತುಂಬಾ ತೊಂದರೆಗೂ ಮತ್ತು ಹಾಸ್ಯಕ್ಕೂ ಕಾರಣವಾದ ಆಭಾಸಗಳನ್ನು ಮುಂದೆ ನೋಡಿ.

ನನ್ನ ಮದುವೆಯ ಸಮಯ. ನಾನು ಮದುವೆಯಾಗುವ ಗಂಡಿಗೆ ಆಗಲೆ ವಿಜಯಲಕ್ಷ್ಮಿ ಅಂತ ಹೆಸರಿನ ಅತ್ತಿಗೆ ಇದ್ದರು. ಅವರನ್ನು ವಿಜಯ ಎಂದು ಕರೆಯುತ್ತಿದುದರಿಂದ, ಅವರ ಮನೆಯಲ್ಲಿ ನನ್ನನ್ನು ಲಕ್ಷ್ಮಿ ಎಂದು ಕರೆಯುತ್ತೇವೆ ಎಂದರು. ಹೀಗೆ ನಾನು ಹುಟ್ಟಿದ್ದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಎಂದು ಹೇಳಿದ್ದೆನಲ್ಲವೇ? ಭಾರತ, ಪಾಕಿಸ್ತಾನ ಎರಡು ಹೋಳಾದಂತೆ ನನ್ನ ಹೆಸರೂ ವಿಭಜನೆಯಾಯ್ತು. ವಿಜಿ ಬಜ್ಜಿ, ಬಜಾರಿ ಬಜ್ಜಿ ಅಂತ ಏನೇನೋ ಕರೆಸಿಕೊಳ್ಳುತ್ತಿದ್ದು ಬೇಜಾರಾಗಿತ್ತು; ನನಗೂ ಸಂತೋಷವೇ ಆಯಿತು. ಹೀಗೆ ನನಗೆ ಮುಂದೆ ಲಕ್ಷ್ಮಿ ಅಂತ ಕರೆಸಿಕೊಳ್ಳುವ ರೂಢಿಯಾಗಲು ಕೆಲವು ಸಮಯ ಹಿಡಿಯಿತು. ಬೇಕಾದಷ್ಟು ಸಲ ನನ್ನನ್ನು ಕುರಿತದ್ದಲ್ಲ ಅಂತ ಮಾತನಾಡದೆ ಅಥವಾ ಮಾತಾಡಲು ಬೇಕಿಲ್ಲದಿದ್ದರೆ, ನಾನು 'ಲಕ್ಷ್ಮಿ' ಅಲ್ಲ ಅಂತ ಸುಮ್ಮನಿದ್ದ ಸಂದರ್ಭಗಳೂ ಇವೆ. ಮುಂದೆ ನಾನು ವಿಜಯಲಕ್ಷ್ಮಿಯೇ ಅಲ್ಲ ಬರಿಯ 'ಲಕ್ಷ್ಮಿ' ಎಂದು ಗುರುತಿಸುವಂತಾದಾಗ ಬಹಳ ರೇಗಿದ್ದೂ ಉಂಟು. ಮದುವೆಯ ಕರೆಯೋಲೆಯಲ್ಲಿ ನನ್ನ ಹೆಸರನ್ನು 'ಲಕ್ಷ್ಮಿ' ಎಂದೇ ಅಚ್ಚುಹಾಕಿಸಿದಾಗ ನನಗೆ ಬೇಕಾಗಿದ್ದವರೂ ನನ್ನ ಬೇರಾದ ಹೆಸರನ್ನು ನೋಡಿ ಮದುವೆಗೆ ಬರಲೇ ಇಲ್ಲ. ನಷ್ಟವೇನಾಗಲಿಲ್ಲ ಬಿಡಿ. ಫಲತಾಂಬೂಲಗಳು ಉಳಿದವು.

ನನ್ನ ಯಜಮಾನರ ಕಡೆಯವರು ಯಾರಾದರೂ ಕರೆ ಮಾಡಿದರೆ ನನ್ನ ಗುರುತು ಹೇಳಿಕೊಳ್ಳುವುದರಲ್ಲಿ ನನಗೆ ಬಹಳ ಕೋಪ ಬರುತಿತ್ತು. ಲಕ್ಷ್ಮಿ ಅಂದರೆ ಯಾರು? ಯಾವ ಲಕ್ಷ್ಮಿ ಅಂತ ಕೇಳಿ, ಶಂಕ್ರು ಹೆಂಡತಿ ಲಕ್ಷ್ಮಿಅಂದಮೇಲೆ ಗುರುತು ಹಿಡಿಯುತ್ತಿದ್ದರು. ಆಮೇಲೆ ಸಾಲದ್ದಕ್ಕೆ, ನಿನ್ನ ಹೆಸರು ವಿಜಯ ಅಲ್ವಾ? ಯಾಕೆ ಲಕ್ಷ್ಮಿ ಅಂತ ಹೇಳ್ತೀಯ ಅಂತ ಪ್ರಶ್ನೆ ಬೇರೆ. ಆಗಂತೂ ನನಗೆ ಬಹಳ ಕೋಪ ಬರುತಿತ್ತು.

ಅದಕ್ಕಿಂತ ತೊಂದರೆ ಆಗಿದ್ದು ನಾವು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಹೊರದೇಶಕ್ಕೆ ಹೊರಟಿದ್ದು, ಅರ್ಜಿ ಸಲ್ಲಿಸಿ, ನಮ್ಮ ಮದುವೆಯ ಕರೆಯೋಲೆ ಕಳುಹಿಸಿದಾಗ. ನನ್ನ ಹೆಸರು ತಾಳೆಯೇ ಆಗಲಿಲ್ಲ. ಕಡೆಗೆ, ನೋಟರಿಯೊಬ್ಬರಿಂದ ನಾನು ನಾನೇ, ಎರಡು ಹೆಸರುಗಳೂ ನನ್ನದೇ ಎಂದು ಹೇಳಿಕೆಯನ್ನು ಜೋಡಿಸಬೇಕಾಯಿತು.

ನಾನು ವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದಾಗಿನ ಹೆಸರಿನ ಗೊಂದಲವಂತೂ

ಬಹು ಸ್ವಾರಸ್ಯಮಯ. ಮದುವೆಯಾದಮೇಲೆ ವಿಜಯಲಕ್ಷ್ಮಿ ಶಂಕರ್ ಆದೆ. ಮದುವೆಯಾದ ಹೆಂಗಸೆಂದೋ, ಚಿಕ್ಕ ಹೆಸರು ಬರೆಯಲು ಹಾಗೂ ಕರೆಯಲು ಸುಲಭವೆಂದೋ Shankar ಆದೆ. ಕೆಲವರು ವಿ. ಶಂಕರ್ ಅಂತ ಬರೆದರೆ, ಮತ್ತೆ ಕೆಲವರು ವಿ.ಎಲ್.ಶಂಕರ್ ಅಂತ ಬರೆಯುತ್ತಿದ್ದರು. ಇಷ್ಟು ಸಮಯಕ್ಕಾಗಲೇ ನಾನು ವಿವಿಧ ರೀತಿಯಲ್ಲಿ ಕರೆದರೆ ಅಥವಾ ಬರೆದರೆ, ಅಷ್ಟು ಬೇಜಾರುಪಡುತ್ತಿರಲಿಲ್ಲ. ನನ್ನ ದುರಾದೃಷ್ಟಕ್ಕೆ, ನನ್ನ ಕಛೇರಿಯಲ್ಲಿ ವಿ.ಶಂಕರ್ ಎನ್ನುವ ಮಹೋದಯರೂ ಇದ್ದರು. ಹಲವು ಸಲ ನನಗೆ ತಲುಪಬೇಕಿದ್ದ ಕಡತಗಳು ಅವರಿಗೆ ತಲುಪಿಯೇ ನನಗೆ ಬರುತಿದ್ದವು. ಕಡೆಗೆ ಅವರು ತೆಗೆದುಕೊಂಡಿದ್ದ ಸಾಲದ ಕಂತು ಕೂಡ ನನಗೇ ಬರುತ್ತಿತ್ತು! ಇಂತಹ ಆಭಾಸಗಳು ಹಲವರ ಅನುಭವಕ್ಕೆ ಬಂದಿರಬಹುದು.

ಇನ್ನೂ ಒಂದು ಘಟನೆಯನ್ನು ತಿಳಿಸಲೇಬೇಕು. ನನ್ನ ಯಜಮಾನರ ಪರಿಚಯದವರೊಬ್ಬರು ಒಂದು ಸಲ ನನ್ನ ಕಛೇರಿಗೆ ದೂರವಾಣಿಯ ಮೂಲಕ, ಲಕ್ಷ್ಮಿಯೊಂದಿಗೆ ಮಾತಾಡಬೇಕು ಅಂತ ಕೇಳಿದ್ದಾರೆ. ಸರಿ ಟೆಲಿಫೋನ್ ನಿರ್ವಾಹಕಿ, ಆ ಹೆಸರಿನವರು ಯಾರೂ ಇಲ್ಲ ಎಂದರು. ಪಾಪ, ಅವರು ಮತ್ತೆ ಫೋನ್ ಮಾಡಿ, ನೋಡಿ ಅವರ ಹೆಸರು ಲಕ್ಷ್ಮಿ ಶಂಕರ್ ಅಂತ ಇರಬಹುದು ಅಂತ ಹೇಳಿದ್ದಾರೆ. ಕಛೇರಿಯ ದೂರವಾಣಿ ಪಟ್ಟಿ ತೆಗೆಸಿ ನೋಡಿಸಿ, ಅಂತಹ ಹೆಸರಿನವರು ಯಾರೂ ಇಲ್ಲ ಅಂತ ತಿಳಿದು ಆಶ್ಚರ್ಯಪಟ್ಟಿದ್ದರು. ಅವರಿಗೆ ನಾನು ಕೆಲಸ ಮಾಡುವುದು, ಎಲ್ಲಿ ಮಾಡುತ್ತೇನೆ ಎಂಬುದು ಚೆನ್ನಾಗಿ ತಿಳಿದಿತ್ತು. ಕುತೂಹಲ ತಡಿಯಲಾರದೆ ಅಂದು ಸಂಜೆಯೇ ಮನೆಗೆ ಫೋನ್ಮಾಡಿ ಅವರು ಕೇಳಿದ ಪ್ರಶ್ನೆ ಏನು ಗೊತ್ತಾ. 'ಲಕ್ಷ್ಮಿ ನಿನ್ನನ್ನ ಆಫೀಸಿನಲ್ಲಿ ಏನು ಹೆಸರಿನಲ್ಲಿ ಕರೆಯುತ್ತಾರೆ?'

ಈ ತರಹ ಹೆಸರು ಪೂರ್ತಿ ಇದ್ದರೂ, ಅರ್ಧ ಮಾಡಿದರೂ, ಹೇಗೆ ಕರೆದರೂ ತೊಂದರೆ. ನಾನು ಬರೆದ ವೈಜ್ಞಾನಿಕ ಲೇಖನಗಳ ಪತ್ರಿಕೆಗಳೇ ಇರಲಿ, ನನಗೆ ಬರುವ ಪತ್ರಗಳೇ ಇರಲಿ ಎಲ್ಲ ಕಡೆಯೂ ಇದೇ ತರಹದ ಆಭಾಸಗಳು. ಇಷ್ಟೆಲ್ಲಾ ಹಾಸ್ಯ, ತೊಂದರೆಗೆ ಎಡೆಮಾಡುವ:

ಹೆಸರಿನಲ್ಲಿ ಏನಂಟು, ಅರ್ಥವಾಗದ ನಂಟು,<br>
ಹೆಸರು ಏನೇ ಇರಲಿ, ಯಾರು ಹೇಗೇ ಕರೆಯಲಿ,<br>
ನಾನು ನಾನೇ ಆಗಿರುವೆ, ಅಂತರಂಗದಲಿ ಒಂದೇ ಆಗಿರುವೆ<br>
ನಾನಾರು ಎಂತೆಂಬುದನು, ಜನ ತಿಳಿಯಬೇಕಾದರೆ,<br>
ನನ್ನನ್ನು ಗುರುತಿಸಲು ನನಗೆ ಹೆಸರೂ ಬೇಕು, ಗುಣವೂ ಬೇಕು.<br>
ನೀವು ಒಪ್ಪುವಿರಾ?

■

**ಹಾಗಾದ್ರೆ...ಅವಳಲ್ಲ...** ವಿ.ವಿಜಯೇಂದ್ರ ರಾವ್

ಪರಮೇಶಿಗೆ ಪೋಲೀಸ್ ಸ್ಟೇಷನ್ ನಿಂದ ಎಸ. ಐ, ಫೋನ್ ಮಾಡಿ – ಸಾರ್, ನಿಮ್ಮ ಹೆಂಡತಿ ಕಾಣುತ್ತಿಲ್ಲ ಅಂತ ದೂರು ಕೊಟ್ಟಿದ್ರಲ್ಲಾ, ಅವರು ಸಿಕ್ಕಿದ್ದಾರೆ ಎಂದಾಗ, ಪರಮೇಶಿ – ಹೌದಾ, ಅವಳು ಏನು ಹೇಳಿದಳು ? ಎಂದು ಕೇಳಿದನು. ಆಗ, ಪೋಲೀಸ್ ಎಸ.ಐ – ಇಲ್ಲ, ಅವರು ಏನೂ ಮಾತಾಡುತ್ತಿಲ್ಲ ಎಂದು ಹೇಳಿದಾಗ, ತಕ್ಷಣವೇ ಪರಮೇಶಿ – ಸಾರ್, ಹಾಗಾದರೆ ಅವಳು ನನ್ನ ಹೆಂಡತಿ ಅಲ್ಲ ಅಂತ ಫೋನ್ ಕಟ್ ಮಾಡೇಬಿಟ್ಟನು...!

# ಬಾಲ್ಯದ ನೆನಪು ತಂದ ಮಳೆ

✍ಜ್ಯೋತಿ ರಾಜೇಶ್



ಮಳೆಗಾಲ ಶುರುವಾಯ್ತಲ್ಲ......ಪ್ರತೀ ಬಾರಿಯೂ ನನ್ನ ಬಾಲ್ಯದೆಡೆ ಕೊಂಡೊಯ್ಯುವ ಈ ಮಳೆಗಾಲ, ಮಳೆ ಎಂದರೆ ನನಗೆ ತುಂಬ ಇಷ್ಟ.......ಬಿಸಿಲಲ್ಲಿ ಬೆಂದ ಭೂರಮೆ ಮಳೆಯಲ್ಲಿ ನೆನೆದು, ಹಸಿರುಡುಗೆಯುಟ್ಟು ಸಂತೃಪ್ತಿಯಿಂದ ನಳನಳಿಸುವ ಕಾಲವದು. ಮಳೆ ಎಂದರೆ ಹಾಗೆ.....ಒಮ್ಮೊಮ್ಮೆ ಪುಟ್ಟ ಮಗು ಮನೆಯೆಲ್ಲ ಅಂಬೆಗಾಲಿಡುತ್ತ ಕಿಲಕಿಲ ನಕ್ಕು ಮನಸಿಗೆ ತಂಪೆರೆಯುವಂತೆ ಮುದ ನೀಡಿದರೆ, ಮತ್ತೊಮ್ಮೆ ಮನೆಯಲಿರುವ ಹದಿ ಹರೆಯದ ಹೆಣ್ಣಿನ ಹಾಗೆ.......ಜೋರಾಗಿ ಸುರಿಯುವುದು ತುಂಬ ಚೆಂದವೆನಿಸಿದರೂ ಮನಸಿನ ಯಾವುದೋ ಮೂಲೆಯಲ್ಲಿ ಅವ್ಯಕ್ತ ಭಯ......ಇನ್ನು ಕೆಲವೊಮ್ಮೆಯಂತೂ ರೌದ್ರಾವತಾರ ತಾಳಿದ ಕಾಳಿಯ ಹಾಗೆ......ಎಲ್ಲವನ್ನೂ ಕೊಚ್ಚಿಹಾಕುವ ರಭಸ........ ನನಗಂತೂ ಮಳೆಗಾಲವೆಂದರೆ ನೆನಪಾಗುವುದು ನನ್ನ ಅಜ್ಜನ ಮನೆ. ನನ್ನ ಅಜ್ಜನ ಮನೆ ಇರೋದು ಅಪ್ಪಟ ಮಲೆನಾಡಿನಲ್ಲಿ. ಮಲೆನಾಡಿನ ಮಳೆ ಅಂದ್ರೆ ಕೇಳ್ಬೇಕಾ.......ಆಕಾಶಕ್ಕೇ ತೂತು ಬಿದ್ದಂತೆ ಧೋ.....ಎಂದು ಸುರಿವ ಮಳೆ. ಆ ಮಳೆಯ ಅರ್ಭಟಕ್ಕೆ ಹೆದರಿ ಮನೆಯಲ್ಲೇ ಕೂರುವುದಿತ್ತಾದರೂ, ಒಮ್ಮೊಮ್ಮೆ ಮಳೆಯಲ್ಲಿ ನೆನೆಯುವ ಆಸೆಯೂ ಬಂದು ಮನೆಯ ಹಿರಿಯರಿಂದ ಬೈಸಿಕೊಳ್ಳುವುದೂ ಇತ್ತು. ಶಾಲೆಯಿಂದ ಮನೆಗೆ ಬರುವಾಗ ಕಾಲು ಜಾರಿತು ಅಂತಲೋ, ಕೊಡೆ ಹಾರಿತು ಅಂತನೋ ಏನೋ ಒಂದು ನೆಪ ಹೇಳಿ ಒದ್ದೆಯಾಗಿಯೇ ಮನೆಗೆ ಬರೋದು. ಆಗೆಲ್ಲ "ಎಷ್ಟು ಹೇಳಿದ್ರೂ ಕೇಳೋದೇ ಇಲ್ವಲ್ಲ" ಅಂತ ಅಮ್ಮನಿಂದ ಪ್ರೀತಿಯ ಬೈಗುಳದ ಜೊತೆಗೆ ರುಚಿಯಾದ ಬಿಸಿಬಿಸಿ ಕಷಾಯವೂ ಸಿಗ್ತಿತ್ತು. ಆಗ ನಮ್ಮ ಮನೆಯಲ್ಲಿ ಅಜ್ಜಿ ಕೋಣೆ ಎಂದೇ ಹೆಸರಾದ ಒಂದು ಕೋಣೆ ಇತ್ತು. ಅಲ್ಲಿ ಇಡೀ ದಿನ ಒಂದು ಸಣ್ಣ ಒಲೆ ಉರಿಯುತ್ತಲೇ ಇರ್ತಿತ್ತು. ಮಧ್ಯಾಹ್ನದ ನಿದ್ರೆಯ ನಂತರ ಅಜ್ಜಿ ಆ ಒಲೆಯ ಮುಂದೆ ಛಳಿ ಕಾಯಿಸುತ್ತ ಕೂರುವುದಿತ್ತು. ಅದು ನಮಗೆ ಕಥೆ ಕೇಳುವ ಸುಸಮಯ. ನಾವು ಮನೆ ಮಕ್ಕಳೆಲ್ಲ (ಮಂಗಗಳು) ಅಜ್ಜಿಯ ಸುತ್ತ ಕುಳಿತುಕೊಳ್ಳುವುದಿತ್ತು. ಅವರು ಆ ಒಲೆಯಲ್ಲಿ ಹಲಸಿನ ಹಪ್ಪಳವೋ, ಬಾಳೆಹಣ್ಣೋ, ಅಥವಾ ಗೇಣಸೋ ಏನಾದರೊಂದನ್ನು ಸುಟ್ಟು ತಿನ್ನಲು ಕೊಟ್ಟು ಕಥೆ ಹೇಳುತ್ತಿದ್ದರು. ಆ ತಿಂಡಿಗಳನ್ನು ತಿನ್ನುತ್ತಾ, ನಮ್ಮ ನಮ್ಮಲ್ಲೇ ತರಲೆ ಮಾಡ್ತಾ, ಕಥೆಯ

ಜೊತೆ ನೀತಿಪಾಠಗಳನ್ನೂ ಕಲಿಯುತ್ತಿದ್ದ ಆ ಸಮಯವನ್ನು ನೆನೆಸಿಕೊಂಡರೇ.....ಈಗಲೂ ನನ್ನ ಮನ ಮಗುವಾಗುತ್ತೆ, ಸಂತಸದಿಂದ ಕುಣಿಯುತ್ತದೆ. ಒಮ್ಮೊಮ್ಮೆ ನಾವು ಮಕ್ಕಳು ಒಬ್ಬರಿಗೆ ತಿಳಿಯದಂತೆ ಮತ್ತೊಬ್ಬರು ಆ ಒಲೆಯಲ್ಲಿ ಹಲಸಿನ ಬೀಜಗಳನ್ನು ಸುಡಲು ಹಾಕಿಡುವುದು.....ಅರೆ ಬೆಂದ ಅವು ಫಟ್ ಫಟ್ ಎಂದು ಸಿಡಿಯುತ್ತಿದ್ದರೆ ನಮಗೆಲ್ಲ ಒಂದು ಕಡೆ ನಗು ಮತ್ತೊಂದೆಡೆ ಭಯ.....ಆದರೂ ಯಾರು ಹಾಕಿದ್ದೆನ್ನುವ ಗುಟ್ಟು ಮಾತ್ರ ಬಿಟ್ಟು ಕೊಡುತ್ತಿರಲಿಲ್ಲ...... ಅಪರೂಪಕ್ಕೆ ಬೀಳುತ್ತಿದ್ದ ಆಲಿಕಲ್ಲುಗಳನ್ನು ಆರಿಸುವ ಸಂಭ್ರಮ, ಕಾಗದದ ದೋಣಿ ಮಾಡಿ ಹರಿಯುವ ನೀರಲ್ಲಿ ಬಿಟ್ಟು ಯಾರ ದೋಣಿ ದೂರ ಹೋಗುತ್ತದೆಂಬುದನ್ನು ನೋಡುವ ಆತುರ, ಕಾತುರ.......ಜೋರಾಗಿ ಮಿಂಚು, ಗುಡುಗು, ಸಿಡಿಲು ಬಡಿದಾಗೊಮ್ಮೆ ಹೆದರಿ ಅಮ್ಮನ ಸೆರಗಿನೊಳಗೆ ಅವಿತಿಟ್ಟುಕೊಳ್ಳುತ್ತಿದ್ದ ಬೆಚ್ಚಗಿನ ಭಾವ.......ವಾವ್ ಒಂದೇ ಎರೆಡೇ......ಬಾಲ್ಯದ ಮುಗ್ಧತೆಯ ನೆನಪುಗಳೇ ಹಾಗೆ......ಮಳೆ ಸಿಕ್ಕಾಪಟ್ಟೆ ಸುರಿಯುತ್ತಿದ್ದಾಗ ವಾರಗಟ್ಟಲೇ ಎಲ್ಲೋ ಹೋಗಿಬಿಡುವ(?) ಕರೆಂಟ್. ಅಂತಹ ರಾತ್ರಿಗಳಲ್ಲಿ ಹೊರಗೆ ಮಳೆ ನಮ್ಮನ್ನು ಹೆದರಿಸಲು ತನ್ನ ಆರ್ಭಟ ತೋರಿಸುತ್ತಿದ್ದರೆ ಅದನ್ನು ಅಣಕಿಸುವ ಹಾಗೆ ಮನೆಯೊಳಗೆ ನಾವೆಲ್ಲ ಬಿಸಿಬಿಸಿಯಾಗಿ ಹಪ್ಪಳ, ಸಂಡಿಗೆಗಳೊಡನೆ ಊಟ ಮಾಡುತ್ತಿದ್ದಾಗಿನ ಸಂಭ್ರಮವೇ ಸಂಭ್ರಮ. ಆ ಸಂತಸ ಮತ್ತೆ ಬರಬಾರದೇ ಎಂದು ಆಸೆ ಪಡುವಂತಾಗುತ್ತದೆ. ಜೊತೆಗೆ ಈಗಿನ ಮಕ್ಕಳಿಗೆ ಇಂತಹ ಬಾಲ್ಯ ಸಿಗುವುದಿಲ್ಲವಲ್ಲಾ ಎಂದು ಮರುಗುವ ಹಾಗೆ ಆಗುತ್ತೆ. ಹೀಗೆ ಮಳೆಯ ಬಗ್ಗೆ ಹೇಳುತ್ತ ಹೋದರೆ ಹೇಳುತ್ತಲೇ ಇರಬಹುದೇನೋ.......ಇದು ನನ್ನ ಬಾಲ್ಯದ ಸುಂದರ ಅನುಭವದ ನೆನಪುಗಳು ಮಾತ್ರ.......ಕಾಲ ಕಳೆದಂತೆ ಬೇರೆ ಬೇರೆ ರೀತಿಯಲ್ಲಿ ಮಳೆಯ ನೆನಪುಗಳು ಮನವನ್ನು ಬೆಚ್ಚಗಾಗಿಸುತ್ತವೆ. ನಿಮ್ಮಲ್ಲೂ ಇಂಥಹ ಸವಿ~ಸವಿ ನೆನಪುಗಳಿರಬೇಕಲ್ವಾ? ........ ■

**"ಸಾರ್, ಇದ್ಯಾಕೆ ಹೀಗೆ....?"**

ಪುಟ್ಟಕ್ಕ, ಪುಟ್ಟಣ್ಣ ಇಬ್ಬರೂ ಒಂದೇ ತರಗತಿಯಾದರೂ, ಬೇರೆ ಬೇರೆ ಶಾಲೆಯಲ್ಲಿ ಓದುತ್ತಿದ್ದರು. ಇಬ್ಬರೂ ಆಟ– ಪಾಠಗಳಲ್ಲಿ ತುಂಬಾ ಚುರುಕು.

ಇವರಿಬ್ಬರು ಯಾವಾಗ ಯಾವ ರೀತಿ ಪ್ರಶ್ನೆಗಳನ್ನು ಕೇಳುತ್ತಾರೆ ಅಂತ ಕೆಲವೊಮ್ಮೆ ಮೇಷ್ಟ್ರುಗಳಿಗೆ ಆತಂಕವಾಗುತ್ತಿತ್ತು.

ಒಮ್ಮೆ ಪುಟ್ಟಕ್ಕ ತನ್ನ ಮೇಷ್ಟ್ರಿಗೆ – ಸಾರ್, ನೀವು ನಿನ್ನೆ ಹೇಳಿದಿರಿ ಸೂರ್ಯ ಪೂರ್ವದಲ್ಲಿ ಹುಟ್ಟಿ, ಪಶ್ಚಿಮದಲ್ಲಿ ಮುಳುಗುತ್ತಾನೆ ಅಂತ. ಆದರೆ, ಸೂರ್ಯ ಒಂದೇ ಕಡೆ ಇದ್ದು, ಭೂಮಿ ತಾನೇ ಅದರ ಸುತ್ತ ಸುತ್ತೋದು ಅಲ್ವೇ ಸಾರ್, ಹಾಗಿದ್ರೆ ಈ ಹುಟ್ಟೋದು, ಮುಳುಗೋದು ಎಲ್ಲಿ ಬರುತ್ತೆ ಸಾರ್ ? ಎಂದು ಪ್ರಶ್ನಿಸಿದಾಗ ಮೇಷ್ಟ್ರು ತಬ್ಬಿಬ್ಬರಾದರು.

ಪುಟ್ಟಣ್ಣ ತನ್ನ ಮೇಷ್ಟ್ರಿಗೆ – ಸಾರ್, ನೀವು ನಿನ್ನೆ ಇಂಗ್ಲೀಷ್ ನಲ್ಲಿ Week ಅಂದರೆ ಕನ್ನಡದಲ್ಲಿ ವಾರ ಅಂತ ಮತ್ತು Day ಅಂದರೆ ದಿನ ಅಂತ ಹೇಳಿಕೊಟ್ರಿ. ಆದರೆ.. ನಾವು ಇಂಗ್ಲೀಷ್ ನ SUNDAY, MONDAY..ಇತ್ಯಾದಿಗಳನ್ನು ಕನ್ನಡದಲ್ಲಿ ಭಾನುವಾರ, ಸೋಮವಾರ, ಮಂಗಳವಾರ.. ಎಂದು ಕರೆಯುತ್ತೇವೆ. ಆದರೆ, ಅದು ಭಾನುದಿನ, ಸೋಮದಿನ, ಮಂಗಳದಿನ.......ಅಂತ ತಾನೇ ಇರಬೇಕಿತ್ತು ಸಾರ್ ? ಎಂದಾಗ, ಒಂದು ಕ್ಷಣ ಮೇಷ್ಟ್ರು ತಬ್ಬಿಬ್ಬಾಗಿ, ಯೋಚಿಸತೊಡಗಿದರು...!

–ವಿ.ವಿಜಯೇಂದ್ರ ರಾವ್

# ಸಿನೇಮಾ ನೋಡೋಣ ಬನ್ನಿ!

**ಪ್ರಭಾಮಣಿ ನಾಗರಾಜ, ಹಾಸನ**

ಅತ್ಯಗತ್ಯ ಅನುಕೂಲತೆಗಳೂ ಅಲಭ್ಯವಿದ್ದ ಅತ್ಯಂತ ಕುಗ್ರಾಮದಲ್ಲಿ ಜನ್ಮವೆತ್ತಿದ್ದ ನಾನು ಚಿಕ್ಕವಳಾಗಿದ್ದಾಗ ನೋಡಿದ್ದ ಚಲನಚಿತ್ರಗಳು ಬೆರಳೆಣಿಕೆಯಷ್ಟೇ ಇದ್ದವು. ಅವುಗಳನ್ನು, ಮೊದಲು ನೋಡಿದ್ದು– ಚಂದ್ರಸೇನೆ, ಎರಡನೆಯದು–ಮಕ್ಕಳ ರಾಜ್ಯ, ಮೂರನೆಯದು– ಸೀತಾರಾಮ ಕಲ್ಯಾಣ....... ಮುಂತಾಗಿ ಬೆರಳಿನಲ್ಲಿ ಎಣಿಸಿಕೊಂಡು ಆಗಾಗ ನೆನಪುಮಾಡಿಕೊಳ್ಳುತ್ತಾ ಇದ್ದುದು ಮನಸ್ಸಿನಲ್ಲಿ ಹಸಿರಾಗೇ ಇದೆ. 'ಮಧುಮಾಲತಿ' ಚಿತ್ರದಲ್ಲಂತೂ ಮಂತ್ರವಾದಿ ಬಂದಾಗಲೆಲ್ಲಾ ನಾನು ಮತ್ತು ನನ್ನ ತಮ್ಮ ಸಿನೇಮಾ ಟಾಕೀಸಿನ ಥೇರ್ಟ ಆಡಿಯಲ್ಲಿ ಅಡಗಿಕೊಳ್ಳುತ್ತಿದ್ದುದನ್ನು ಮರೆಯುವಂತೆಯೇ ಇಲ್ಲ! ನಮ್ಮದು ಹಳ್ಳಿಯಾದ್ದರಿಂದ ನಾವು ಸಿನೇಮಾ ನೋಡಲು ಐದು ಮೈಲಿ ದೂರದ (ಆಗ ಹೇಳುತ್ತಿದ್ದಂತೆ!) ಪಟ್ಟಣಕ್ಕೇ ಎತ್ತಿನಗಾಡಿ ಕಟ್ಟಿಕೊಂಡು ಹೋಗಬೇಕಾಗಿತ್ತು. ನಮ್ಮ ಸೋದರತ್ತೆಗೆ ದೇವರ ಚಿತ್ರಗಳು ಯಾವುದೇ ಬಂದರೂ ನೋಡುವ ಹಂಬಲ. ನಮ್ಮ ಅವಿಭಕ್ತ ಕುಟುಂಬದಲ್ಲಿ ಅಕ್ಕ ಯಾವಾಗಲೂ ಆ ಸೋದರತ್ತೆಯೊಂದಿಗೇ ಇರುತ್ತಿದ್ದುದರಿಂದ ಸಾಕಷ್ಟು ಚಿತ್ರಗಳನ್ನು ನೋಡುತ್ತಿದ್ದಳು. ನಮಗೆಲ್ಲಾ ಅವುಗಳ ಕಥೆಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದುದರಿಂದ ನನಗೂ ನೋಡಬೇಕೆನ್ನುವ ಆಸೆಯಾಗುತ್ತಿತ್ತು. ಆದರೆ ನಾನು ಸದಾ ಕಣ್ಣು ಸರಿಯಾಗಿ ಕಾಣದೇ ಇದ್ದ ಇನ್ನೊಬ್ಬ ಸೋದರತ್ತೆಗೇ ಅಂಟಿಕೊಂಡಿದ್ದ ಅಚ್ಚುಮೆಚ್ಚಿನ ಕಂದನಾಗಿದ್ದರಿಂದ ಸಿನೇಮಾ ನೋಡಲು ಹೋಗಲಾಗದೇ ನನ್ನ ಆಸೆ ಆಸೆಯಾಗಿಯೇ ಉಳಿದಿತ್ತು.

ಒಮ್ಮೆ ಅಮ್ಮ–ಅಣ್ಣ(ತಂದೆ)ನ ಜೊತೆ ಮಕ್ಕಳಾದ ನಾವು ಕುಣಿಗಲ್ನ ಬಂಧುವೊಬ್ಬರ ಮನೆಗೆ ಸಮಾರಂಭಕ್ಕೆ ಹೋಗಿದ್ದೆವು. ಸಂಜೆ ನಾವೆಲ್ಲಾ ಸಿನೇಮಾ ನೋಡಲು ಹೋಗುವ ಏರ್ಪಾಡಾಯಿತು. ಈಗಿನಂತೆ ಆಟೋಗಳಿಲ್ಲದ್ದರಿಂದ ಹಿರಿಯರು ಎಳೆಯರಾದ ನಮ್ಮನ್ನು ಹೆಗಲ ಮೇಲೆ ಕೂರಿಸಿಕೊಂಡು ಹೊರಟರು. ಆದರೆ ಅಷ್ಟರಲ್ಲಾಗಲೇ ಸಾಕಷ್ಟು ಸಿನೇಮಾಗಳನ್ನು ನೋಡಿ ಬೇಸತ್ತಿದ್ದ ಅಕ್ಕ ದಾರಿಯಲ್ಲಿ 'ಸಿನೆಮಾ ನೋಡೋದು ಬೇಡವೇ ಬೇಡ' ಎಂದು ಹಟಹಿಡಿದಾಗ ನಮ್ಮ ಸವಾರಿ ಕುದುರೆ ಲಾಯದ ಕಡೆಗೆ ಹೊರಟಿತು! ಆಗುಂಟಾದ ನಿರಾಶೆ ಬಹಳ ದಿನ ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿತ್ತು! ಮುಂದೆ ಅಕ್ಕನ ಊರಿಗೆ ಹೋದಾಗಲೆಲ್ಲಾ ಒಳ್ಳೆಯ ಚಿತ್ರಗಳಿದ್ದರೆ ನನ್ನನ್ನು ಕರೆದುಕೊಂಡು ಹೋಗಿ ತೋರಿಸುತ್ತಿದ್ದುದು ತನ್ನ ಬಾಲ್ಯದ ಅಸಹಕಾರ ಪ್ರವೃತ್ತಿಗೆ ಪ್ರಾಯಶ್ಚಿತ್ತದಂತಿತ್ತು!

ಮಕ್ಕಳಾಗಿದ್ದ ನಾವು ಸ್ವಲ್ಪ ಬೆಳೆದ ನಂತರ ಎಲ್ಲರೂ ಒಟ್ಟಾಗಿ ಎತ್ತಿನ ಗಾಡಿಯಲ್ಲಿ ಪಟ್ಟಣಕ್ಕೆ ಹೋಗಿ ಸಿನೇಮಾ ನೋಡಿಕೊಂಡು ಬರುವಾಗ, ಬೆಳದಿಂಗಳ ರಾತ್ರಿಯಲ್ಲಿ ದಾರಿಯುದ್ದಕ್ಕೂ ಜೋರಾಗಿ ಚಿತ್ರಗೀತೆಗಳನ್ನು ಹಾಡಿಕೊಂಡು ಬರುತ್ತಿದ್ದೆವು. ಅದು ನಮ್ಮೊಳಗಿನ ಭಯವನ್ನು ಓಡಿಸುವ ತಂತ್ರವೂ ಆಗಿತ್ತೇನೋ! ಮಧ್ಯೆಮಧ್ಯೆ ಅದೇತಾನೇ ನೋಡಿ ಬಂದ ಸಿನೇಮಾದ ಸಂಭಾಷಣೆಗಳನ್ನೂ ಹೇಳುತ್ತಾ ಗದ್ದಲವೆಬ್ಬಿಸುತ್ತಿದ್ದ ನಮ್ಮ ನಗು–ಕಿರುಚಾಟದಿಂದ ಬೆದರಿದ ಎತ್ತುಗಳು ಜೋರಾಗಿ ಓಡುತ್ತಾ ನಮ್ಮ ಸಂಭ್ರಮಕ್ಕೆ ಇಂಬುಕೊಡುತ್ತಿದ್ದವು.

ನಾನು ನಗರದಲ್ಲಿ ಓದುತ್ತಿದ್ದಾಗ ಹತ್ತಿರದ ಊರಿನಲ್ಲಿದ್ದ ದೊಡ್ಡಮ್ಮನ ಮನೆಗೆ ಹೋದಾಗ ಅವರು 'ರಾಜಣ್ಣನ ಸಿನೆಮಾ ಬಂದಿದೆ ನೋಡಾಣ ಬಾ' ಎನ್ನುತ್ತಾ

ಹೊರಡಿಸುತ್ತಿದ್ದರು. ಚಾಪೆ, ಕಂಬಳಿ ಎಲ್ಲವನ್ನೂ ಜೋಡಿಸಿಕೊಳ್ಳುವಾಗ 'ಇದೆಲ್ಲಾ ಏಕೆ?' ಎಂದುಕೊಳ್ಳುತ್ತಿದ್ದವಳಿಗೆ ಅಲ್ಲಿ ಹೋದಾಗಲೇ ತಿಳಿಯುತ್ತಿದ್ದುದು ಅದೊಂದು ಟೆಂಟ್ ಎಂದು! ಅಲ್ಲಾಗಲೇ ಎಲ್ಲರೂ ಮಂದಲಿಗೆ, ಬಟ್ಟೆ ಹಾಸಿಕೊಂಡು ಜಾಗ ರಿಸರ್ವ್ ಮಾಡಿಕೊಂಡಾಗಿರುತ್ತಿತ್ತು. ದೊಡ್ಡಮ್ಮನೂ 'ಸ್ವಲ್ಪ ಅತ್ಲಾಗೆ ಸರಿಸ್ರಮ್ಮ. ಇದು ನನ್ನ ಜಾಗ ಅಲ್ವಾ' ಎಂದು ತಮ್ಮ ಹಕ್ಕನ್ನು ಸ್ಥಾಪಿಸಿಕೊಂಡು ಚಾಪೆ ಹಾಸಿ 'ಕಂಬ ಒರಗಿಕೊಂಡು ಕೂತ್ಕೊ, ಕಂಬಳಿ, ಸರಿಯಾಗಿ ಹೊದ್ಕೊ' ಎಂದು ನನಗೆ ಇನ್ಸ್ಟ್ರಕ್ಷನ್ಸ್ ಕೊಡುತ್ತಾ ಸುತ್ತಿನವರಿಗೆ 'ನನ್ನ ತಂಗಿ ಮಗಳು, ಸಿಟೀಲಿ ಡಿಗ್ರಿ ಓದ್ತಿದಾಳೆ' ಎಂದು ಹೇಳುತ್ತಾ ಸಂಭ್ರಮಿಸುತ್ತಿದ್ದರು. ಫಿಲಂ ಶುರುವಾಗಿ ರಾಜಣ್ಣ ಬರೋದೇ ತಡ ಶಿಳ್ಳೆ ಹೊಡೆಯುತ್ತಾ ಹುಡುಗರು ಕುಣಿಯಲು ಪ್ರಾರಂಭಿಸಿದರೆ ಹೆಂಗಸರು ಕೈಮುಗಿಯುತ್ತಾ ಸಡಗರಪಡುತ್ತಿದ್ದರು.




ಈಗ ಟೆಂಟ್ಗಳಿದ್ದವು ಎನ್ನುವ ಕುರುಹೂ ಇಲ್ಲದಂತೆ ಚರಿತ್ರೆಯ ಪುಟ ಸೇರಿವೆ.

ಕಾಲಚಕ್ರ ಉರುಳಿದಂತೆ ಪಟ್ಟಣ ಸೇರಿ ನಮ್ಮ ಮಕ್ಕಳು ಹುಟ್ಟಿ, ಬೆಳೆದು ಈಗ ಅವರ ಸ್ನೇಹದ ವರ್ತುಲದಲ್ಲಿ ಚಲನಚಿತ್ರಗಳನ್ನು ನೋಡುವುದು ಕೇವಲ ಮನರಂಜನೆಗಾಗಿ ಎನ್ನುವುದರಿಂದ ಮುಂದುವರೆದು ಅದರಲ್ಲಿರುವ ಸಂಭಾಷಣೆಗಳನ್ನು ಅರ್ಥೈಸಿಕೊಂಡು, ಆಸ್ವಾದಿಸುವ ಅವಕಾಶ ದೊರೆಯುವಂತಾಯಿತು. ಸದಾ ಒಂದಿಲ್ಲೊಂದು ಕೆಲಸವನ್ನು ಹೊಂದಿಸಿಕೊಂಡು ಕಾಲಿಗೆ ಚಕ್ರ ಕಟ್ಟಿಕೊಂಡಂತೆ ತಿರುಗುತ್ತಿದ್ದ ನನ್ನನ್ನು ಒಂದೆಡೆ ಹಿಡಿದು ಕೂರಿಸಿ ತೋರಿಸಿದ ಕೆಲವು ಚಿತ್ರಗಳು ನನ್ನ ಮನಸ್ಸಿನ ಮೇಲೆ ಬಹಳ ಪ್ರಭಾವವನ್ನು ಬೀರಿವೆ. ಲಯನ್ ಕಿಂಗ್, ಕುಂಗ್-ಫು-ಪಾಂಡ ..ಮುಂತಾದ ಚಿತ್ರಗಳಲ್ಲಿ ಪ್ರಾಣಿಗಳು ಆಡುವ ಮಾತುಗಳಲ್ಲಿಯ ಅರ್ಥವಂತಿಕೆ ನೋಡಿಯೇ ಸವಿಯಬೇಕು. ಚಿಕ್ಕವಯಸ್ಸಿನಲ್ಲಿ ಓದಿದ ಪಂಚತಂತ್ರದ ಕಥೆಗಳಂತೆ ಇವೂ ಅವಿಸ್ಮರಣೀಯ. ಹೀಗೆ ನೋಡಿದ ಚಿತ್ರಗಳಲ್ಲಿ ನನಗೆ ಬಹಳ ಮೆಚ್ಚುಗೆಯಾದದ್ದು 'ಪೀಸ್ಫುಲ್ ವಾರಿಯರ್'.


ಡಾನ್ಮಿಲ್ಮನ್ ಸ್ಥಳೀಯವಾಗಿ ಪ್ರಸಿದ್ಧನಾಗಿರುವ ಜಿಮ್ನಾಸ್ಟ್ ಕೂಡ ಆಗಿದ್ದ ಒಬ್ಬ ಕಾಲೇಜು ವಿದ್ಯಾರ್ಥಿ. ಅವನಿಗೆ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂಬ ಕನಸಿರುತ್ತದೆ. ಆದರೆ ಅವನನ್ನು ಕಾಡುತ್ತಿದ್ದ ಅವಿಶ್ರಾಂತಸ್ಥಿತಿ (restlessness) ಯಿಂದ ಹೊರಬರಲು ಅವನು ಸೂರ್ಯೋದಯಕ್ಕೆ ಮೊದಲು ಓಡುವ ಅಭ್ಯಾಸವಿಟ್ಟು-ಕೊಂಡಿರುತ್ತಾನೆ. ಹಾಗೆ ಓಡುತ್ತಿರುವಾಗ ಒಂದು ದಿನ ಎದುರಾದ ಒಬ್ಬ ವೃದ್ಧ (ಸಾಕ್ರಟೀಸ್) ನಿಗೆ ಡಾನ್ ನ ಸಮಸ್ಯೆಯ ಬಗ್ಗೆ ಸ್ವತಃ ಡಾನ್ಗೇ ತಿಳಿದಿರುವುದಕ್ಕಿಂತಲೂ ಹೆಚ್ಚಾಗಿ ತಿಳಿದಿರುವಂತಿರುತ್ತದೆ ! ಸಾಕ್ರಟೀಸ್ ಒಬ್ಬ ಮಾರ್ಗದರ್ಶಿಯಾಗಿ, ಡಾನ್ಗೆ ಅನೇಕ ಟಾಸ್ಕ್ಗಳನ್ನು ಕೊಟ್ಟು, ತಿಳಿಹೇಳುತ್ತಾ ಅವನಲ್ಲಿದ್ದ ದೌರ್ಬಲ್ಯಗಳನ್ನು ನಿವಾರಿಸಲು ಪ್ರಯತ್ನಿಸುತ್ತಾನೆ.... ಗುರಿಗಿಂತಲೂ ಕ್ರಮಿಸುವ ಮಾರ್ಗ ಪ್ರಮುಖವಾದುದು ಎನ್ನುವ ಮಹತ್ವವನ್ನು ಮನವರಿಕೆ

ಮಾಡುತ್ತಾನೆ.....ಈ ಮಧ್ಯದಲ್ಲಿ ಒಂದು ಅಪಘಾತದಲ್ಲಿ ಡಾನ್‌ನ ಬಲಗಾಲಿನ ಮೂಳೆ ಮುರಿದು ಅವನು ಜಿಮ್ನಾಸ್ಟಿಕ್ ಅಭ್ಯಾಸದಿಂದ ಹೊರಬರಬೇಕಾದ ಸನ್ನಿವೇಶ ಎದುರಾಗುತ್ತದೆ. ಆದರೂ ಸಾಕ್ರಟೀಸ್ನ ಮಾರ್ಗದರ್ಶನದಲ್ಲಿ ಸತತ ಪ್ರಯತ್ನದಿಂದ ಅರ್ಹತೆಯನ್ನು ಪಡೆದು ಒಲಂಪಿಕ್ ಟ್ರಯಲ್ಸ್‌ನಲ್ಲಿ ಆಯ್ಕೆಯಾಗುತ್ತಾನೆ. ಅಂತಿಮ ಸ್ಪರ್ಧೆಯ ಮೊದಲು ಸಾಕ್ರಟೀಸ್ ಡಾನ್‌ಗೆ ಎಲ್ಲಿಯೂ ಸಿಗುವುದಿಲ್ಲ. ಸ್ಪರ್ಧೆಯ ಕಡೆಯ ಸುತ್ತಿನಲ್ಲಿ ಸಾಕ್ರಟೀಸ್ ಅವನ ಮನಸ್ಸಿನಲ್ಲಿ ಮೂರು ಪ್ರಶ್ನೆಗಳನ್ನು ಕೇಳುತ್ತಾನೆ: 'ನೀನೆಲ್ಲಿದೀಯ ಡಾನ್?' 'ಇದು ಯಾವ ಸಮಯ?' 'ನೀನು ಯಾರು?"

ನಂತರ ಡಾನ್ ಟ್ರಿಪಲ್ ಕಾನ್ಸಿಕ್ಯುಟೀವ್ ಫ್ಲಿಪ್ಸ್ ಅನ್ನು ಸರಾಗವಾಗಿ ನಿರ್ವಹಿಸಿ ತೀರ್ಪುಗಾರರಿಗೇ ಅಚ್ಚರಿ ಮೂಡಿಸುತ್ತಾನೆ! ಅವರ ಟೀಂ ಮೊದಲ ನ್ಯಾಷನಲ್ ಅವಾರ್ಡನ್ನು ಪಡೆಯುತ್ತದೆ.

ಈ ಚಿತ್ರದಲ್ಲಿ ಬರುವ ಡಾನ್ ಮತ್ತು ಸಾಕ್ರಟೀಸ್ ನಡುವಿನ ಸಂಭಾಷಣೆ ಬಹಳ ಸ್ವಾರಸ್ಯಕರವಾಗಿದೆ. ಎಲ್ಲೆಲ್ಲೋ ಅಲೆಯುವ ನಮ್ಮ ಮನಸ್ಸನ್ನು 'ಇಲ್ಲಿ', 'ಈಗ', 'ಈ ಕ್ಷಣ'ಕ್ಕೆ ಹಿಡಿದು ನಿಲ್ಲಿಸಿದರೆ ಯಾವುದೇ ಸಾಧನೆಯೂ ಕಷ್ಟಕರವಲ್ಲ. ಅದಕ್ಕಾಗಿ ಒಬ್ಬ ಮಾರ್ಗದರ್ಶಕನ ಅವಶ್ಯಕತೆಯಿದೆ. ಅದು ಸದಾ ನಮ್ಮೊಂದಿಗೇ ಇರುವ ನಮ್ಮ ಅಂತರಂಗವೇ ಆದರೆ ಎಷ್ಟು ಚೆನ್ನ!

ಈಗಂತೂ ಡಬ್ಬಿಂಗ್‌ಗೆ ಅವಕಾಶ ಸಿಕ್ಕ ನಂತರ ಉತ್ತಮ ಚಲನಚಿತ್ರಗಳು ಜಗದ ಮೂಲೆಮೂಲೆಗಳನ್ನೂ ತಲುಪುವಂತಾಗಿ ನಾವೂ  ಬೇರೆಬೇರೆ ಭಾಷೆಗಳ ಚಿತ್ರಗಳನ್ನು ನೋಡಿ ನಮ್ಮದೇ ಮಾತೃಭಾಷೆಯಲ್ಲಿ ಆಸ್ವಾದಿಸುವ ಅವಕಾಶ ದೊರೆತಿದೆ. ಯಾರಿಗುಂಟು– ಯಾರಿಗಿಲ್ಲ! ■



# ಆಣೆ–ಪ್ರಮಾಣ ಮತ್ತು ಪರಿಣಾಮ

**ಕೆ.ಎಸ್.ಸೋಮೇಶ್ವರ**

ಆಗಾಗ್ಗೆ ಈ ಆಣೆ ಪ್ರಮಾಣದ ಅಣೆ ಕಟ್ಟುಗಳು ಯಾವುದೇ ಕಟ್ಟು ಪಾಡುಗಳಿಲ್ಲದೇ ಒಡೆಯುತ್ತಿರುತ್ತವೆ. ಇದೊಂದು ಮನೆ ಮನೆಯ ಪ್ರಕರಣ ಎನ್ನಬಹುದೇನೋ. ಏನೋ ಹೇಳಿ ಅದನ್ನು ಸಾಧಿಸಲು  ಯಾರದಾದರೂ ತಲೆಯ ಮೇಲೆ ಕೈ ಇಟ್ಟು ಪಟ್ಟು ಹಿಡಿಯುವುದು.. ಇನ್ನು ನಮ್ಮ ರಾಜಕೀಯ  ನಾಯಕರುಗಳಿಗೆ ಇದೊಂದು ಸುಲಭ ಸತ್ಯ ಶೋಧನೆ. ಅವರಿಗೆ ಬೇಕಾದ ದೈವದ ಮೇಲೆ  ಪ್ರಮಾಣಿಸಿ ಇದೇ ಸತ್ಯ ಎನ್ನುವುದು, ಪಾಪ ಆ ದೈವಗಳು ಸಧ್ಯ ಕಲ್ಲಾದೆ  ನಮ್ಮ ಶಿವನೇ ಅಂತ  ವಿವಿಧ ಭಂಗಿಗಳಲ್ಲಿ ನೆಲೆಸಿರುತ್ತವೆ. ಸಿನಿಮಾಗಳಲ್ಲಿ ನೋಡುವಂತೆ  ಅವರುಗಳೂ ಮಾತನಾಡಿದರೆ ಭೂಲೋಕವೇ ಭೂ ಕೈಲಾಸವಾಗಬಹುದೇನೋ ಅಥವಾ ಕಲಸು ಮೇಲೋಗರವೋ ನಂಗೊತ್ತಿಲ್ಲಪ್ಪ ಇದೆಲ್ಲದರೆ ಜೊತೆಗೆನ ಟಿವಿ ಧಾರಾವಾಹಿಗಳಿಗೆ ಇದಿಲ್ಲದಿದ್ದರೆ ಅವರ ಅದೇನೋ ಟಿ ಆರ್ ಪಿ ಅನ್ನುವುದು  ತುರ್ತಾಗಿ ಪಾತಾಳ ಸೇರಿ ಬಿಡುತ್ತದೆ.

ಈ ಆಣೆ ಪಕ್ಕಕ್ಕೆ ಸರಿಸಿ ನಮ್ಮ ಝಣ ಝಣ ಕಾಂಚಾಣದ ಆಣಿಗಳ ಸದ್ದು ಆಲಿಸೋಣ. ಕಾಸಿದ್ದರೆ ಕೈಲಾಸ ಅಂತಾರೆ. ಅಲ್ಲೇನಿದೆ ? ನಾವು ನೋಡಿದಾಗೆಲ್ಲ ಆ ಶಿವಪ್ಪ ಹಿಮ ಗಡ್ಡೆಯ ಮೇಲೆ ಧ್ಯಾನಾಸಕ್ತನಾಗಿರುತ್ತಾನೆ. ಇನ್ನು ನಮ್ಮ ಬೇಂದ್ರೆ ಅಜ್ಜನವರ 'ಕುರುಡು ಕಾಂಚಾಣ ಕುಣಿಯುತಲಿತ್ತು... ಕಾಲಿಗೆ ಬಿದ್ದರೆ  ಕುಣಿಸುತಲಿತ್ತು  ಅಂತ ಕಾಂಚಾಣದ ಬೇರೆಯೇ ಅರ್ಥ  ಹೇಳುತ್ತದೆ. ಇವೆಲ್ಲ ಹೇಳುತ್ತ ಹೋದರೆ ದುಡ್ಡೇ ದೊಡ್ಡಪ್ಪ. ಹಾಗಾದರೆ ಚಿಕ್ಕಪ್ಪ ಯಾರು ?  ಇದೆಲ್ಲಕ್ಕಿಂತ ಹೆಚ್ಚು ಸದ್ದು ಮಾಡುವುದು ಝಣ ಝಣಾ ಝಣ. ಮೇಲಕೆತ್ತಿ ಬಿಡಲು ಸದ್ದು ಠಣ್ ಠಣಾ ಠಣ..

ಈ ಹಣದ ಹಿಂದ ಬಿದ್ದು ರಾಜ ಮಹಾರಾಜರುಗಳ ಕಾಲಕ್ಕೆ ಹೋದರೆ ಆಗೆಲ್ಲಾ ಅದಾವ ನಾಣ್ಯಗಳಿದ್ದವೋ ತಿಳಿಯದು.. ಆಗೆಲ್ಲ ಕಪ್ಪ ಕೊಡಬೇಕಾದ ಸಾಮಂತರು ಥೈಲಿಗಳಲ್ಲಿ ತುಂಬಿ ತರುತ್ತಿದ್ದುದು ಬಂಗಾರದ ವರಹಗಳು ವರಾಹ ರೂಪೇಣ  ಅಂತ ಚರಿತ್ರೆ ಹೇಳುತ್ತದೆ.

ಅದೊಂದು ಕಾಲ ಕಾಸೇ ಕಾಂಚಾಣ ಎರಡು ಕಾಸು ಮೂರು ಕಾಸು (ತೂತು ಮೂರು ಕಾಸು  ನಮಗೆ  ಬೆರಳುಗಳಲ್ಲಿ ವಿಷ್ಣು ಚಕ್ರ). ಎಲ್ಲ ಫಳ ಫಳ ಹೊಳೆಯುವ ಹಿತ್ತಾಳೆಯವು. ಈಗ ಮೂರು ಕಾಸಿಗೆ ಕವಡೆ ಕಿಮ್ಮತ್ತಿಲ್ಲ ಎನ್ನುತ್ತೇವೆ.. ಹಣದುಬ್ಬರ ಹೆಚ್ಚಾದಂತೆ ಬಂದವು ನಾಣ್ಯಗಳು, ನಾಲ್ಕಾಣೆ, ಎಂಟಾಣೆ, ರುಪಾಯಿ ನಾಣ್ಯಗಳು ಇವೆಲ್ಲ  ಬೆಳ್ಳಗೆ ಹೊಳೆಯುತ್ತಿರುತ್ತಿತ್ತು. ಈ ನಾಣ್ಯಗಳು ಮುಂದೆ ಆಣೆ ಮಾಡಿ ಹೋದಂತೆ ನಾಕಾಣೆ ನಾಕಾಣೆ ನಮ್ಮ ದೇವರಾಣೆ  ಎನ್ನುತ್ತಾ  ಒಂದು, ಎರಡು, ಐದು, ಹತ್ತು ಇಪ್ಪತ್ತುಅಂತ ಬಂದು ಕಾಣದಂತೆ ಮಾಯವಾದವು.. ಏನಾಗಲಿ ಹಣದ ಪಯಣ ಸಾಗಲಿ ಎಂದು  ಪೈಸಾ ವಸೂಲಿಗಾಗಿ ಹುಟ್ಟಿದವು  ನಯಾ ಪೈಸಾಗಳು. ಚಿಕ್ಕದಾಗಿ ಪೈಸೆಗಳು ಎನ್ನಬೇಕು. ಇಲ್ಲದಿದ್ದರೆ ನಿಮಗೆ  ನಯಾ ಪೈಸಾ ಬೆಲೆ ಇರುವುದಿಲ್ಲ.  ಅವು ಒಂದರ ಮಗ್ಗಿಯಂತೆ  ಒಂದು, ಎರಡು, ಐದು, ಹತ್ತು ಇಪ್ಪತ್ತು, ಐವತ್ತು ಪೈಸಾದಿಂದ ರುಪಾಯಿ ರಾಜನವರೆಗೂ ಬಂದಿವೆ. ಇವುಗಳೆಲ್ಲಾ ಹೊಳೆಯುವ ಪೈಸಾಗಳೇ  'ಐಸಾ ಭಿ ಹೋತಾ ಹೈ' ಎನ್ನುವಂತೆ ತಮ್ಮ ಆಟ ಚಲಾಯಿಸಿದವು. ಇವುಗಳು ಅದರ ಬೆಲೆಗೆ ತಕ್ಕಂತೆ ಆಕಾರ. ಗುಂಡು, ಚೌಕ, ಪದ್ಮಮುಖಿ ಹೀಗೆ ಎಲ್ಲ ರಜತ ಮುಖಿಗಳಾದರೆ,

ಇಪ್ಪತ್ತಕ್ಕೆ ಚಿನ್ನದ ಮೆರುಗು (ನೋಡಲಷ್ಟೇ), ಈಗ ಇವೆಲ್ಲ ಗೂಡು ಸೇರಿ ಈ ಗ ರುಪಾಯಿ ರಾಜರದೇ ದರಬಾರು. ಅವುಗಳ ಆಕಾರ ತೂಕವೂ ಬೆಲೆಗೆ ತಕ್ಕಂತಿಲ್ಲ. ಕೆಲವು ಪೈಸಾ ಅಳತೆಯಲ್ಲೆ ಹೊಳೆಯುತ್ತವೆ. ಇದನ್ನು ಸರಿಯಾಗಿ ವಿಂಗಡಿಸದಿದ್ದರೆ ನಮ್ ಕಣ್ಣಿಗೆ ಅವು ಮಂಕು ಬೂದಿ ಎರಚಿ ಬಿಡುತ್ತವೆ, ಇನ್ನು ಕಾಗದದ ನೋಟುಗಳು ಒಂದು, ಎರಡು, ಐದು, ಹತ್ತು, ನೂರು, ಇನ್ನೂರು, ಐನೂರು, ಸಾವಿರ ಎರಡು ಸಾವಿರ. ಇವುಗಳಲ್ಲಿ ಕಡೆಯವೆರಡೂ ನಮ್ಮ ಸರಕಾರಕ್ಕೆ ಅಗಾಧವೆನಿಸಿ ಗೂಡು ಸೇರಿಸಿಬಿಟ್ಟರು. ಈ ನೋಟುಗಳ ಎಣಿಕೆ ಈಗ ಅದೊಂದು ಸಣ್ಣ ಮಷೀನು ಟರ್ ಎನ್ನುತ್ತಾ ಎಣಿಸಿ ನಿಶ್ಚಲವಾಗುತ್ತವೆ. ದಶಕಗಳ ಹಿಂದೆ ಇದು ಬರಿಯ ಕೈ ಚಳಕ ಅಷ್ಟೇ (ಅಪಾರ್ಥ ಮಾಡ್ಕೋಬೇಡಿ) ಎಣಿಕೆಯ ಸಾಮರ್ಥ್ಯ. ನೋಟುಗಳು ಹೇಗೇ ಇರಲಿ ಸರಸರನೆ ಎಣಿಕೆಯಾಗುತ್ತಿದ್ದವು. ನಾನು ಕೆಲಸ ಮಾಡುತ್ತಿದೆಡೆ ನರಹರಿ ಎಂಬ ಒಬ್ಬ ನೋಟು ಎಣಿಸುವ ಕುಶಲ ಕರ್ಮಿ ಇದ್ದರು. ಇವರು ಹಳೆಯ ನೋಟುಗಳಾಗಲಿ ಗರಿಗರಿಯದಾಗಲಿ ಅತಿ ಕಡಿಮೆ ಸಮಯದಲ್ಲಿ ಪೇರಿಸಿ ಒಟ್ಟು ಮೊತ್ತ ಬಡಾಯಿ ಇಲ್ಲದೇ ಬಂಡಲ್ ತಯಾರಾಗುತ್ತಿತ್ತು

ಇನ್ನು ದೇಶ ವಿದೇಶ ಗಳ ಆಣೆಗಳ ಪ್ರಮಾಣಗಳೇನು ನೋಡೋಣವೇ. ನಮ್ಮಲ್ಲೇ ವಿವಿಧ ಪ್ರಾಂತದ ರಾಜರುಗಳಿಂದ ಮೊದಲಾಗಿ ನವಾಬರುಗಳವರೆಗೂ ಅವರದೇ ಡಿಸೈನ್ ನಲ್ಲಿ ಈ ಕಾಂಚಾಣ ಕುಣಿಯುತ್ತಿತ್ತು. ನಮ್ಮನಾಳಿದ ಬ್ರಿಟಿಷರಲ್ಲಿ ಅದೊಂದು ಆಡು ಮಾತಿದೆ. 'ಪೆನ್ನಿ ವೈಸ್, ಪೌಂಡ್ ಫೂಲಿಷ್' ಇದರ ಅರ್ಥ ಚಿಕ್ಕಾಸು ಕೂಡಿ ಹಾಕಿ ದೊಡ್ಡ ಮೊತ್ತವನ್ನೇ ಮುಳುಗಿಸಿಕೊಳ್ಳುವುದು. ಇದು ಬಿಡಿ ನಮ್ಮಲ್ಲಿ ಸರ್ವೇ ಸಾಮಾನ್ಯ. ಚೀಟಿ ಎತ್ತುವುದು, ಹೆಚ್ಚು ಬಡ್ಡಿ ಆಸೆಯಿಂದ ಬಿಡಿಗಾಸನ್ನು ಕಳೆದುಕೊಳ್ಳುವುದು ಎಲ್ಲರಿಗೂ ತಿಳಿದಿರುವುದೇ. ಆದರೆ, ಅದೇನೂ ಕಡಿಮೆಯಾಗಿಲ್ಲ. ಈಗಂತೂ ಏಕ ದಿನದ ಕ್ರಿಕೆಟ್ ಬೆಟ್ಟಿಂಗ್ ಎಷ್ಟು ಜನರ ಬೆರಳಿರಲಿ ಹಸ್ತವನ್ನೇ ನುಂಗಿದೆಯೋ ಅದಕ್ಕೆ ಗಣತಿ ಮಾಡಲಾಗಿಲ್ಲ. ಅದು ಅಸಾಧ್ಯ ಕೂಡ..

ಅಲ್ಲಿ ಪೆನ್ನಿ ಪೌಂಡ್‌ಗಳು ಸ್ವಲ್ಪ ಮಾಯವಾಗಿ ಮತ್ತೆ ಹಾಡಿತು ಕೋಗಿಲೆ ಎನ್ನುವಂತೆ ಬಂದಿವೆ. ಅಮೆರಿಕದ ಸೆಂಟ್ ಗಳು ಡಾಲರ್ ಆಗಿ ಅದನ್ನು ವಿಶ್ವದ ದೊಡ್ಡಣ್ಣ ಅಂತಾರೆ. ಯುರೋಪಿನ ಹಲವು ದೇಶಗಳು ಫ್ರಾಂಕ್ ಆಗಿ ಡುಯಿಷ್ ಮಾರ್ಕ್ ಜೊತೆಗೂಡಿ ಈಗ ನಿರ್ಭಿಡೆಯಿಂದ ಯುರೋಗಳಾಗಿವೆ. ಇನ್ನು ರಷ್ಯಾದ ರೂಬಲ್, ಪರ್ಷಿಯಾದ ದಿನಾರ್ ಜಪಾನಿನ ಯೆನ್ ಇದ್ದರೆ ಚೀನಾದ Yuan (CNY) RMB ಅಂತ ಕರೆಸಿಕೊಳ್ಳುತ್ತಾ ಅದರ ಉಚ್ಚಾರಣೆಯೇ ಅಲ್ಲಿನ ಅಧಿಕಾರ ಶಾಹಿಯಷ್ಟೇ ಕಠಿಣವಾಗಿವೆ.

ಇದು ಆಣೆಯ ಧನಾತ್ಮಕ ವಿಷಯ. ■



# ಐಹೇಟ್"ಭಾಂಡೀಜ್"

ಸಿ.ಎ.ವಿಲಾಸ ನಾ ಹುದ್ದಾರ

ಈಗಿನ ಮಕ್ಳು ಹಿರೇಮನಸ್ಯಾರ ಮಾತಾಡಿದ್ಹಂಗ ಮತ್ತ ಯಾರರೇ ಹೇಳಿಕೊಟ್ಟವರ್ಹಂಗ ಮಾತಾಡತಾರ, ಇದಕ್ಕ ತಾಜಾ ಉದಾಹರಣೆ, ನನ್ನ ತಂಗಿ ಶಿಲ್ಪಾ ಕಟ್ಟಿ ಮೊಮ್ಮಗಳು, ಈಶಾನ್ವಿ. ಈಗ ನಾಲ್ಕ ವರ್ಷದಿಂದ ತನ್ನ ಪಪ್ಪಾ ವಿನಯ ಉಗ್ರು ಮತ್ತ ಮಮ್ಮಾ ರಕ್ಷಿತಾಳ ಜೋಡಿ ಯು.ಎಸ್.ದೊಳಗ ಇರ್ತಾಳ. ಎಲ್ಲಾರಿಗೂ ಗೊತ್ತಿದ್ಹಂಗ ಅಲ್ಲೆ ನಿಮ್ಮ ಕೆಲಸಾ ನೀವ ಮಾಡ್ಕೋಬೇಕ. ಮುಸರಿ ತಿಕ್ಕಲಿಕ್ಕೆ (ಪಾತ್ರೆ ತೊಳಿಲಿಕ್ಕೆ), ಅರಿವೀ ವಗೀಲಿಕ್ಕೆ (ಬಟ್ಟೆ) ಯಾರೂ ಸಿಗೂದಿಲ್ಲ. ನಿಮಗ ಎಷ್ಟ ತ್ರಾಸ ಆದರೂ ನೀವ ಮಾಡ್ಕೋಬೇಕ. ಹಿಂಗಾಗಿ ರಕ್ಷಿತಾ ಭಾಂಡಿ ತಾನ ತೊಳ್ಕೋತಿದ್ಲು. ಒಂದ ದಿವಸ ರಕ್ಷಿತಾ ಭಾಂಡಿ ತಿಕ್ಕೋತ ನಿಂತಿದ್ಲು, ಈಶಾನ್ವಿ ಓಡಿ ಬಂದಾಕಿನ ತಿಕ್ಕಿ ಇಟ್ಟ ಭಾಂಡಿ ತೊಗೊಂಡ ಸಿಟ್ಟಿನಿಂದ ಜೋರ ನೆಲದ ಮ್ಯಾಲೆ ಒಗದ್ಲು. ರಕ್ಷಿತಾ ಆ ಭಾಂಡಿ ಸಪ್ಪಳಾ ಕೇಳಿ ಘಾಬರಿ ಆಗಿ ತಿರಿಗಿ ನೋಡೀದ್ರ ಈಶಾನ್ವಿ ಸಿಟ್ಟಿನಿಂದ ಆ ಭಾಂಡಿ ನೋಡ್ಕೋತ ನಿಂತಿದ್ಲು. ರಕ್ಷಿತಾ ಸಿಟ್ಟಿನಿಂದ,




"ಈಶು, ನಿನಗೇನ ತಲೀ ಗಿಲೀ ಕೆಟ್ಟದ ಏನ?."

"ಮತ್ತ ನೋಡಲಾ, ಈ ಭಾಂಡಿ ಮ್ಯಾಲೆ ನನಗ ಭಾಳ ಸಿಟ್ಟ ಬಂದದ.. ಐ ಹೇಟ್ ದೀಜ್ ಭಾಂಡೀಜ್.... ಈ ಭಾಂಡಿಗಳು ಯಾವಾಗಲೂ ನನ್ನ ಮಮ್ಮಾಗ ನನ್ನ ಜೋಡಿ ಸಂಜೀ ಮುಂದ ಇರಲಿಕ್ಕೆ ಬಿಡೂದೇ ಇಲ್ಲಾ.. ನನ್ನ ಮಮ್ಮಾ ಈ ಭಾಂಡಿಗಳನ್ನ ಯಾವಾಗಲೂ ತೊಳಕೋತ, ತೊಳಕೋತ ಇರ್ತಾಳ ... ನನ್ನ ಜೋಡಿ ಮಾತಾಡೂದೇ ಇಲ್ಲ.. ಈ ಭಾಂಡಿರೇ ತೊಳಿತಿರ್ತಾಳ ಇರ್ಲಿಕ್ರ ಅರಿವಿ ಒಣಗ ಹಾಕ್ತಿರ್ತಾಳ...".

ಆಕೀ ಮಾತ ಕೇಳಿ ಸಿಟ್ಟಿನಿಂದ ಮಗಳನ್ನ ಬೈಬೇಕ ಅಂತ ಮಾಡಿದಾಕಿ, ನಕ್ಕೋತ ಕಣ್ಣಾಗ ನೀರ ತುಂಬಕೊಂಡ ಮಗಳನ್ನ ಗಟ್ಯಾಗಿ ಅಪ್ಪಿಕೊಂಡ್ಳು.

"ಏನ ಮಾಡೋದು ಪುಟ್ಟಾ.. ನಿನಗ ಮಮ್ಮು ಮಾಡಬೇಕಂದ್ರ ಭಾಂಡಿ ತೊಳಿಯಬೇಕಲ್ಲಾ.." ಅಂತ ಹೇಳಿ ಮಗಳನ್ನ ಸಮಾಧಾನ ಮಾಡೀದ್ಲು.

ಮತ್ತೊಂದ ದಿವಸ ರಾತ್ರಿ ಈಶಾನ್ವಿನ ಮಲಗಸಬೇಕಾದ್ರ "ಮಮ್ಮಾ ಯಾರೂ ಸ್ಟಾರ್ ಆಗಬಾರ್ದು ನೋಡ?"

"ಯಾಕ ?"

"ಯಾಕಂದ್ರ ಅವರ ಸ್ಟಾರ್ ಆದ್ರ ನಮ್ಮನ್ನ ಬಿಟ್ಟ ಹೋಗ್ತಾರಲ್ಲಾ?"

ರಕ್ಷಿತಾಗ ಮಗಳ ಹಿಂಗ್ಯಾಕ ಅನ್ಲಿಕತ್ತಾಳ ಅಂತ ತಿಳೀಲಿಲ್ಲಾ. ಸುಮಾರು ಒಂದ ತಿಂಗಳದ ಮೊದಲೇಕ ಅವರ ಮನೀ ಹತ್ರ ಇದ್ದ ಒಬ್ಬ ಅಜ್ಜ ಮರಣ ಹೊಂದಿದ್ರು. ಅವರು ಪ್ರತಿ ದಿವಸ ಸಂಜೀ ಮುಂದ ಇವರ ಮನೀ ಮುಂದ ಹಾಯ್ದು ವಾಕಿಂಗ್ ಹೋಗ್ತಿದ್ರು. ಎರಡ–ಮೂರು ದಿವಸ ಅವರು ವಾಕಿಂಗ್ ಬರಲಾರದ್ದನ್ನ ನೋಡಿ ಈಶಾನ್ವಿ ಅಜ್ಜಾ ಯಾಕ ಬರ್ಲಿಕತ್ತಿಲ್ಲಾ ಅಂತ ಕೇಳಿದಾಗ ಏನ ಉತ್ತರಾ ಕೊಡಬೇಕಂತ ತಿಳೀಲಾರದ ಆ ಮೊಮೆಂಟನೊಳಗ ಅವರು ಸ್ಟಾರ್ ಆಗ್ಯಾರ, ಅವರು ಇನ್ನ ಮ್ಯಾಲೆ ಬರೂದಿಲ್ಲಾ ಅಂತ ಹೇಳಿದ್ದ ನೆನಪಾತು. ಮಗಳ ಮುಗ್ಧತೆಯ ಮಾತ ಕೇಳಿ ಅಳು ಬಂದ್ಹಂಗ ಆತಂತ.

ಹೋದ ತಿಂಗಳ ಈಶಾನ್ವಿ ಹುಟ್ಟಿದ ಹಬ್ಬ ಆತು. ಮುಂಜಾನೆ ಎದ್ದ ಕೂಡಲೇ ಪಪ್ಪಾ,ಮಮ್ಮಾಗ ಹೇಳ್ತಾಳಂತ, "ಆಲ್ ದೀಜ್ ಡೇಜ್ ಯು ವೆರ್ ನೊಟ್ ಲಿಸ್ನಿಂಗ್ ಟು ಮೀ.. ಟುಡೇ ಈಜ್ ಮೈ ಬರ್ಥ ಡೇ.. ಹೋಲ್ ಡೇ ಯು ಬೋಥ್ ಹ್ಯಾವ್ ಟು ಲಿಸನ್ ಟು ಮೀ.. " ಆಕೀ ಮಾತ ಕೇಳಿ ಇಬ್ಬರೂ ನಕ್ಕೋತ ಆಕೀನ ಎತ್ಕೊಂಡ್ ಮುದ್ದ್ಯಾಡಿದ್ರಂತ.

ಅವತ್ತ ಸಂಜೀ ಮುಂದ,

"ಮಮ್ಮಾ ನನ್ನ ನೀ ಪ್ಲ್ಯಾನೆಟ್ ನೋಡ್ಲಿಕ್ಕೆ ಕರ್ಕೊಂಡ ಹೋಗಿಲ್ಲಾ..." ಹುಟ್ಟಿದ ಹಬ್ಬದ ದಿವಸ ಮಗಳ ಬೇಡಿಕೆ.

"ಹೌದು, ಅದನ್ನ ನೋಡ್ಲಿಕ್ಕೆ ನಿನ್ನ ಎಲ್ಲಿ ಕರ್ಕೊಂಡ ಹೋಗ್ಬೇಕ?"

"ಅಪ್ ಇನ್ ದ್ ಸ್ಕೈ ಸ್ಪೇಸ್... "

"ಆಕಾಶಕ್ಕ ಹೆಂಗ ಹೋಗೋದು.. "

"ಅಷ್ಟ ತಿಳಿಯೂದಿಲ್ಲ ಏನ.. ರೊಕೆಟ್ ಶಿಪ್ ತೊಗೊಂಡು.."

"ಎಲ್ಲಿ ಸಿಗ್ತದ ಅದು ..."

"ಸ್ಪೇಸ್ ಮಾರ್ಕೆಟ್‌ದೊಳಗ.."

"ಯಾರ್‍ಯಾರ ಹೋಗೋಣು.. "

"ನಾನು ನೀನು.. ಇಬ್ರ ಹೋಗೋಣು... ಮತ್ಯಾರೂ ಬ್ಯಾಡ... "

ರಕ್ಷಿತಾ ಆಗಾಗ ಫೋನ್ ಮಾಡಿದಾಗ ಈಶಾನ್ವಿ ಮಾತುಗಳನ್ನ ಹೇಳ್ತಿರತಾಳ... ಐದು ವರ್ಷದ ಹುಡುಗಿ ಬಾಯಾಗ ಇಂಥಾ ದೊಡ್ಡ ದೊಡ್ಡ ಮಾತ ಕೇಳಿ ಅಜೀಬ ಅನಸ್ತದ. ಈಗಿನ ಮಕ್ಕಳಿಗೆ ಎಕ್ಸ್‌ಪೋಜರ್ ಭಾಳ ಸಿಗ್ತದ. ಈಗಿನ ಹುಡುಗ್ರು ಶ್ಯಾಣ್ಯಾರ ಇದ್ದಾರ.. ಹೌದಲ್ಲೋ ?

.................................... ಶ್ರೀ ಕೃಷ್ಣಾರ್ಪಣಮಸ್ತು ................................

■

# ಗೂಬೆ ಪುರಾಣ

ದಾ. ಭೀ. ಪ್ರಾಣೇಶ ರಾವ್




"ಅವರು ಸುಂಸುಮ್ನೆ ನನ್ನ ತಲೆ ಮೇಲೆ ಗೂಬೆ ಕೂಡಿಸಿದ್ದಾರೆ. ನಂಗೂ ಇದಕ್ಕೂ ಏನೇನೂ ಸಂಬಂಧ ಇಲ್ಲ" ಎಂದು ಹೇಳುತ್ತಾ, ಸೊರಬುಸ ಮಾಡಿಕೊಂಡು ಕಣ್ಣೀರು ಹಾಕಿದರು, ನನ್ನ ಹೆಂಡತಿಯ ಸ್ನೇಹಿತೆ. ನಾನು ಸುಮ್ಮನಿರಲಾರದೆ, "ಹೌದೇ? ಆದರೆ ಅದು ನಿಮ್ಮ ತಲೆ ಮೇಲೆ ಕಾಣಿಸ್ತಾನೇ ಇಲ್ಲ . ಅದು ಎಲ್ಲೋ ಹಾರಿ ಹೋಗಿದೆ. ನೀವು ಭಯದಿಂದ ಅದನ್ನು ತಲೆ ಒಳಗೆ ಬಿಟ್ಟು ಕೊಂಡಿದ್ದೀರಾ ಅಷ್ಟೇ" ಎಂದೆ. "ಅವರ ಸಂಕಟ ಅವರಿಗೆ, ನಿಮ್ಮ ತಮಾಷೆ ಸಾಕು, ಸುಮ್ನಿರ ಬಾರದೇ ?" ನನಗೆ ತಾಕೀತು ಮಾಡಿದಳು ನನ್ನ ಹೆಂಡತಿ.

"ಅಯ್ಯೋ!, ಅವರು ನೋವಿನಿಂದ ಅಲವತ್ತುಕೊಂಡು, ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ನಾನು ಕೇಳಲಾರದೆ ಸ್ವಲ್ಪ ತಮಾಷೆ ಮಾಡಿದೆ ಅಷ್ಟೇ" ಎಂದೆ. ನಮ್ಮ ಮಾತುಗಳನ್ನು ಕೇಳಿಸಿಕೊಂಡ ನಮ್ಮ ಅಜ್ಜಿ ಎದ್ದು ಬಂದು, "ಅಯ್ಯೋ ! ಇಂತಹ ಸುಳ್ಳು ಅಪವಾದ ಕೃಷ್ಣ ಪರಮಾತ್ಮನನ್ನೇ ಬಿಡಲಿಲ್ಲ. ಶಮಂತಕ ಮಣಿ ಕಥೆ ಕೇಳಿಲ್ಲವೇ? ನೀನು ಎಲ್ಲೋ, ಚೌತಿ ಚಂದ್ರನ ನೋಡಿರಬೇಕು" ಎಂದು ಹೇಳುತ್ತಾ, "ಒಂದು ಕೆಲಸ ಮಾಡು, ಹೇಗೂ ಮುಂದಿನ ಮಂಗಳವಾರ ಸಂಕಷ್ಟಹರವ್ರತ ಇದೆ. ಗಣಪತಿಗೆ ಹರಕೆ ಮಾಡಿಕೊಂಡು ದೇವಸ್ಥಾನದಲ್ಲಿ ನಿನ್ನ ಹೆಸರಿನಲ್ಲಿ ಪೂಜೆ ಮಾಡಿಸು. ಎಲ್ಲಾ ಸರಿ ಹೋಗುತ್ತೆ" ಎಂದು ಸಲಹೆ ಮಾಡಿದರು. "ಹಾ ! ಪಂಚಕಜ್ಜಾಯ, ಕಡಬು, ಮೋದಕ, ಪ್ರಸಾದ ನನಗೆ ತಂದು ಕೊಡುವುದು ಮರೀಬೇಡಿ" ಎಂದು ಹಾಸ್ಯ ಮಾಡಿದೆ ."ನೀವು ಸ್ವಲ್ಪ ಸುಮ್ನಿರಬಾರದೇ ?" ಗದರಿದಳು ನನ್ನ ಯಜಮಾನಿ. ಆಕೆ ಸ್ವಲ್ಪ ಸಮಾಧಾನದಿಂದ ಹೋದರು.

ಅವರು ಅಜ್ಜಿ ಹೇಳಿದ ಹಾಗೆ ಮಾಡಿದರೋ ಇಲ್ಲವೋ ನನಗೆ ತಿಳಿಯದು. ಆದರೆ ಅವರ ತಲೆ ಮೇಲೆ ಕೂತ ಗೂಬೆ ನನ್ನ ತಲೆ ಒಳಗೆ ಸೇರಿ ಕಾಡಿತು. ಯಾರು? ಯಾವಾಗ? ಎಲ್ಲಿ ? ಯಾಕೆ? ಯಾರ ತಲೆ ? ಗೂಬೆ ಕೂರಿಸಿದರು. ನಮ್ಮ ನಿತ್ಯ ಜೀವನದಲ್ಲಿ ಜನಜನಿತವಾಗಿರುವ ಈ "ತಲೆ ಮೇಲೆ ಗೂಬೆ ಕೂರಿಸಿದರು" ಎನ್ನುವ ಬಹು ಸಾಮಾನ್ಯ ಹೇಳಿಕೆಯ ಮೂಲ ಪತ್ತೆ ಮಾಡುವ ಯೋಜನೆ ಮಾಡುತ್ತಾ, ದಿನ ಪತ್ರಿಕೆ ಓದ ತೊಡಗಿದೆ (ವಿ. ಕ. 3 ಮೇ 2026). ಪುಟಗಳು ತಿರುವಿ ಕಣ್ಣಾಡಿಸುವಾಗ "ಅಪರೂಪದ ಗೂಬೆಯ ಆರ್ತನಾದ" ಎಂಬ ತಲೆಬರಹ ಕಾಣಿಸಿತು. ಏನನ್ನೋ ಹುಡುಕುವಾಗ ಅದು ಕಾಲಿಗೇ ತೊಡರಿದ ಹಾಗಾಯಿತು. ಕುತೂಹಲದಿಂದ ಲೇಖನ ಓದಲು ತೊಡಗಿದೆ.

ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತಿನ ಕೆಲವು ಪ್ರದೇಶಗಳಲ್ಲಿ ಸ್ವಲ್ಪ ಭಿನ್ನ ಪ್ರಭೇದಕ್ಕೆ ಸೇರಿದ ಅಳಿವಿನ ಅಂಚಿನಲ್ಲಿರುವ ಗೂಬೆಗಳು ವಾಸಿಸುತ್ತವೆ. ಅವುಗಳ ಅಧ್ಯಯನ ಮಾಡುತ್ತಿದ್ದ ಪರಿಸರ ವಿಜ್ಞಾನಿ ಪ್ರಸನ್ನ ಆಡುವಳ್ಳಿ ಎಂಬುವರ ಅನುಭವ ಕಥನವೇ ಲೇಖನದ ಸಾರಾಂಶ.

ಈಗ ಅಳಿವಿನ ಅಂಚಿನಲ್ಲಿರುವ ಕಾಡು ಗೂಬೆಯ ಜೋಡಿಯೊಂದು ಕಾಣಿಸಿ ಅವುಗಳ ಜಾಡು ಹಿಂಬಾಲಿಸುತ್ತಾ ಒಂದು ಮರದ ಪೊಟರೆಯಲ್ಲಿ ಅವು ವಾಸವಿದ್ದ ಗೂಡು ಕಾಣಿಸಿತು. ಗೂಡಿನ ಮರೆಯಲ್ಲಿ, ಕ್ಯಾಮರಾ ಹಿಡಿದು ಆ ಜೋಡಿಯ ಚಲನವಲನ ಗಮನಿಸುತ್ತಾ ಇರುವಾಗ ಗಂಡು ಗೂಬೆ ಎಲ್ಲೋ ಹಾರಿ ನಾಪತ್ತೆಯಾಯಿತು. ಸ್ವಲ್ಪ ಸಮಯದಲ್ಲೇ ಹೆಣ್ಣು ಗೂಬೆ ಮರಿಗಳಿಗೆ ಆಹಾರ ತರಲು ಹಾರಿತು. ವಿಜ್ಞಾನಿ, ಶಿಷ್ಯನನ್ನು ಬಳಿ ಕಾವಲು ಇರಿಸಿ ಕ್ಯಾಮರಾದೊಡನೆ ಹೆಣ್ಣು ಗೂಬೆಯನ್ನು ಹಿಂಬಾಲಿಸಿದರು. ಸ್ವಲ್ಪ ಹೊತ್ತಿಗೆ ಶಿಷ್ಯನು ಗಾಬರಿಯಿಂದ ಓಡಿಬಂದು "ಸರ್, ಬೇಗ ಓಡಿ ಬನ್ನಿ, ಅನಾಹುತವಾಗುತ್ತಿದೆ" ಎಂದ. "ಹೆಬ್ಬಾವು ಗೂಡಿನತ್ತ ಹರಿದು ಹೋಗುತ್ತಿದೆ. ಕಲ್ಲು ಹೊಡೆದು ಸಾಯಿಸಲೇ ?" ಎಂದು ಕೇಳಿದ. ವಿಜ್ಞಾನಿ, "ಬೇಡ ಅದರ ಆಹಾರ ಹುಡುಕಿಕೊಂಡು ತನ್ನ ಹಸಿವು ತೀರಿಸಿಕೊಳ್ಳಲು ಹೋಗುತ್ತಿದೆ" ಎಂದು ತಡೆದರಂತೆ. ಮರುಕ್ಷಣದಲ್ಲಿ ಹೆಬ್ಬಾವು ಗೂಡಿನೊಳಗೆ ಇದ್ದ ಮೂರು ಮರಿಗಳನ್ನು ಒಂದರ ಹಿಂದೆ ಒಂದರಂತೆ ನುಂಗಿ ಹಾಕಿತು. ಮೌನದಿಂದ ನೋಡುತ್ತಿದ್ದ ವಿಜ್ಞಾನಿಗೆ ಶಿಷ್ಯ ಕಣ್ಣೀರು ಹಾಕಿದ್ದು ಕಾಣಿಸಿತು. ಸ್ವಲ್ಪ ಹೊತ್ತಿನಲ್ಲೇ ಹೆಣ್ಣು ಗೂಬೆ ಗೂಡಿನತ್ತ ಧಾವಿಸಿ ಬಂತು. ಅದರ ಬಾಯಲ್ಲಿ ಒಂದು ಇಲಿ ನೇತಾಡುತ್ತಿತ್ತು. ಗೂಡಿನೊಳಗೆ ಇಣುಕಿ ನೋಡಿದ ಹೆಣ್ಣು ಗೂಬೆ ಮರಿಗಳನ್ನು ಕಾಣದೆ ಚೀರಾಡಿತು. ಈಗ ವಿಜ್ಞಾನಿಗೆ ಹಸಿದ ಹೆಬ್ಬಾವಿಗೆ ತನ್ನ ಆಹಾರ ಸೇವಿಸಲು ಅವಕಾಶ ಮಾಡಿದ ಅಪರಾಧ ಪಾಪಪ್ರಜ್ಞೆ, ತಾಯಿಯ ಗೋಳಾಟ ಕೇಳಲಾರದೆ ಕನಿಕರದ ದ್ವಂದ್ವ ಕಾಡಿತು.

ನನ್ನ ಆಲೋಚನೆಗೆ ಉತ್ತರ ಸಿಗದಿದ್ದರೂ ಪಶು ಪಕ್ಷಿಗಳಿಗೂ ಸಂಸಾರ ನಿಭಾಯಿಸಿ ಸಂಸಾರವನ್ನು ರಕ್ಷಿಸುವ ಸ್ವಭಾವ ಇದೆ ಎಂದು ತಿಳಿಯಿತು. ಪತ್ರಿಕೆಯನ್ನು ಓದಿದ ನಂತರ ನನ್ನ ಮೊಬೈಲ್ ನತ್ತ ಕಣ್ಣು ಹಾಯಿಸಿದೆ. "ಗೂಬೆಗೆ ಕಣ್ಣು ಕಾಣಿಸದಿದ್ದರೆ ಸೂರ್ಯನನ್ನು ಬಯ್ಯ ಬಹುದೇ" ಎಂಬ ಹೇಳಿಕೆ ಕಾಣಿಸಿತು. ಗೂಬೆಗಳಿಗೆ ಹಗಲಿನಲ್ಲಿ ಕಣ್ಣು ಕಾಣಿಸದ ವಿಷಯ ನೆನಪಾಯಿತು. ಹಿಂದೆಯೇ ಮಹಾಭಾರತದ ಪ್ರಸಂಗ ನೆನಪಿಗೆ ಬಂತು. ದುರ್ಯೋಧನನು ವೈಶಂಪಾಯನ ಸರೋವರದ ಬಳಿ ನಡೆದ ಗದಾಯುದ್ಧದಲ್ಲಿ ಭೀಮನ ಗದಾಪ್ರಹಾರದಿಂದ ತೊಡೆ ಮುರಿದು ಮಾರಣಾಂತಿಕ ನೋವಿನಿಂದ ನರಳುತ್ತಿದ್ದ. ಆಗ ದ್ರೋಣ ಪುತ್ರ ಅಶ್ವತ್ಥಾಮ ಅವನ ನರಳಾಟ ನೋಡಲಾರದೆ, ಸ್ವಾಮಿ ಭಕ್ತಿಯಿಂದ ಕೌರವ ಸೇನಾಧಿಪತ್ಯ ಸ್ವೀಕರಿಸಿ, ಪಾಂಡವ ನಿರ್ಮೂಲನ ಮಾಡುವ ಶಪಥ ಮಾಡುತ್ತಾ, ಪಾಂಡವ ಶಿಬಿರದತ್ತ ಹೊರಟ. ನಡುರಾತ್ರಿಯ ಕತ್ತಲಲ್ಲಿ ಒಂದು ಆಲದ ಮರದ ಬಳಿ ಕುಳಿತು ಭೀಮ-ಅರ್ಜುನರನ್ನು ಹೇಗೆ ಎದುರಿಸುವುದು ಎಂಬ ಚಿಂತೆಯಲ್ಲಿ ಮುಳುಗಿದ್ದ.

ಆಗ ಇದ್ದಕ್ಕಿದ್ದಂತೆ ಆ ಮರದ ಮೇಲಿನಿಂದ ನೂರಾರು ಕಾಗೆಗಳು ಉದುರಿ ಸತ್ತು ಹೆಣವಾಗಿದ್ದವು. ಗೂಬೆಗಳು ಅವುಗಳ ಮೇಲೆ ದಾಳಿ ನಡೆಸಿದ್ದವು. ಕಾಗೆ ಗೂಬೆಗಳ ಹಗೆತನ ತಿಳಿದ ಅಶ್ವತ್ಥಾಮ ಪಾಂಡವರನ್ನು ಅವರು ಅಸಹಾಯಕರಾಗಿ ನಿದ್ದೆಯಲ್ಲಿದ್ದಾಗಲೇ ಸಂಹರಿಸಲು ನಿರ್ಧರಿಸಿದ. ಪಾಂಡವ ಶಿಬಿರದ ಹೊರಗೆ ಕೃಪ, ಕೃತವರ್ಮರನ್ನು

ಕಾವಲಿರಿಸಿ, ಶಿಬಿರಕ್ಕೆ ಬೆಂಕಿ ಹತ್ತಿಸಿ, ನಿದ್ರಿಸುತ್ತಿದ್ದ ಉಪ ಪಾಂಡವರ ತಲೆಗಳನ್ನು ಕತ್ತಿಯಿಂದ ಕತ್ತರಿಸಿತಂದು ದುರ್ಯೋಧನನಿಗೆ ತೋರಿಸಿ ಸ್ವಾಮಿ ಭಕ್ತಿ ಮೆರೆದ. ವೈರಿಗಳನ್ನು ಅವರ ದೌರ್ಬಲ್ಯ,, ಅಸಹಾಯಕತೆಯ ಸಮಯದಲ್ಲಿ ಮಾಡಿ ಸಂಹರಿಸುವುದೇ ಅಶ್ವತ್ಥಾಮನ ರಣನೀತಿ ಆಗಿತ್ತು.

ಇತ್ತೀಚಿಗೆ ಭಾರತ ಪಾಕಿಸ್ತಾನದ ಮೇಲೆ "ಆಪರೇಷನ್ ಸಿಂಧೂರ" ತಂತ್ರದಿಂದ ಪಾಕಿಸ್ತಾನದ ಶಸ್ತ್ರಾಸ್ತ್ರಗಳನ್ನು ಧ್ವಂಸ ಮಾಡಿ ಧೂಳಿಪಟ ಮಾಡಿದ್ದು ನೆನಪಾಯಿತು. ಹೀಗೆ ಗೂಬೆಗಳ ಬಗ್ಗೆ ಆಲೋಚನೆ ಮುಂದುವರಿಯಿತು. ಲಕ್ಷ್ಮಿಯ ವಾಹನ ಗೂಬೆ, ಗೂಬೆ ಅಪಶಕುನ ಎಂದು ಕೆಲವರ ಭಾವನೆ. ಆದರೆ ವಾಸ್ತವವಾಗಿ ಗೂಬೆ ಒಂದು ರಾತ್ರಿ ಬೇಟೆಯ ಪಕ್ಷಿ. ನಿಶಾಚರಿ. ಸಾವಿರಾರು ಇಲಿಗಳನ್ನು ಬೇಟೆ ಮಾಡಿ ಕೃಷಿ ಬೆಳೆಗಳನ್ನು ರಕ್ಷಿಸುತ್ತದೆ. ಹೀಗೆ ಗೂಬೆ, ರೈತ ಮಿತ್ರ. ಪ್ರಕೃತಿಯ ಕೀಟನಾಶಕ. (ಇದು ಬೋಧಿವೃಕ್ಷ ಜುಲೈ 04, 2026).

ಪಂಚತಂತ್ರದ ಕಥೆಯೊಂದರಲ್ಲಿ ಗೂಬೆಗಳು ಜಾಣತನಕ್ಕೆ ಉದಾಹರಣೆ ಎನಿಸಿ ನನ್ನ ಪುಸ್ತಕ ಸಂಗ್ರಹದಲ್ಲಿ ಪಂಚತಂತ್ರ ಪುಸ್ತಕ ಹುಡುಕತೊಡಗಿದೆ. ಅದನ್ನು ನನ್ನ ಮೊಮ್ಮಗಳಿಗೆ ಕೊಟ್ಟಿರುವುದನ್ನು ಹೆಂಡತಿ ನೆನಪಿಸಿದರು. ನನ್ನ ಆಲೋಚನೆ ಮುಂದುವರೆದು ಕಣ್ಣು ಕಾಣದೆ, ಕಿವಿ ಕೇಳಿಸದೆ, ಮೂಲೆಯಲ್ಲಿ ಮುದುರಿ ಕುಳಿತ ಮುದುಕರನ್ನು "ಮುದಿ ಗೂಬೆಗಳು" ಎಂದು ಜರೆಯುವ ಅಮಾನವೀಯ, ಅಸಡ್ಡೆಯ, ಅತ್ಯಂತ ಬೇಸರದ, ಬೇಜವಾಬ್ದಾರಿತನದ ಮನುಷ್ಯರ ಕ್ರೂರ ನಡತೆ ಅಸಹನೀಯವೆನಿಸಿತು. ಗೂಬೆಗಳಿಗೆ ಮುದಿತನದ ಸಂಬಂಧ ಕಲ್ಪಿಸುವ ಜನರ ನಡತೆ ಅಸಹ್ಯವಾಯಿತು.

ಆಲೋಚನೆ ಮುಂದುವರೆದು, ಹಿಂದಿಯವರು ಗೂಬೆಗೆ ಮೂರ್ಖತನದ ನಂಟು ಕಲ್ಪಿಸುವ ವಿಚಾರ ನೆನಪಾಯಿತು. ಹಿಂದಿಯ "ಉಸ್ಕೋ ಮೈ ನೇ ಉಲ್ಲೂ ಬನಾಯಾ" ಅಥವಾ "ಉಸ್ನೇ ಮುಝೇ ಉಲ್ಲೂ ಬನಾಯಾ" ಅಂದ್ರೆ ನಾನು ಅವನನ್ನು ಗೂಬೆ ಮಾಡಿದೆ, ಅಥವಾ ಅವನು ನನ್ನನ್ನು ಗೂಬೆ ಮಾಡಿದ. "ಕ್ಯಾ ತುಂ ಮುಝೇ ಉಲ್ಲೂ ಸಮಝ್ತಾ ಹೈ"ಅಂದ್ರೆ ನೀನೇನು ನನ್ನನ್ನು ಗೂಬೆ ಅನ್ಕೊಂಡಿದ್ದೀಯಾ. "ಅರೇ ಉಲ್ಲೂ ಕೆ ಪಟ್ಠೇ, ಜರಾ ಸೋಚ್ಕೆ ಕಾಮ್ ಕರೋ" ಅಂದ್ರೆ "ಗೂಬೆ ನನ್ ಮಗನೇ, ಸ್ವಲ್ಪ ಬುದ್ಧಿ ಉಪಯೋಗಿಸಿ ಕೆಲಸ ಮಾಡು" ಈ ರೀತಿಯ ಹೇಳಿಕೆಗಳು ಅವರ ನಿತ್ಯ ಜೀವನದಲ್ಲಿ ಬಹು ಸಾಮಾನ್ಯ.

ನಾವು ಕನ್ನಡಿಗರೂ ಕಡಿಮೆ ಏನಿಲ್ಲ. ನಮ್ಮಲ್ಲೂ ಬೈಗುಳ ಪ್ರಿಯರು ಇದ್ದಾರೆ. "ಹೇ ಗೂಬೆ ನನ್ ಮಗನೇ" "ಗೂಬೆ ಬಡ್ಡಿ ಮಗನೇ" "ಗೂಬೆ ಮುಂಡೆ ಮಗನೇ" "ಗೂಬೆ ಸೂಳೇ ಮಗನೆ" ಎಂಬ ಬೈಗಳು ದಿನನಿತ್ಯದಲ್ಲಿ ಕೇಳಿಬರುತ್ತವೆ. ಮಹಿಳಾ ಮಣಿಗಳು ಸಹ "ಗೂಬೆ ಮುಂಡೇ" "ಗೂಬೆ ರಂಡೆ" ಎಂಬ ಪ್ರಯೋಗದಿಂದ ಸಮಾನತೆ ಮೆರೆಯುವುದು ಸಾಮಾನ್ಯ."ಸ್ವಲ್ಪ ಬರ್ತೀರಾ?" ಎಂದು ಅಡುಗೆ ಮನೆಯಿಂದ ಬಂದ ದನಿಯಿಂದ ನನ್ನ ಆಲೋಚನೆಗಳಿಗೆ ಬ್ರೇಕ್ ಬಿತ್ತು. ಗೂಬೆಗಳ ಸಂಸಾರ ನಿರ್ವಹಣೆ, ಮರಿಗಳ ಪೋಷಣೆ, ಹಗಲು ಕುರುಡು, ಕಾಗೆ ಗೂಬೆ ಹಗೆತನ, ಗೂಬೆಯ ಜಾಣತನ, ಮುದಿತನ–ಗೂಬೆಗಳಿಗೆ ಸಂಬಂಧ, ಹಿಂದಿಯವರಲ್ಲಿ ಗೂಬೆಗಳ ಮೂರ್ಖತನದ ನಂಟು, ಕನ್ನಡಿಗರಿಂದ ಬೈಗುಳಗಳಲ್ಲಿ ಗೂಬೆ ಪ್ರಯೋಗ. ಇದೆಲ್ಲ ಆದರೂ ನಮ್ಮ ಬದುಕಿನಲ್ಲಿ "ತಲೆ ಮೇಲೆ ಗೂಬೆ ಕೂರಿಸಿದರು" ಎಂಬ ಹೇಳಿಕೆಯ ಮೂಲ ತಿಳಿಯಲೇ ಇಲ್ಲ. ನಿಮಗೇನಾದರೂ ಗೊತ್ತಿದ್ದರೆ ದಯಮಾಡಿ ತಿಳಿಸುವಿರಾ ? ■

# ಪೈಲ್ವಾನ್ ರಂಗಪ್ಪನ ಡಯಟ್

ಇ.ಆರ್. ರಾಮಚಂದ್ರನ್, ಮೈಸೂರು.

'ಏನೂಂದ್ರೆ! ಇವತ್ತಿನ ಪೇಪರ್ ಓದಿದ್ರಾ? ಸರಿ, ಪೇಪರ್ನಲ್ಲಿ ನೀವು 'ಸ್ಟಡಿ' ಮಾಡೋದು ಬರೀ ಸಿನಿಮಾ ಸ್ಟಾರ್ಸ್ಗಳ ಪಿಕ್ಚರ್ರು, ಅಲ್ವಾ! ಇಲ್ಲಿ ಕೇಳಿ. ಇವತ್ತಿನ ಪೇಪರ್ನಲ್ಲಿ ಬಂದಿದೆ... ದಿನಕ್ಕೆ 5 ಸಾರಿ ಊಟ ಮಾಡಿದ್ರೆ, ಅದರಲ್ಲೂ ಬರೀ ತರಕಾರಿ, ಹಣ್ಣು ತಿಂದ್ರೆ ಆಯಸ್ಸು ಹೆಚ್ಚಾಗುತ್ತೆ ಅಂತ ಹೇಳಿದಾರೆ. ಹಾರ್ಟ ಅಟ್ಯಾಕ್ ನಾಲ್ಕು ಪರ್ಸೆಂಟು ಕಡಿಮೆ ಆಗುತ್ತಂತೆ. ಹಣ್ಣು ಹಂಪಲು ಜಾಸ್ತಿ ತಿಂದಷ್ಟು ನಾವು ಇನ್ನೂ ಜಾಸ್ತಿ ಬದುಕ್ತಿವಂತೆ! ಅಮೇರಿಕಾದ ಆಹಾರ ವಿಜ್ಞಾನದ ಸಂಸ್ಥೆ ಇದನ್ನು ಕಂಡುಹಿಡಿದಿದ್ದಾರೆ.'

ಈ ತರಹ ಇವ್ಳು ಶುರು ಮಾಡಿದ್ರೆ ಏನೋ ಡೇಂಜರ್! ಕೆಲ್ಸ ತಲೆ ಮೇಲೆ ವಕ್ರಿಸುತ್ತೆ. ಹುಷಾರಾಗಿರಬೇಕು..

'ಅಯ್ಯೋ! ನಿನ್ಗೆ ಹುಚ್ಚು! ಅವ್ರು ಬಿಡು. ಇದೆಲ್ಲಾ ಕಂಡು ಹಿಡಿದು ಮನೆಗೆ ಹೋಗಿ ಮೂರು ಬಾಟಲ್ ಬಿಯರ್, ನಾಲ್ಕು ಹ್ಯಾಂಬರ್ಗರ್, ಎರಡೆರಡು ಪೀಟ್ಸಾ, ಆರಾಮವಾಗಿ ಇಳಿಸ್ತಾರೆ. ಅವರ ರಿಸರ್ಚ ಪೇಪರ್ ಪಬ್ಲಿಷ್ ಆದಾಗ, ಸೆಲಿಬ್ರೇಷನ್ ಅಂತ ಚೀಸ್ ಬರ್ಗರ್, ಐಸ್ ಕ್ರೀಮು ಅಂತ ಇನ್ನು ಏನೇನೋ ತಿಂತಾರೆ! ಅವರ ಸಂಶೋಧನೆಯಿಂದ ನಮಗೆಲ್ಲಾ ಕೊನೆಗೆ ಕೊಡುವ ಉಪದೇಶ; 'ಯಥೇಚ್ಛವಾಗಿ ಹುಲ್ಲು ತಿನ್ನಿ, ಅದು ಹಲ್ಲಿಗೆ ಒಳ್ಳೇದು, ಅಲೋವೀರ ಕಷಾಯ ಕುಡೀರಿ, ಅದು ಜಠರಕೋಶದಲ್ಲಿರುವ ತನಕ ನಿಮಗೆ ಸ್ವೀಟು ಹತ್ರ ತಂದ್ರೇನೆ ಅಸಹ್ಯ, ವಾಕರಿಕೆ ಬರುತ್ತೆ' ಅಂತ ಭೋಧಿಸಿ, ಅವರ ಪ್ರತಿ ಪ್ಯಾಕೆಟ್ನಲ್ಲಿ ಚಾಕ್ಲೆಟ್ ತುಂಬಿಸ್ಕೊಂಡಿರ್ತಾರೆ!'

'ನೀವು ನಿಮ್ಮ ರಾಮಾಯಣ ಶುರು ಮಾಡ್ತೀರೀಂತ ನನಗೆ ಗೊತ್ತಿತ್ತು....ಪ್ರಿವೆನ್ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್' ಅಂತ ನನಗೆ ಮಾತು ಮಾತಿಗೂ ಲೆಕ್ಚರ್ ಹೊಡೀತೀರಲ್ಲ. ಬೇಗ ಹೋಗಿ ಒಳ್ಳೆ ತರಕಾರಿ, ಹಣ್ಣು ನೋಡಿ ತೊಗೊಂಬನ್ನಿ. ಈ ಎಕ್ಸ್ಪೆರಿಮೆಂಟ್ ಟ್ರೈ ಮಾಡೋಣ' ಅಂತ ಕೈಗೆ ಚೀಲ ಕೊಟ್ಲು.

ನನ್ನ ಬಾಯ್ನ ಹೇಗೆ ಮುಚ್ಚಿಸ್ಬೇಕೂಂತ ನನ್ನಾಕೆ ಮದುವೆ ಆದ ಎರಡನೇ ದಿನವೇ ತಿಳಕೊಂಡಿದ್ಲು. ನನ್ನ ಮಾತ್ನೇ ತಿರುಗಿಸಿ ನನ್ನ ಕಡೆ ಛೂ ಬಾಣ ಗುರಿತಪ್ಪದೆ ಬಿಡ್ತಾಳೆ.

ಅಮೆರಿಕನ್ ಸೈನ್ಟಿಸ್ಟ್ ಗಳಿಗೆ ಶಾಪ ಹಾಕ್ತಾ ಮಾರ್ಕೆಟ್ಗೆ ಹೊರಟೆ.

ನನಗೆ ಮೊದಲಿನಿಂದ ಎ ಫರ್ ಎಳ್ಚಿ ಹಣ್ಣು, ಬಿ ಫರ್ ಬನಾನ, ಸಿ ಫರ್ ಸೀತಾಫಲ, ಡಿ ಫರ್ ದಾಳಿಂಬೆ....ಕೆ ಫರ್ ಕೊಮ್ರಿಕೆ,ಕಲ್ಲಂಗ್ಡಿ ಹಣ್ಣು.... ಓ ಫರ್ ಆರೆಂಜ್ ಅದೆಲ್ಲಾ ಚೆನ್ನಾಗಿ ಗೊತ್ತು. ಚೆನ್ನಾಗಿ ಬಾಯಿ ಪಾಠ ಮಾಡಿದ್ದೆ, ನಾಲಿಗೆಲಿ ರುಚಿ ನೋಡಿರಲಿಲ್ಲ ಅಷ್ಟೆ.

ಹಣ್ಣುಗಳ ಬೆಲೆ ವಿಚಾರಿಸಿದಾಗ, ವಾಡಿಕೆ ಅಂಗಡಿಯ ಪುಟ್ಟತಾಯಮ್ಮನಿಗೆ ಆಶ್ಚರ್ಯ. ಇವನಿಗೆ ರಾತ್ರೋ ರಾತ್ರಿ ಯಾವುದೋ ಲಾಟ್ರಿ ಹೊಡೆದಿರಬೇಕು. ಇಲ್ದಿದ್ದರೆ ಬೆಟ್ಟುದ್ದ ಕಾಲ್ ಕಿಲೋ ಕೊಳ್ತಿರೋ ಬಾಳೇಹಣ್ಣಿಗೆ ಚೌಕಾಸಿ ಮಾಡೋವ್ನು ದಾಳಿಂಬೆ ಬೆಲೆ ಕೇಳ್ತಾನಲ್ಲಾಂತ.

ಎ ಫರ್ ಆಪೆಲ್ ಬೆಲೇ ಕೇಳ್ತೀನೇ ತಲೆ ತಿರುಗಿದ ಹಾಗೆ ಆಯ್ತು. ಅಮೇರಿಕನ್ ಸೈನ್ಟಿಸ್ಟ್ ಹೇಳಿದ ಹಾಗೆ, ನಿಂತಲ್ಲೇ ನೂರು ಪರ್ಸೆಂಟ್ ಹಾರ್ಟ ಅಟ್ಯಾಕ್ ಹೊಡೆಯುವ ಸಿಂಟಮ್ಸ್ ಬರೋ ಹಾಗೆ ಆಯ್ತು.




'ವಯ್ಯ! ನಿಮ್ಮ ಪಕ್ದಲ್ಲಿರೋ ಸ್ಟ್ಯಾಂಡ್ನ ಒಸಿ ಅಂಗೇ ಹಿಡ್ಕೊಳ್ಳಿ. ಈಗಿನ ಬೆಲೆ ಕೇಳಿದ್ರೆ ನಂಗೇ ಒಂದೊಂದು ಸಲ ಬವಳಿ ಬಂದ ಹಾಗೆ ಆಗುತ್ತೆ. ಕುಂತ್ಕೊಳ್ಳಿ. ನೀರು ಕೊಡ್ತೀನಿ. ಕುಡಿದು ಹೋಗೂ– ವ್ರಂತೆ. ನಮ್ಮುಡ್ಗ ನಿಮ್ಮನ್ ಮನೇಗೆ ಬಿಟ್ಟುಬರ್ತಾನೇ' ಅಂದ್ಲು ಮಹಾತಾಯಿ ಪುಟ್ಟತಾಯಿ.

ಸ್ವಲ್ಪ ಹೊತ್ತು ಹಾಗೇ ಚೇತರಿಸಿಕೊಂಡು ಮನೆಗೆ ಹೊರಟೆ. ದಾರೀಲಿ ಈರಯ್ಯನ ಅಂಗಡೀಲಿ ತರಕಾರಿಗಳ ಬೆಲೆ ವಿಚಾರಿಸಿದಾಗ ಒಂದೊಂದು ಬೆಲೇನೂ ಬೀದೀಲಿ ಅಲ್ಲಲ್ಲಿ ಲೂಸಾಗಿ ಬಿದ್ದಿರೋ ಬೆಸ್ಕಾಮ್ ವೈರ್ಮೇಲೆ ಕಾಲಿಟ್ಟು ಶಾಕ್ ಹೊಡೆಸ್ಕೊಂಡ ಹಾಗೆ ಆಯ್ತು. ಈರಯ್ಯ ಭಜಪದ ಭಕ್ತ ಬೇರೆ. 'ವಾಜಪಾಯಿ ಕಾಲದಿಂದಲೂ ನಮಗೂ ಈರುಳ್ಳಿಗೂ ಎಣ್ಣೆಸೀಗೇಕಾಯಿ ಸಂಬಂಧ. ಮೋದಿ ಬಂದ್ಮೇಲೆ ಟೊಮೇಟೋಗೂ ಅದೇ ಗತಿ ಆಗಿದೆ. ಬೆಲೆ ಆಕಾಶಕ್ಕೆ ಹತ್ತಿ ಕೂತಿದೆ' ಅಂದ. ಬಟಾಣಿ ಬೆಲೆ ಕೇಳಿದ ಮೇಲೆ ಉಬ್ಬುಸ ಬರೋಹಾಗೆ ಆಯ್ತು. ಈಗ ಕಿಲೊಗೆ ಹೇಳಲ್ಲಾ ಬೆಲೇನಾ, ಕಾಲ್ ಕಿಲೋಗೆ ಹೇಳ್ತಾರೆ!

ಈಗ ಎರಡು ಹೊತ್ತು ತಿನ್ನುವಾಗಲೇ ಹಣ್ಣು ತರಕಾರಿಗಳ ಬೆಲೆ ಬಲೂನಿನಂತೆ ಊದಿದೆ. ಇನ್ನು ಅಮೇರಿಕನ್ ಸೈನ್ಟಿಸ್ಟ್‌ಗಳು ಹೇಳಿದ ಹಾಗೆ ದಿನಕ್ಕೆ ಐದಾರು ಸರ್ತಿ ತಿಂದ್ರೆ, ನನಗೆ ನಾಲ್ಕು ಪರ್ಸೆಂಟು ಆಯಸ್ಸು ಹೆಚ್ಚಿಸಿ ನನ್ನ ಬ್ಯಾಂಕಿನ ಎಸ್. ಬಿ. ಅಕೌಂಟಿಗೆ ತೀರಾ ಅನೀಮಿಯಾ ಆಗಿ ಅದು ಆರ್ ಬಿ ಐ, ನ, ಐ ಸಿ ಯು, ಗೆ ಹೋಗಬೇಕಾಗುತ್ತೋ ಏನೋ.

ಹೀಗೆ ಯೋಚಿಸುತ್ತಾ ನಡೀತಿರುವಾಗ ದಾರೀಲಿ ಭಟ್ರ ಹೋಟೆಲ್ ಬಂತು. ಒಂದು ಕಾಫಿ ಕುಡಿದ್ರೆ ಹೇಗೋ ಮನೆ ತಲುಪ ಬಹುದು ಅನ್ನಿಸ್ತು.

ಇನ್ನೇನು ಒಳಗೆಹೋಗುವದಕ್ಕೆ ಸರಿಯಾಗಿ ನಮ್ಮ ಪೈಲ್ವಾನ್ ರಂಗಪ್ಪ ಫುಟ್ಪಾಥಿನಲ್ಲಿ ಸಿಕ್ದ. ರಂಗಪ್ಪ ಒಂದು ಕಾಲದಲ್ಲಿ ಹೆಸರುವಾಸಿ ಪೈಲ್ವಾನ್ ಆಗಿ ದೊಡ್ಡಣ್ಣ ಹಾಲ್ನಲ್ಲಿ ಒಂದು ಸಲ ದಾರಾಸಿಂಘ್ ಜೊತೆನೂ ಕುಸ್ತಿ ಮಾಡಿದ್ದ. ರಂಗಪ್ಪನ್ನೂ ಕಾಫಿಗೆ ಕರೆದು ಕೊಂಡು ಹೋದೆ.

'ಹ್ಯಾಗಿದೀಯ ರಂಗಪ್ಪ? ಆರೋಗ್ಯ ಚೆನ್ನಾಗಿದೆಯಾ'?

'ಚೆನ್ನಾಗಿದ್ದೀನ್ ವಯ್ಯ'.

'ಚೆನ್ನಾಗಿ ಕುಸ್ತಿ ಮಾಡಿದ ದೇಹ ನಿನ್ದು. ನಿನಗೆ ಈಗ ಎಂಬತ್ತೈದು ಆಗಿರ್ಬೇಕಲ್ವಾ'? ಅಂದೆ.

'ಐ! ಈ ಶ್ರಾವಣಕ್ಕೆ ತೊಂಬತ್ತು ತುಂಬ್ತದೆ ವಯ್ಯಾ' ಅಂತಾ ನಕ್ಕ. ಸಾಲಾಗಿ ಹೊಳೆಯುವ ಹಲ್ಲುಗಳು.

'ನಿನ್ನ ಚೆನ್ನಾಗಿ ನೋಡ್ಕೊಂಡಿದಾಳೆ ಚೆನ್ನಿ. ಈಗ ಏನ್ಮಾಡ್ಕೊಂಡಿದೀಯಾ ರಂಗಪ್ಪ?'

'ಮಕ್ಳ ಜೊತೆ ಹೊಲಕ್ಕೆ ಹೋಗಿ ಕೆಲ್ಸ ಮಾಡ್ತಿನಿ ವಯ್ಯ'.

'ಈ ವಯಸ್ಸನಲ್ಲಿ ಕೆಲ್ಸಾನಾ? ದಿನಾ ಏನು ಊಟ ಮಾಡ್ತಿ ರಂಗಪ್ಪ?'

'ವತ್ತಾರೆ ಚೆನ್ನಿ ಹುರಿಯಿಟ್ಗೆ ಹಾಲು ಬೆಲ್ಲ ಸೇರ್ಸಿ ಕೊಡ್ತಾಳೆ ವಯ್ಯ. ಊಟಕ್ಕೆ ರಾಗಿ ಮುದ್ದೆ, ಸೊಪ್ಪಿನ್ಸಾರು,ಕಚ್ಕೊಳೋಕೆ ಒಂದು ಈರುಳ್ಳಿ. ಸಂಜೇನೂ ಅದನ್ನೇ ಉಣ್ತಿನಿ. ಶನಿವಾರ, ಭಾನುವಾರ್ಕೆ, ಚೆನ್ನಿ ಜೋಳದ್ ರೊಟ್ಟಿ ಸುಡ್ತಾಳೆ. ಜೊತೆಗೆ ಸೊಪ್ಪಿನ್ ಪಲ್ಯ ಬೇಳೆ ಸಾರು. ಈಟು ತಿಂದ್ರೆ ಒಟ್ಟೆ ತುಂಬ್ತದೆ. ಮದುವೇ ಆದಾಗ್ನಿಂದ ಇದೆ ಊಣ್ತೀವಿ ವಯ್ಯ. ಮಕ್ಳು, ಮರಿಗ್ಳೂ ಇದೆ ಉಣ್ತವೆ'.

'ಅದ್ಕೇ ನೀನು ಪೈಲ್ವಾನ್ ಆದೆ. ಒಳ್ಳೇದು. ಮನೇ ಕಡೆ ಚೆನ್ನೀನ್ ಕರ್ಕೊಂಡು ಭಾನುವಾರ ಬಾ ರಂಗಪ್ಪ. ಒಟ್ಗೆ ಊಟ ಮಾಡೋಣ'.

'ನಿಮ್ಮ ಮನೇ ಒಸ್ದಾ ನಮ್ಗೆ. ಬರ್ತೀನಿ ವಯ್ಯ' ಅಂದ.

ಮನೇಗೆ ಹೋಗ್ತಾ ಅನ್ನಿಸ್ತು, ಈಗ ಇರೋ ಬೆಲೆಗಳು ಎಲ್ಲಾ ನೋಡಿದ್ರೆ, ಈ ಅಮೆರಿಕನ್ ಡೈಎಟ್ಟು  ಸ್ವಲ್ಪ ಎಡವಟ್ಟೆ! ಸಿಂಪಲ್ಲಾಗಿ ಒಳ್ಳೇ ಆಹಾರ ತಿಂದು ಎಷ್ಟು ಗಟ್ಟಿಮುಟ್ಟಾಗಿದಾನೆ ರಂಗಪ್ಪ.

ನನ್ನ ಹೆಂಡ್ತಿಗೆ ಆವರ ರಿಸರ್ಚ, ಇವರ ಪ್ರಾಕ್ಟಿಕಲ್ ಜೀವನಾನ ಪರಿಚಯ ಮಾಡ್ಸೋದು ಬಹಳ ಅಗತ್ಯ ಮತ್ತು ಅವಶ್ಯಕತೆ ಇದೆ ಅನ್ನಿಸ್ತು. ■

